ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 24 ಜೂನ್ 12, 2011 ರೂ. 5/- ಪುಟ 16





ಮಂಗಳೂರು :

ಬೀದಿ ವ್ಯಾಪಾರಿಗಳನ್ನು ಬೀದಿಗೆ ತಳ್ಳುವ ಹುನ್ನಾರ



ಯುಪಿಎ-II ಸರ್ಕಾರದ 2 ನೇ ವರ್ಷಾಚರಣೆ:

ಜನರ ಮೇಲೆ ಇನ್ನಷ್ಟು ಹೊರೆಯ ಸೂಚನೆ



ಆಟೋ ಚಾಲಕರ ಪ್ರಥಮ ರಾಜ್ಯ ಸಮ್ಮೇಳನ

ರಾಜ್ಯವ್ಯಾಪಿ ಸಂಘಟಿತರಾದ ಆಟೋ ಚಾಲಕರು



ಕೋಲಾರ :

ಭೂಮಿ-ನಿವೇಶನಕ್ಕಾಗಿ ರೈತ-ಕೂಲಿಕಾರರ ಪಟ್ಟು ಯಶಸ್ವಿ ಹಗಲುರಾತ್ರಿ ಧರಣಿ

2



ತಹ್ರೀರ್ ಚೌಕ ಸ್ಪೇನ್‌ಗೆ ಬಂತು

14



ಕೋಲಾರ

ಇದೊಂದು ಗಮನಿಸಬೇಕಾದ ಮುಖ್ಯ ಹೋರಾಟ. ರೈತರು – ಕೂಲಿಕಾರರು ಮನೆ-ನಿವೇಶನ, ಉಳುಮೆ ಭೂಮಿಯ ಹಕ್ಕಿಗಾಗಿ ಉದ್ಯೋಗ ಖಾತ್ರಿ ಕ್ರಮಗಳ ವಿರುದ್ಧ ಚಳುವಳಿಗಿಳಿದಾಗ ಇರುವ ಅವಕಾಶವನ್ನೂ ಬಡವರ ಪರವಾಗಿ ಬಳಸುವಲ್ಲಿ ವಿಫಲವಾದ ಆಡಳಿತ ವ್ಯವಸ್ಥೆಯು ಮುಖ ಸ್ಪಷ್ಟ ಗೋಚರವಾಯಿತು. ಪಟ್ಟು ಹಿಡಿದು ಹಗಲುರಾತ್ರಿ ಹೋರಾಟದ ನಡೆಸಿದಾಗ ಕೆಲವೊಂದು ಪ್ರಮುಖ ಬೇಡಿಕೆಗಳು ಈಡೇರುತ್ತವೆ ಎನ್ನುವುದು ಖಾತ್ರಿಯಾಯಿತು....

ಭೂಮಿ–ನಿವೇಶನಕ್ಕಾಗಿ ರೈತಕೂಲಿಕಾರರ ಪಟ್ಟು ಯಶಸ್ವಿ ಹಗಲು ರಾತ್ರಿ ಧರಣ

ರೈತರ ಬಗರ್ ಹುಕ್ಕುಂ ಸಾಗುವಳಿ ಭೂಮಿ ಸಕ್ರಮಕ್ಕೆ, ಬಡವರಿಗೆ ಮನೆ – ನಿವೇಶನ ಹಂಚಿಕೆಗಾಗಿ, ರೈತ, ಕೂಲಿಕಾರರಿಗೆ ಬ್ಯಾಂಕ್ ಸಾಲಕ್ಕಾಗಿ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಹೋರಾಟ ಸಮಿತಿಗಳ ವತಿಯಿಂದ ಮೇ 26 ಮತ್ತು 27 ರಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು ಹಮ್ಮಿಕೊಳ್ಳಲಾಗಿದ್ದ ಅನಿರ್ದಿಷ್ಟ ಹೋರಾಟ ಯಶಸ್ವಿಯಾಗಿ ನಡೆಯಿತು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೋಲಾರ ಜಿಲ್ಲೆಯ ಕೋಲಾರ, ಶ್ರೀನಿವಾಸಪುರ, ಬಂಗಾರಪೇಟೆ ತಾಲ್ಲೂಕುಗಳಲ್ಲಿ ಭೂ ಮಂಜೂರಾತಿ ಸಮಿತಿಗಳನ್ನು ರಚನೆ





ಮಾಡಿಲ್ಲ. ಇದರಿಂದ ಬಗರ್‌ಹುಕುಂ ಸಾಗುವಳಿದಾರರು ಆತಂಕಗೊಂಡಿದ್ದಾರೆ. ಜಿಲ್ಲೆಯಲ್ಲಿ ಫಾರಂ. 50 ಮತ್ತು 53 ಅನ್ನು ಅರ್ಜಿಗಳನ್ನು ಹಾಕಿ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೂ ರೈತರಿಗೆ ಮಂಜೂರು ಮಾಡದೆ ನಿರ್ಲಕ್ಷ್ಯ ವಹಿಸಿದೆ. ಜಿಲ್ಲೆಯಲ್ಲಿ ಬಗರ್‌ಹುಕುಂ ಸಕ್ರಮಕ್ಕೆ ಸಲ್ಲಿಸಿರುವ ಅರ್ಜಿಗಳು 68,401. ಈ ಪೈಕಿ ಸಕ್ರಮಗೊಳಿಸಿರುವ ಅರ್ಜಿಗಳು 23,404, ತಿರಸ್ಕೃತಗೊಳಿಸಿರುವ ಅರ್ಜಿಗಳು 30,402, ವಿಲೇವಾರಿಯಾಗದೇ ಉಳಿದಿರುವ ಅರ್ಜಿಗಳು 14,596, ತಿರಸ್ಕೃತ ಭೂಮಿ 41,078 ಎಕರೆ, ವಿಲೇವಾರಿಯಾಗದೇ ಉಳಿದಿರುವ ಅರ್ಜಿದಾರರ ಸ್ವಾಧೀನದಲ್ಲಿರುವ ಭೂಮಿ 8,902 ಎಕರೆ ಆಗಿದೆ. ಸಾವಿರಾರು ರೈತರು ಆತಂಕದ ನಡುವೆ ತಮ್ಮ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಹೀಗಾಗಿ 30–40 ವರ್ಷಗಳಿಂದ ತಮ್ಮ ಸ್ವಾಧೀನದಲ್ಲಿರುವ ಸುಮಾರು 20 ವರ್ಷಗಳ ಹಿಂದೆ ಅರ್ಜಿ ಹಾಕಿ ಸಕ್ರಮಕ್ಕಾಗಿ ಕಾಯುತ್ತಿರುವ ಬಗರ್‌ಹುಕುಂ ಸಾಗುವಳಿದಾರರು ತಮ್ಮ ಅರ್ಜಿಗಳನ್ನು ಸಕ್ರಮ ಮಾಡಲು ಅವಕಾಶವಾಗುವಂತೆ ತಕ್ಷಣ ಭೂ ಮಂಜೂರಾತಿ ಸಮಿತಿಗಳನ್ನು ರಚನೆ ಮಾಡಬೇಕು, ವಿನಾಕಾರಣ ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡಬೇಕು, ಹತ್ತಾರು ವರ್ಷಗಳಿಂದ ಭೂ ಸ್ವಾಧೀನದಲ್ಲಿರುವವರು ಹೊಸದಾಗಿ ಸಕ್ರಮಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕೊಡಬೇಕೆಂದು ಜಿಲ್ಲೆಯ ಕೋಲಾರ, ಶ್ರೀನಿವಾಸಪುರ ಇತ್ಯಾದಿ ತಾಲ್ಲೂಕುಗಳಿಂದ 3,388 ಅರ್ಜಿಗಳನ್ನು ಸಲ್ಲಿಸಲಾಗಿದೆ. ಇದೇ ರೀತಿಯಲ್ಲಿ ನಿವೇಶನ ರಹಿತ ಬಡವರಿಗೆ ನಿವೇಶನ ನೀಡಬೇಕೆಂದು 1,457 ಅರ್ಜಿಗಳನ್ನು ಅಕ್ಟೋಬರ್ 2010ರಲ್ಲಿ ಸಲ್ಲಿಸಿ, ಇವುಗಳನ್ನು ಇತ್ಯರ್ಥಪಡಿಸಲು ಒಂದೆರಡು ಹಂತದ ಹೋರಾಟಗಳನ್ನು ನಡೆಸಲಾಗಿತ್ತು. ಇದರ ಜೊತೆ ಕೋಲಾರ ಮತ್ತು ಶ್ರೀನಿವಾಸಪುರ ತಾಲ್ಲೂಕಿನ 7–8 ಬ್ಯಾಂಕ್ ಶಾಖೆಗಳಲ್ಲಿ ರೈತರಿಗೆ ವಿಶೇಷವಾಗಿ ಬಡ, ಮಧ್ಯಮ ರೈತರಿಗೆ ಹೊಸದಾಗಿ ಬ್ಯಾಂಕ್ ಸಾಲ ನೀಡಬೇಕೆಂದು 3,165 ಅರ್ಜಿಗಳನ್ನು ಸಲ್ಲಿಸಿ, ಸಾಲಕ್ಕಾಗಿ ಹಲವು ಬಾರಿ ಬ್ಯಾಂಕ್ ಅಧಿಕಾರಿಗಳನ್ನು ಭೇಟಿ ಯಾದರೂ ಪ್ರಯೋಜನವಾಗಲಿಲ್ಲ.

ಈ ಹಿನ್ನೆಲೆಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ, ಮನೆ ನಿವೇಶನಕ್ಕಾಗಿ, ರೈತ–ಕೃಷಿ ಕೂಲಿಕಾರರಿಗೆ ಬ್ಯಾಂಕ್ ಸಾಲ ನೀಡಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘವು ಜಿಲ್ಲೆಯಾದ್ಯಂತ ಹೋರಾಟ ಸಮಿತಿಗಳನ್ನು ರಚಿಸಿ, ಅನಿರ್ದಿಷ್ಟ ಹೋರಾಟ ಮಾಡಲು ನಿರ್ಧರಿಸಿತು. ಶ್ರೀನಿವಾಸ ಪುರ, ಕೋಲಾರ ತಾಲ್ಲೂಕಿನ ಸುಗಟೂರು,ಶಾಪೂರು ಗ್ರಾಮ ಗಳಿಂದ ಮೇ 25ರಂದೇ ಕಾಲ್ನಡಿಗೆ ಜಾಥ ಆರಂಭಿಸಿ ಮೇ 26 ರಂದು ಕೋಲಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಅನಿರ್ದಿಷ್ಟ ಹೋರಾಟವನ್ನು ಆರಂಭಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾಧ್ಯಕ್ಷ ಪಿ.ಆರ್.ಸೂರ್ಯನಾರಾಯಣ, ಕಾರ್ಯದರ್ಶಿ ಟಿ.ಎಂ.ವೆಂಕಟೇಶ್ ಮಾತನಾಡಿ ರೈತ ಕೂಲಿಕಾರರ ಸಮಸ್ಯೆಗಳನ್ನು ವಿವರಿಸಿ, ರಾಜ್ಯ ಸರ್ಕಾರವು ಕೂಡಲೇ ನಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಹೋರಾಟವನ್ನು ಮತ್ತಷ್ಟು


ಪುಟ 15 ಕ್ಕೆ

ದಲಿತ ಶ್ರಮಜೀವಿಗಳನ್ನು 'ದೂರವಿಟ್ಟ' ಕೋಲಾರ ಜಿಲ್ಲಾಡಳಿತ

2011 ಮೇ 23 ರಂದು ಸಿಐಟಿಯು ಸಂಯೋಜಿತ ಕೋಲಾರ ಜಿಲ್ಲಾ ಪೌರಕಾರ್ಮಿಕರ ಸಂಘವು 'ಪೌರಸೇವಾ ನೌಕರರ ಸ್ವಾಭಿಮಾನದ ಬದುಕಿಗಾಗಿ' ಮೆರವಣಿಗೆ ಹಾಗೂ ಜಿಲ್ಲಾಧಿಕಾರಿ ಕಛೇರಿ ಬಳಿ ಧರಣಿಯನ್ನು ಹಮ್ಮಿಕೊಂಡಿತ್ತು. ಕನಿಷ್ಠವೇತನ ನೀಡಬೇಕು, ಗುತ್ತಿಗೆ ವ್ಯವಸ್ಥೆಯನ್ನು ರದ್ದು ಮಾಡಬೇಕು, ಅಪಾಯಕಾರಿ ಸನ್ನಿವೇಷಗಳಲ್ಲಿ ಕೆಲಸ ಮಾಡುವ ನೌಕರಿಗೆ ಸುರಕ್ಷತಾ ಸಾಧನಗಳನ್ನು ಒದಗಿಸಬೇಕು, ಒಟ್ಟಾರೆಯಾಗಿ ಜೀತ ವ್ಯವಸ್ಥೆಗೆ ಮಂಗಳ ಹಾಡಿ ಗೌರವಯುತವಾದ ಬದುಕನ್ನು ಸಾಗಿಸಲು ಕ್ರಮಕೈಗೊಳ್ಳಬೇಕೆಂದು ಅಹವಾಲು ಸಲ್ಲಿಸುವುದು ಚಳುವಳಿಯ ಉದ್ದೇಶವಾಗಿತ್ತು.

ಮುಂಜಾನೆಯೆದ್ದು ನಗರ ಸ್ವಚ್ಛತೆಯ ಕೆಲಸ ಕಾರ್ಯಗಳನ್ನು ಮುಗಿಸಿದ

ಪುಟ 6 ಕ್ಕೆ



ಡಾ. ಅಮಿತ್ ಮಿತ್ರ : ಕಾರ್ಪೊರೇಟ್ ಪ್ರತಿನಿಧಿ ಈಗ ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ

- ತೃಣಮೂಲ ಕಾಂಗ್ರೆಸ್– ಕಾಂಗ್ರೆಸ್ ಸರಕಾರದಲ್ಲಿ ಹಣಕಾಸು ಮಂತ್ರಿಯಾಗಿರುವ ಡಾ. ಅಮಿತ್ ಮಿತ್ರ ಭಾರತೀಯ ಬಂಡವಾಳಿಗರ ಪ್ರಮುಖ ಸಂಘಟನೆ ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್(ಫಿಕಿ)ನ ಮಹಾಕಾರ್ಯದರ್ಶಿ. ಕೆಲವು ಕಂಪನಿಗಳ ಆಡಳಿತ ಮಂಡಳಿಗಳ ಭಾಗವಾಗಿರುವವರು. ವಿಧಾನ ಸಭಾ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸಿನ ಅಭ್ಯರ್ಥಿಯಾಗುವ ಮುನ್ನ, ಇವರನ್ನು ಆಗ ಕೇಂದ್ರ ಸರಕಾರ್ರದಲ್ಲಿ ರೈಲ್ವೆ ಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿ ರೈಲ್ವೆ ಪರಿಣತರ ಸಮಿತಿಯ ಅಧ್ಯಕ್ಷರಾಗಿ ನೇಮಿಸಿದ್ದರು.
- ಆದರೆ ಈತನ ಆರಂಭಿಕ ತರಬೇತಿ ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿಯಲ್ಲಿ ಎಂಬುದು ಬಹಳ ಮಂದಿಗೆ ಗೊತ್ತಿಲ್ಲ. ಈಗಲೂ ಬಿಜೆಪಿಯ ಹಲವು ಮುಖಂಡರು ಇವರ ಘನಿಷ್ಠ ಮಿತ್ರರು. ಭಾರತದ ನವ–ಉದಾರವಾದದ ಮುಖವಾಣಿಯಾಗಿರುವ ಫಿಕಿಯ ಮಹಾ ಕಾರ್ಯದರ್ಶಿಗೆ ಅದು ಅಸಹಜವೇನೂ ಅಲ್ಲ.
- ಆದರೆ ಈಗ ಈತ ತೃಣಮೂಲ ಕಾಂಗ್ರೆಸಿನ ಆರ್ಥಿಕ ಧೋರಣೆಯ ವಕ್ತಾರ ಎಂಬುದು ಕೆಲವರಿಗೆ ಅಸಹಜ ಎನಿಸಬಹುದು. ಅಮಿತ್ ಮಿತ್ರ ಸಿಂಗೂರಿನಲ್ಲಿ ಟಾಟಾ ಮೋಟರ್ಸ್ ಕಾರ್ಖಾನೆಯ ವಿರುದ್ಧ ತೃಣಮೂಲಿಗಳ ಚಳುವಳಿಯನ್ನು ವಿರೋಧಿಸಿದ್ದವರು. ಅದು ರಾಜ್ಯದ ಕೈಗಾರಿಕಾ ರಂಗದಲ್ಲಿ ಪ್ರಮುಖ ಬದಲಾವಣೆ ತರಲಿದೆ, ಅದು ಕೇವಲ ಒಂದು ಮೋಟಾರು ಪ್ರಾಜೆಕ್ಟಷ್ಟೇ ಅಲ್ಲ, ಹಲವಾರು ಉಪ ಉದ್ದಿಮೆಗಳಿಗೆ ಉತ್ತೇಜನೆ ಕೊಡುವಂತದ್ದು ಎಂದು ವಾದಿಸಿದ್ದರು. ಅಂದರೆ ಈಗ ಅಮಿತ್ ಮಿತ್ರ ತಮ್ಮ ನಿಲುವು ಬದಲಿಸಿದ್ದಾರೆಯೇ? ಅಥವ ತೃಣಮೂಲಿಗಳ ನಿಲುವು ಬದಲಾಗಿದೆಯೇ ಎಂಬುದಷ್ಟೇ ಪ್ರಶ್ನೆ.



- ಅಮಿತ್‌ಮಿತ್ರ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಬೆಂಬಲಿಸುವವರು. ಆದರೆ ತೃಣಮೂಲ ಕಾಂಗ್ರೆಸ್ ತನ್ನ 2009ರ ಲೋಕಸಭಾ ಚುನಾವಣೆಗಳ ಪ್ರಣಾಳಿಕೆಯಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ವಿರೋಧಿಸಿತ್ತು. ಅಮಿತ್ ಮಿತ್ರ ದೇಶದಲ್ಲಿ ಎಸ್‌ಇಝೆಡ್(ಮುಕ್ತ ಆರ್ಥಿಕ ವಲಯ) ಧೋರಣೆಯ ಪ್ರತಿಪಾದಕರು– ಇದಕ್ಕೆ ತಮಿಳುನಾಡು, ಗುಜರಾತದಲ್ಲಿ ಇರದ ವಿರೋಧ ಪಶ್ಚಿಮ ಬಂಗಾಲ ಮತ್ತು ಒರಿಸ್ಸಾದಲ್ಲಿ ಏಕೆ ಎಂದು ಕೇಳಿದ್ದವರು. ಅತ್ತ ತೃಣಮೂಲಿಗಳ ಲೋಕಸಭಾ ಸುನಾವಣಾ ಪ್ರಣಾಳಿಕೆ ಎಸ್ ಇಝೆಡ್ ಧೋರಣೆಗೆ ತಾನು ವಿರೋಧಿ ಎಂದು ಹೇಳಿಕೊಂಡಿತ್ತು. ಇಲ್ಲಿಯೂ ತಿಪ್ಪರಲಾಗ ಹಾಕಿದವರು ಯಾರು–ಅಮಿತ್ ಮಿತ್ರ ಅಥವ ತೃಣಮೂಲಿಗಳು?
- ಫಿಕಿಯ ಮಹಾಕಾರ್ಯದರ್ಶಿ ಯಾಗಿ ಅಮಿತ್ ಮಿತ್ರ 'ಶ್ರಮಶಕ್ತಿ ಸುಧಾರಣೆಗಳ' ನ್ನು ಅಂದರೆ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಬೇಕು ಎನ್ನುವುದನ್ನು ಬೆಂಬಲಿಸುವವರು. ಅವರ ಪ್ರಕಾರ ಈ 'ಸುಧಾರಣೆ'ಯ ಅರ್ಥ ಕಾರ್ಮಿಕರನ್ನು ಮನಬಂದಂತೆ ನೇಮಿಸಿಕೊಳ್ಳುವ, ತೆಗೆದು ಹಾಕುವ 'ಸ್ವಾತಂತ್ರ್ಯ'ವಷ್ಟೇ ಅಲ್ಲ, ಕಾಂಟ್ರಾಕ್ಟ್ ಕೂಲಿಗೂ ಅವಕಾಶ ಕಲ್ಪಿಸುವುದೂ ಇದರಲ್ಲಿ ಸೇರಿದೆ. ಇದು ಭಾರತದ ಆರ್ಥಿಕಕ್ಕೆ ಉತ್ತೇಜನೆ ಕೊಡಲು ಅಗತ್ಯ ಎಂದು ಪ್ರತಿಪಾದಿಸುವ ವ್ಯಕ್ತಿ ಈತ. ಇಂತವರನ್ನು ಹಣಕಾಸು ಮಂತ್ರಿಯಾಗಿಸಿರುವುದು ತೃಣಮೂಲ–ಕಾಂಗ್ರೆಸ್ ಕೂಟದ ಸರಕಾರದ 'ಪರಿವರ್ತನೆ'ಯ ಇನ್ನೊಂದು ಸೂಚನೆಯೇ?

"ಈ ವ್ಯಕ್ತಿ 1996ರಲ್ಲಿ ಎನ್ರೋನ್ ನ ಮೋಸದ ವ್ಯವಹಾರವನ್ನು ರದ್ದು ಮಾಡಬೇಕಾಗಿ ಬಂದಾಗ 'ನಾನು ಸಿಎನ್‌ಎನ್‌ಗೆ ಸ್ವತಃ ಹೋಗಿ ಆ ರದ್ದತಿಯನ್ನು ಖಂಡಿಸಿದ್ದೇನೆ' ಎಂದು ಹೆಮ್ಮೆಯಿಂದ ಹೇಳಿಕೊಂಡವರು. ಅದಕ್ಕೆ ಮೂರು ವರ್ಷಗಳ ಹಿಂದೆ ಈತ ಭಾರತ ಸರಕಾರ ಭಾರತೀಯ ಆರ್ಥಿಕವನ್ನು ಉದಾರೀಕರಿಸುವಂತೆ ಮಾಡಲು ಒಂದು 'ಚಿಂತಕರ ಚಾವಡಿ'ಯನ್ನು ರಚಿಸಿದ್ದಾರೆ ಎಂದು ಡ್ಯೂಕ್ ವಿಶ್ವವಿದ್ಯಾಲಯದ ವಾರ್ತಾಪತ್ರ ಪ್ರಕಟಿಸಿತ್ತು. ಅಂದರೆ, ತೃಣಮೂಲ ಕಾಂಗ್ರೆಸ್ ಕೂಟದ ಸರಕಾರದ 'ಪರಿವರ್ತನೆ'ಯಲ್ಲಿ ನವ–ಉದಾರವಾದಕ್ಕೆ ಬೆಂಬಲವೂ ಒಂದು ಮುಖ್ಯ ಅಂಶವಾಗಿರುತ್ತದೆಯೇ?

ಒಟ್ಟಿನಲ್ಲಿ ಪಶ್ಚಿಮ ಬಂಗಾಲದ ಹೊಸ ಹಣಕಾಸು ಮಂತ್ರಿ ತೃಣಮೂಲ ಕಾಂಗ್ರೆಸಿನ 'ಪರಿವರ್ತನೆ'ಯ ಜನಪರ ಮುಖವಾಡದ ಹಿಂದಿರುವ ನಿಜವಾದ ಜನ–ವಿರೋಧಿ ನವ–ಉದಾರವಾದಿ ಮುಖದ ಜೀವಂತ ಪ್ರತಿನಿಧಿ ಎಂಬುದರಲ್ಲಿ ಸಂದೇಹವಿಲ್ಲ. ●

ಜನದನಿಯಾಗದ ಮಾಧ್ಯಮಗಳು

ಹಾಸನದಲ್ಲಿ ಇತ್ತೀಚೆಗೆ ಜನಶಕ್ತಿ ವಾರ ಪತ್ರಿಕೆಯ ಪ್ರಸಾರಾಂದೋಲನದ ನೆವದಲ್ಲಿ ಒಂದು ಮಹತ್ತರ ಸಭೆ ನಡೆಯಿತು, ಈ ಸಭೆ ಸುಮ್ಮನೆ ಒಣಚರ್ಚೆ ನಡೆಸುವ ಸಭೆಯಾಗಿರಲಿಲ್ಲ ಅದೊಂದು ಜನರ ಮುಂದೆ ಮಾಧ್ಯಮಗಳ ಜನದ್ರೋಹದ ಕುರಿತ ಸುಧೀರ್ಘ ಸಂವಾದ ಹಾಗೂ ಮಂಥನ ಮತ್ತು ಈ ಮಾಧ್ಯಮಗಳ ವಂಚನೆಗಳಿಂದಾಗಿ ಯುವಜನ ಹಾಗೂ ಮುಂಬರುವ ದಿನಗಳಲ್ಲಿ ಪ್ರಜಾಸತ್ತೆಯ ಮೇಲೆ ಬೀರಬಹುದಾದ ಗಂಭೀರ ಪರಿಣಾಮಗಳ ಕುರಿತ ಗಂಭೀರ ಚರ್ಚೆಯಾಗಿತ್ತು. ಚರ್ಚೆಯಲ್ಲಿ ಭಾಗವಹಿಸಿದ್ದ ಸಭಿಕರ ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅವರೆಲ್ಲರೂ ಪ್ರಜಾಪ್ರಭುತ್ವೀಯ ಮೌಲ್ಯಗಳ ರಕ್ಷಣೆಗಾಗಿ ಚಿಂತಿಸುವವರು, ಹೋರಾಟ ನಡೆಸುವವರೂ ಆದ ಪತ್ರಕರ್ತರು, ಹೋರಾಟಗಾರರು, ಪ್ರಗತಿಪರ ಸಂಘಟನೆಗಳ ಮುಖಂಡರು, ವಿದ್ಯಾರ್ಥಿ–ಯುವಜನ ಪ್ರತಿನಿಧಿಗಳು ಆಗಿದ್ದದು ಸಂಖ್ಯೆಯನ್ನ ಬದಿಗೊತ್ತಿತ್ತು

ಜನಶಕ್ತಿ ಪತ್ರಿಕೆಯ ಸಂಪಾದಕ ಎಸ್.ವೈ.ಗುರುಶಾಂತ್ ಜನಶಕ್ತಿ ಪತ್ರಿಕೆಯ ಪ್ರಸಾರಾಂದೋಲನದ ಪ್ರಾಸ್ತಾವಿಕತೆಯನ್ನು ಮಾಡುತ್ತ ಸಭೆಯ ಮುಂದೆ ಹಲವಾರು ಗಂಭೀರ ಚಿಂತನೆ, ಪ್ರಶ್ನೆ ಹಾಗೂ ವಾಸ್ತವಗಳನ್ನು ತೆರೆದಿಟ್ಟಿದ್ದು ಎಲ್ಲರೂ ಗಂಭೀರವಾಗಿ ಚರ್ಚಿಸುವ ಅನಿವಾರ್ಯತೆ ಹುಟ್ಟಿಹಾಕಿತ್ತು.

90ರ ಪೂರ್ವದ ಮಾಧ್ಯಮಗಳು ಅದರಲ್ಲೂ ಪತ್ರಿಕೆಗಳಿಗೆ ಸಾಮಾಜಿಕ ಬದ್ಧತೆ, ಜನಪರ ಕಾಳಜಿ ಇತ್ತು ಆ ಕಾರಣದಿಂದಲೆ ಕರ್ನಾಟಕ ಏಕೀಕರಣ ಚಳುವಳಿ ಹಾಗೂ ಇಂದಿರಾಗಾಂಧಿಯ ಸರ್ವಾಧಿಕಾರಿ ಆಡಳಿತದ ವಿರುದ್ಧ ಜನಸಂಘಟನೆಯಲ್ಲಿ ಮಹತ್ತರ ಪಾತ್ರವಹಿಸಿದ್ದು ಇತಿಹಾಸ ಆದರೆ 90ರದಶಕದ ನಂತರ ಮಾಧ್ಯಮಗಳು ಜನರಿಂದ ವಿಮುಖರಾಗಿ ಜನದನಿಯಾಗದೆ, ನೊಂದವರಿಗೆ ಆಸರೆಯಾಗಿರದೆ ಕಾರ್ಪೊರೇಟ್ ಸಂಸ್ಥೆಗಳ ಮನಸಿನ ಭಾವನೆಗಳನ್ನ ವ್ಯಕ್ತಪಡಿಸುವ ಹಾಗೂ ಅವರ ಅಜೆಂಡಗಳನ್ನು ಬಲವಂತವಾಗಿ ಜನರಿಗೆ ಅಂಟಿಸುವ ಕನ್ನಡಿಗಳಾಗಿವೆ

ಸುದ್ದಿ ಬಿತ್ತರಿಸುವಾಗ ಈ ಕಾರ್ಪೊರೇಟ್ ಮಾಧ್ಯಮಗಳು ಗಂಭೀರ ವಿಷಯಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ ಅದರ ಹಿಂದಿರುವ ಸುದ್ದಿಗಳ ಸತ್ಯವನ್ನು ನಾಶಮಾಡಿ ತೇಲಿಬಿಡುತ್ತಿವೆ. ಇಡಿ ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ಸರ್ವೋಚ್ಚ ನ್ಯಾಯಾಲಯ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಹಾಗೂ ಮುಖ್ಯಮಂತ್ರಿಗಳು ಇಬ್ಬರೂ ಸೇರಿ ಸದನ ದುರ್ಬಳಕೆ ಮಾಡಿ ಶಾಸಕರನ್ನು ಅನರ್ಹಗೊಳಿಸಿ ಬಹುಮತ ಸಾಬೀತು ಮಾಡಿಕೊಂಡಿರುವ ಕ್ರಮವನ್ನು ಕಠೋರ ಶಬ್ಧಗಳಿಂದ ಖಂಡಿಸಿ ಅನರ್ಹತೆಯನ್ನು ವಜಾಗೊಳಿಸಿ 16 ಶಾಸಕರ ಶಾಸಕತ್ವವನ್ನು ಎತ್ತಿ ಹಿಡಿದು ಸದನ ದುರ್ಬಳಕೆ ಮಾಡಿದ ಅಸಂವಿದಾನಾತ್ಮಕ ಕ್ರಮದ ವಿರುದ್ಧ ಮುಖ್ಯಮಂತ್ರಿ ಹಾಗೂ ಸ್ಪೀಕರ್‌ಗೆ ಮುಖಸ್ತುತಿ ಮಾಡಿ ಹೊಣೆಗಾರರನ್ನಾಗಿ ಮಾಡಿದೆ. ಇದರ ವಿಶ್ಲೇಷಣೆಯನ್ನು ಈ ದೇಶದ ಯಾವ ಮಾಧ್ಯಮವೂ ಮಾಡದೆ ಜನರನ್ನು ಕತ್ತಲಲ್ಲಿ ಇಟ್ಟವು ಮಾತ್ರವಲ್ಲ ನ್ಯಾಯಾಲಯದ ಆದೇಶದನ್ವಯ ಕೇಂದ್ರಕ್ಕೆ ವರದಿ ಸಲ್ಲಿಸಿದ ರಾಜ್ಯಪಾಲರನ್ನು ಖಳನಾಯಕನಂತೆ ಬಿಂಬಿಸಿ ಭ್ರಷ್ಟ ಬಿಜೆಪಿ ಸರ್ಕಾರಕ್ಕೆ ಪೂರ್ಣ ಸೌಹಾರ್ದತೆ ಘೋಷಿಸಿದವು.

ದೇಶದೊಳಗೆ ಭೀಕರ ಬೆಲೆ ಏರಿಕೆ, ಖಾಸಗೀಕರಣ, ಸಾರ್ವಜನಿಕ ವಲಯಗಳಲ್ಲಿ ಬಂಡವಾಳ ವಾಪಸಾತಿ, ರೈತರ ಆತ್ಮಹತ್ಯೆ, ಬಡತನ, ಅನೈರ್ಮಲ್ಯ, ಅನಾರೋಗ್ಯ, ಮಹಿಳಾ ಶೋಷಣೆ, ಶಿಕ್ಷಣದ ವ್ಯಾಪಾರೀಕರಣ, ಎಸ್.ಈ.ಝೆಡ್‌ನ ರೈತ ಹಾಗೂ ಅಭಿವೃದ್ಧಿ ವಿರೋಧಿ ನಿಯಮಗಳು ತುಂಬಿ ತುಳುಕಾಡುತ್ತಿರುವಾಗ ಇವು ಯಾವುದೂ ನಮ್ಮ ಮಾಧ್ಯಮಗಳಿಗೆ ಗೋಚರಿಸುವುದೇ ಇಲ್ಲಾ ಮತ್ತು

ಪುಟ 6ಕ್ಕೆ

ಕಾರ್ಟೂನ್ ಕಾರ್ನರ್



ಜನದನಿಯಾಗದ ಮಾಧ್ಯಮಗಳು...

ಪುಟ 3 ರಿಂದ

ಮಹತ್ವವಾಗುತ್ತಲೇ ಇಲ್ಲ ದೃಶ್ಯ ಮಾಧ್ಯಮಗಳು ಜೋತಿಷ್ಯ, ಫ್ಯಾಷನ್ ಷೋ, ರಿಯಾಲಿಟಿ ಷೋಗಳಂತಹ ಅಸಾಮಾಜಿಕ ಕಾರ್ಯಕ್ರಮಗಳತ್ತ ಮುಖಮಾಡಿವೆ. ಪತ್ರಿಕೆಗಳು ಬ್ಲಾಕ್ ಮೇಲ್, ನಿತ್ಯ ಭವಿಷ್ಯ, ಸ್ವಾಮಿ-ಬಾಬಾಗಳ ಪೊಳ್ಳು ಪವಾಡಗಳನ್ನೇ ವೈಭವಿಕರಿಸಿ ಬಿತ್ತುತ್ತಿರುವುದು ಜಾತ್ಯಾತೀತ ವ್ಯವಸ್ಥೆಯನ್ನು ಅಸ್ಥಿರಗೊಳಿಸುವ ಹಿಡನ್ ತಂತ್ರವಾಗಿ ಗೋಚರಿಸುತ್ತಿವೆ. ಪತ್ತಿಕಾರಂಗ ಪತ್ರಿಕೋದ್ಯಮವಾಗಿ ಬದಲಾಗುತ್ತಿರುವುದು ಸಂವಿದಾನದ 4ನೇ ಅಂಗ ಬತ್ತಲಾಗುತ್ತಿರುವ ಭೀಕರ ಸತ್ಯ

ಸಮಯ-ಮುರುಗೇಶ್ ನಿರಾಣಿಯದು ಅದರ ಬಂಡವಾಳಗಾರ ಯಡಿಯೂರಪ್ಪನ ಮಗ ರಾಘವೇಂದ್ರನದು, ಜನಶ್ರೀ-ರೆಡ್ಡಿ ಕಂಪನಿಯದು, ಕಸ್ತೂರಿ-ಕುಮಾರಸ್ವಾಮಿಯದು, ಉದಯ-ಕರುಣಾನಿದಿ ಕುಟುಂಬದ್ದು, ಸ್ಟಾರ್-ರೂಪಟ್ ಮಾರ್ಡೂಕನೆಂಬ ಬೃಹತ್ ಬಂಡವಾಳಗಾರನದು ಸೋನಿ, ಝೀ ವಿದೇಶಿ ಬಂಡವಾಳಿಗರದು ಇವರುಗಳಿಂದ ಪ್ರಜಾಪ್ರಭುತ್ವ ಹಾಗೂ ಜರ್ನಲಿಸಂನ್ನು ರಕ್ಷಿಸಲು ಸಾಧ್ಯವೆ?

ಕಾರ್ಪೊರೇಟ್ ಗುಲಾಮರಾಗಿರುವ ಪತ್ರಿಕೋದ್ಯಮದ ನಡುವೆ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸುವ, ದುಡಿವಜನರ ಸಮಸ್ಯೆಗಳಿಗೆ ಸ್ಪಂದಿಸುವ, ಬಡವರ ದನಿಯಾಗುವ ಮಾದ್ಯಮಗಳ ಅವಶ್ಯಕತೆಯಂತೂ ಇದೆ. ಈ ನಿಟ್ಟಿನಲ್ಲಿ ಅಲ್ಪಸ್ವಲ್ಪ ಸ್ಥಳಿಯ ಪತ್ರಿಕೆಗಳು ಶ್ರಮಿಸುತ್ತಿವೆ. ಇವೆಲ್ಲದರ ಮಧ್ಯೆ ಜನಶಕ್ತಿ ವಿಭಿನ್ನ ಸುದ್ದಿ ವಿಶ್ಲೇಷಣೆ ನಡೆಸಿ ದುಡಿವ ಜನರ ಸಮಸ್ಯೆಗಳತ್ತ ಹೋರಾಟದ ದನಿಯಾಗಿ ಕಳೆದ 4 ವರ್ಷಗಳಿಂದ ದುಡಿಯುತ್ತಿದೆ. ಇದರ ಓದುಗರ ಸಂಖ್ಯೆ ಸುಮರು 5000 ಇರಬಹುದು. ಆದರೆ ನಾನು ಕಂಡಂತೆ ಇದರ ಓದುಗರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ವಸ್ತು ನಿಷ್ಟವಾಗಿ ವಿಶ್ಲೇಷಿಸುವ ಗುಣಗಳನ್ನು ಬೆಳೆಸಿಕೊಂಡಿರುವುದನ್ನು ಕಂಡಾಗ ಈ ಪತ್ರಿಕೆಯ ಗುರುತರ ಕೊಡುಗೆಯನ್ನು ಅಲ್ಲಗಳೆಯಲಾಗದು. ಜನಶಕ್ತಿ ಓದುವ ವಿದ್ಯಾರ್ಥಿ-ಯುವಜನ ಗಂಭೀರ ವಿಷಯಗಳ ಕುರಿತು ವಿಶ್ಲೇಷಿಸುವುದನ್ನು ಕಂಡಿದ್ದೇನೆ, ಯುವ ಬುದ್ದಿ ಜೀವಿಗಳಿಗೆ ಹೊಸ ಆಲೋಚನೆಯನ್ನ ಈ ಪತ್ರಿಕೆ ಕೊಡಲು ಸಾಧ್ಯವಾಗಿದೆ. ಪತ್ರಿಕೆ ಹಲವರಲ್ಲಿ ವಿವೇಚನಾ ಸಾಮರ್ಥ್ಯವನ್ನು ಹೆಚ್ಚಿಸಿದೆ. ಈ ಹಿನ್ನಲೆಯಲ್ಲಿ ಈ ಪತ್ರಿಕೆಯ ಕೊಡುಗೆ ಹಾಗೂ ಪ್ರಸಕ್ತ ಸನ್ನಿವೇಶದಲ್ಲಿ ಅದರ ಜವಾಬ್ದಾರಿಯ ಕುರಿತು ಸ್ಥಳಿಯ ಜನತಾಮಾಧ್ಯಮ ಪತ್ರಿಕೆಯ ಸಂಪಾದಕ ಆರ್.ಪಿ.ವೆಂಕಟೇಶಮೂರ್ತಿ ಸಾಕಷ್ಟು ಸಲಹೆ ನೀಡಿದ್ದಾರೆ. ಸ್ಥಳೀಯ ಸುದ್ದಿಗಳು ಇತರೆ ಪತ್ರಿಕೆಗಳಿಗಿಂತ ವಿಶೇಷವಾಗಿ ಮೂಡಿಬರಬೇಕು, ಜನಶಕ್ತಿ ಜನಪರ ಹೋರಟಗಳ ಕೈಪಿಡಿಯಾಗಿ ಕಾರ್ಯನಿರ್ವಹಿಸಬೇಕು, ಸ್ಥಳೀಯ ಪತ್ರಿಕೆಗಳಿಗೆ ಬೌದ್ಧಿಕ ನಾಯಕತ್ವ ನೀಡಬೇಕು, ಹೆಚ್ಚು ಜನ ಓದುವಂತೆ ಆಕರ್ಷಣಾ ಶೈಲಿಯಲ್ಲಿ ಮುಖಪುಟ, ಭಾಷೆಯಬಳಕೆ, ಎಲ್ಲಾ ವಿಭಾಗಗಳ ವಿಷಯ ಹಾಗೂ ವಿಷಯ ವಿಶ್ಲೇಷಣೆ, ಸೂಕ್ಷ್ಮ ಹಾಗೂ ತಾಜಾ ವಿಷಯ ಸರಳವಾಗಿ ನೀಡಬೇಕು ಎಂಬ ಸಲಹೆಯನ್ನು ಹಲವಾರು ಬುದ್ಧಿ ಜೀವಿಗಳು ನೀಡಿದರು.

ಪತ್ರಿಕೆ ಹೆಚ್ಚು ಜನರನ್ನು ಸಂಪರ್ಕಿಸಲು ಮೇಲಿನ ಅಂಶಗಳ ಜೊತೆಯಲ್ಲಿ ಜನಪರ ವಿಚಾರ ಹಾಗೂ ಹೋರಾಟ ರಾಜ್ಯ ಹಾಗೂ ದೇಶದ ಮೂಲೆ ಮೂಲೆಗಳಲ್ಲಿ ಏನು ನಡೆಯುತ್ತಿವೆ ಆ ಸುದ್ದಿ ಪತ್ರಿಕೆಯಲ್ಲಿ ವಿಶೇಷ ವಿಶ್ಲೇಷಣೆಯೊಂದಿಗೆ ಬರಬೇಕು ಹಾಗೂ ಅವರ ನಡುವೆ ಚಂದಾ ಅಥವ ಏಜೆನ್ಸಿ ರೂಪದಲ್ಲಿ ನಡೆಸುವ ಸಲಹೆಗಳು ಬಂದವು. ಸಭೆಯಲ್ಲಿ ಪ್ರತಿಯೊಬ್ಬರೂ ಕನಿಷ್ಠ 5 ಚಂದಾ ನೊಂದಾಯಿಸುವ ಜವಾಬ್ದಾರಿಯನ್ನು ಹೊತ್ತುಕೊಂಡರು. ಒಟ್ಟು ಜಿಲ್ಲೆಯಲ್ಲಿ ಕನಿಷ್ಠ 150 ಚಂದಾ ನೊಂದಾಯಿಸುವ ಜವಾಬ್ದಾರಿಯನ್ನು ಪ್ರಗತಿಪರ ಹೋರಾಟಗಾರರು ಹಾಗೂ ಚಿಂತಕರು ತೆಗೆದುಕೊಂಡದ್ದು, ಈ ದೇಶದ ಪ್ರಜಾಸತ್ತಾತ್ಮಕ ಮೌಲ್ಯ ಉಳಿಸುವ ನಿಟ್ಟಿನಲ್ಲಿ ಮೊಳಗಿದ ಸಣ್ಣ ದನಿ ಎಂದು ಹೆಮ್ಮೆಯಿಂದ ಹೇಳಬಹುದು. ಈ ಧ್ವನಿ ರಾಜ್ಯದ ಮೂಲೆ ಮೂಲೆಯಿಂದ ಮಾರ್ಧನಿಸಬೇಕಿದೆ. ಇದು ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಸಂಘಟನೆ, ವ್ಯಕ್ತಿ, ಬುದ್ದಿಜೀವಿಗಳ ಜವಾಬ್ದಾರಿ ಯಾಗಬೇಕಿದೆ.

● ಅಹಮದ್‌ಹಗರೆ,
ಹಾಸನ

ಬಾ.... ಬಾ.... ರಾಮದೇವ!

ಕ್ಯಾತೆ

ಈ. ಬಸವರಾಜು ಮಲ್ಲೇನಹಳ್ಳಿ

ಬಾಬಾ.. ರಾಮದೇವ ಬಾಬಾ.. ರಾಮದೇವ

ಏನಣ್ಣ, ಬಾಬಾ ರಾಮದೇವ ಅಂತ ಈಗ ಕರೀತಾ ಇದ್ದೀಯಲ, ಈಗೆಲ್ಲಿ ಬತ್ತನೆ ಅವ್ನು?

ಅವ್ನು ಓಗಿ ಒಂದು ಯುಗ ಕಳ್ದೇ ಓಗ್ಯದೆ!

ಯಣ್ಣ ನೀನು ಅಯೋಧ್ಯ ರಾಮ ಅನ್ಕಂಡಿದ್ದಿಯ? ನಾನು ಅಂತಾ ಇರದು ಬಾಬಾ ರಾಮದೇವುನ್ ಬಗ್ಗೆ.

ಅವ್‌ನ್ಯಾರಣ್ಣ, ಬಾಬಾ ರಾಮದೇವ? ಇದ್ಕಿದ್ದಂಗೆ ಪ್ರತ್ಯಕ್ಷ ಆದ್ನೆ?

ಅಂಗೇನಿಲ್ಲ, ನಮ್ ಕಡಿಕೆ ಈಗ್ ಬಂದವ್ನೆ, ಇಲ್ಲೀತಕ ಹರಿದ್ವಾರ್ದಲ್ಲಿ ತಪಸ್ ಮಾಡ್ತಾ ಇದ್ದ. ಅಲ್ಲೆ ಗಿಡಮೂಲ್ಕೆ ಔಸ್ತಿ ಅಂತ ಯೋಳ್ಕಂಡು ಮನುಸ್ಸರ ಮೂಳೆ ಪುಡಿನ್ನೂ ಬೆರ್ಸಿ ಜನಗಳಿಗೆ ಕೊಟ್ಕಂಡು ಯೋಗ ಮಾಡಿಕಂಡಿದ್ದ. ಅದು ಸಲ್ಪ ಕುದುರ್‍ತು. ಚನ್ನಾಗಿ ದುಡ್ ಮಾಡ್ದ. ಈಗ ನಮ್ ಕಡೀಕೆ ಕಾಲಿಟ್ಟವ್ನೆ.

ಯೋಗ ಅಂದ್ರೇನ್ ಮಾಡ್ತನೆ?

ನಾವು ಮೈಮುರ್ದು ಕ್ಯಲ್ಸ ಮಾಡ್ತಿವಿ". ಅವ್ನು ಅದ ಮಾಡದಿಲ್ಲ. ಅಣ್ಣು ಅಂಪ್ಲ ತಿನ್ಕಂಡಿರ್ತನೆ. ಅದ್ಕೆ ಕಸರತ್ ಮಾಡ್ತನೆ. ಅದ್ಕೆ ಯೋಗ ಅಂತರೆ. ಆದ್ರೆ ಅದು ಈಗ ವಳ್ಳೆ ಯಾಪಾರ ಆಗ್ಯದೆ. ಯಲ್ಲಾ ದುಡ್ಮೆಗಿಂತ ಅದೇ ಜಾಸ್ತಿ ಆಗ್ಯದೆ. ಅಂಗಾಗಿ ದೇಶ ಯಲ್ಲಾನು ಸುತ್ತಿ ದುಡ್ಮೆ ಮಾಡ್ತಾ ಅವ್ನೆ.

ನಮ್ಮೂರಿಗೂ ಕರುಸ್ಬೌದೇನಣ್ಣ.

ಕರುಸ್ಬೌದು.. ಆದ್ರೆ ಅದು ಮದ್ದೂರ್ ಕುಣ್ತ ಕರಿಸ್ದಂಗಲ್ಲ. ಅವ್ನು ಬರಕೆ ಸಿಕ್ಕಾಬಟ್ಟೆ ದುಡ್ ಕೊಡ್ಬೇಕು.

ಅದೆಷ್ಟೇಳಣ್ಣ. ಅಲ್ಲಿ ಇಲ್ಲಿ ಕಲೆಕ್ಟ್ ಮಾಡಿ ಕರ್‍ಸನ.

ಒಟ್ಟು ಸುಮಾರು ಏಳು ಲಕ್ಸ ಆದತಂತೆ, ಕರುಸ್ತಿಯ?

ಇದೇನಣ್ಣ, ನಂಬಕೆ ಆಯ್ತಾ ಇಲ್ಲ. ಇವ್ನು ಸಾವ್ರಕೆ ಬತ್ತನೆ ಅಂತ ಇದ್ರೆ ಲಕ್ಸ ಅಂತಿಯಲ? ಏನ್ ಮಾಡಕಂತೆ ಅಷ್ಟೊಂದ್ ದುಡ್ಡು?

ಅವ್ನು ಪೋಗ್ರಾಂ ಕೊಡ ಜಾಗ್ದಲ್ಲಿ ಚಪ್ರ, ಸಾಮಿಯಾನ ಹಾಕಕೆ ಅವ್ನೇ ತತ್ತನಂತೆ. ಅದ್ಕೆ ಮೂರೂವರೆ ಲಕ್ಸವಂತೆ. ಅವ್ನ ಪೋಗ್ರಾಂ ಒಂದ್ ಟೀವೀಲಿ ಬಂದತಂತೆ, ಅದ್ಕೆ ಒಂದೂವರೆ ಲಕ್ಸವಂತೆ. ಅವ್ನಿಗೆ, ಅವ್ನ ಜೊತೆ ಬರರಿಗೆ ಊಟಕ್ಕೆ 50 ಸಾವ್ರವಂತೆ. ಇನ್ನ ಅದೂ ಇದೂ ಅಂತವ ಒಟ್ಟು ಏಳು ಲಕ್ಸ ಆದತಂತೆ.

ಅಂಗಾರೆ ಅವ್ನು ಅಲ್ಲೇ ಇರ್ಲಿ. ಅಂತ ಮನ್ಸುನ್ನ ನೀನು ಬಾಬಾ ಅಂತಾ ಇದ್ದೀಯಲ, ನಿಂಗೇನಾರ ಬುದ್ದಿಲ್ವೆ?

ನಾನು ಬಾಬಾ ಅಂದದ್ದು ನಮ್ಮೂರಿಗೆ ಕರ್‍ಸಕ್ಕಲ್ಲ. ಬೆಂಗ್ಳೂರಿಗೆ ಬಾ ಅಂತವ.

ಬೆಂಗ್ಳೂರಿಗ್ಯಾಕೆ?

ಈಗ ಅವ್ನು ಡೆಲ್ಲೀಲಿ ಉಪ್ವಾಸ ಕೂತ್ಕತಾ ಅವ್ನಂತೆ. ಅದ್ಕೆ ಡೆಲ್ಲಿಲಿ ಯಲ್ಲ ಕೂತ್ಕತರೆ. ನೀನು ಬೆಂಗ್ಳೂರಿಗ್ ಬಾರಪ್ಪ ಕೂತ್ಕೋ ಅಂತ ಕರ್ಯನ ಅಂತ ಇದ್ದಿನಿ.

ಡೆಲ್ಲೀಲಿ ಯಾಕ್ ಉಪ್ವಾಸ ಕೂತ್ಕತಾ ಇದ್ದನು?

ಬ್ರಷ್ಟಾಚಾರುದ್ ವಿರುದ್ವಂತೆ. ಅಣ್ಣಾಅಜಾರೆ ಬ್ರಷ್ಟಾಚಾರದ್ ವಿರುದ್ದ ಡೆಲ್ಲೀಲಿ ಉಪ್ವಾಸ ಕೂತ್ಕಂಡು ಚನ್ನಾಗಿ ಯಸ್ರುವಾಸ್ಗೆ ತಗಂಡ್ರು, ಅದ್ಕೆ ನಾನೇನ್ ಕಡ್ಮೆ ಅಂತ ಇವ್ನು ಓಗಿ ಕೂತ್ಕತಾ ಇರ್ಬೌದು.

ಇವ್ನ ನೋಡಿದ್ರೆ ಸನ್ಯಾಸಿ. ಅವ್ನಿಗ್ಯಾಕೆ ಯಸ್ರುವಾಸ್ಗೆ? ಅಣ್ಣಾಅಜಾರೆ ಕೂತಿದ್ದಾಗ್ಲೇ ಇವ್ನೂ ಓಗಿ ಕೂತ್ಕಳದ್ ಬುಟ್ಟು ಈಗ್ಯಾಕೋಗ್ಯವ್ನೆ?

ಅಣ್ಣಾಅಜಾರೆ ಪ್ರದಾನ್ ಮಂತ್ರಿ, ಜಡ್ಜುಗಳು ತಪ್ ಮಾಡಿದ್ರೂ ಅವ್ರ ಮ್ಯಾಲೆ ವಿಚಾರ್ಣೆ ಮಾಡಕೆ ಅವ್ಕಾಶ ಇರ್ಬೇಕು ಅಂತ ಅಂದ್ರೆ ಈ ರಾಮದೇವ ಅಂತ ದ್ವಡ್ಡರ್ನೆಲ್ಲ ಮುಟ್‌ಬಾರ್ದು ಅಂದ್ನಂತೆ. ಅದ್ಕೆ ಅಜಾರೆ ನೀನು ಎದ್ದು ಓಗಯ್ಯ ಅಂತ ಓಡ್ಸಿದ್ನಂತೆ.

ನ್ಯಾಯ ಅಂದ್‌ಮ್ಯಾಲೆ ಯಲ್ಲಾಗ್ರೂ ಒಂದೆಯಪ್ಪ, ಈ ರಾಮ್‌ದೇವ ಯಾಕೆ ಅವ್ರ ಪರ ಇದ್ದನು?

ಪ್ರದಾನಿ ಮಂತ್ರಿ ಏನಾರ ನಮ್ ಯಡೂರಪ್ಪುನ್ ತರ ಸ್ವಾಮಿಗಳಿಗೆ ದುಡ್ ಕೊಟ್ ಮಡಿಕಂಡಿದ್ದನೆ?

ದುಡ್ ಗಿಡ್ ಕೊಟ್ಟಿರದು ಗೊತ್ತಿಲ್ಲ. ಆದ್ರೆ ಈ ರಾಮ್‌ದೇವ ಯಾಕಿಂಗ್ ಮಾತಾಡ್ತಾ ಇದ್ದನು ಅಂತ ಯಲೆ ಅಡ್ಕೆ ಆಕ್ಯಂಡು ಬೈದ್ರಂತೆ, ಅದ್ಕೆ ಈಗ ಆಯ್ತು ಯಲ್ಲಾರ್ರೂ ತನ್ಕೆ ಮಾಡ್ಬೇಕು ಅಂತ ಒಪ್ಕಂಡವ್ನೆ.

ಈಗ ನಮ್ ಯಡೂರಪ್ನೂ ಭ್ರಷ್ಟಾಚಾರ ಮಾಡಿ ತಿಂದು ಅರಗಿಸ್ಕಳ ಕಾಗ್ದೇ ವದ್ದಾಡ್ತಾ ಅವ್ನೆ, ರಾಮದೇವ ಇಲ್ಲೇ ಬೆಂಗ್ಳೂರಿಗ್ ಬಂದು ಯಡೂರಪ್ಪುನ್ ಮನೆ ಮುಂದೋ, ವಿದಾನಸೌದುದ್ ಮುಂದೋ ಉಪ್ವಾಸ ಕೂತ್ಕಂಡ್ರೆ ಪ್ರಪಂಚಕ್ಕೆಲ್ಲ ಗೊತ್ತಾಯ್ತದಪ್ಪ!

ಏ ಅವ್ನು ಬಿಜೇಪಿಯವ್ರ ವಿರುದ್ದ ಅಂಗ್ಯಲ್ಲ ಮಾತಾಡದಿಲ್ಲ. ಅಂಗ್ ಮಾಡಂಗಿದ್ರೆ ಓದ್ವಾರ ಮೈಸೂರಿಗೆ ಯೋಗ ಮಾಡ್ತಿನಿ ಅಂತ ಬಂದಿದ್ನಲ, ಆಗ ಒಂದ್ ಮಾತ್ನೂ ಯಡೂರಪ್ಪುನ್ ವಿರುದ್ದ ಮಾತಾಡಿಲ್ಲ, ಇನ್ನ ಅವ್ನ ವಿರುದ್ದ ಉಪ್ವಾಸ ಕೂತ್ಕಂಡನೆ!

ಅದ್ಯಾಕಂಗೆ?

ಅವ್ನಿಗೆ ಬೀಜೇಪಿ ಅಂದ್ರೆ ಬಾಳ ಪ್ರೀತಿ ಅಂತೆ. ಅದ್ಕೆ ಅವ್ರ ವಿರುದ್ದ ಮಾತಾಡದಿಲ್ಲ. ಅಣ್ಣಾ ಅಜಾರೆ ಪ್ರಚಾರ ಕಡ್ಮೆ ಆಗಿ ನಂದು ಜಾಸ್ತಿ ಆಗ್ಲಿ ಅಂತ ಕೂತಿರ್ಬೌದು. ನಾವು ಓಗಿ ನ್ಯಾಯ್ವಾಗಿ ಓರಾಟ ಮಾಡಂಗಿದ್ರೆ ಯಲ್ಲಾರ್ ವಿರುದ್ದ ಮಾಡು, ಇಲ್ದಿದ್ರೆ ಎದ್ ಮನಿಗೋಗಯ್ಯ ಅನ್ನನ.

ಊ.. ನಡಿ ಓಗನ. ●

ಯುಪಿಎ-2 ಸರ್ಕಾರದ 2ನೇ ವರ್ಷಾಚರಣೆ

ಎರಡು ವರ್ಷ ತುಂಬಿದ ಸಂದರ್ಭದಲ್ಲಿ ಪ್ರಧಾನಿಗಳ ಮಾತಿನಲ್ಲಿ ಬೆಲೆ ಏರಿಕೆ ಬಗೆಗೆ, ಭ್ರಷ್ಟಾಚಾರದಿಂದಾದ ನಷ್ಟ ವಸೂಲಾತಿ ಬಗೆಗೆ ಮಾತೇ ಇಲ್ಲ. ಆದರೆ...

ಜನರ ಮೇಲೆ ಇನ್ನಷ್ಟು ಹೊರೆಯ ಸೂಚನೆ

ಸೀತಾರಾಂ ಯೆಚೂರಿ

ಕನ್ನಡಕ್ಕೆ: ಅಪ್ಪು

ಪ್ರಸ್ತುತ ಯುಪಿಎ-2 ಸರ್ಕಾರದ ಎರಡನೇ ವಾರ್ಷಿಕೋತ್ಸವವನ್ನು ಪ್ರಧಾನಿ ಮನಮೋಹನ್ ಸಿಂಗ್ ಎಂದಿನಂತೆ ಮೈತ್ರಿ ಪಕ್ಷಗಳಿಗೆ ಬೋಜನ ಕೂಟವನ್ನು ಏರ್ಪಡಿಸುವ ಮೂಲಕ ಆಚರಿಸಿದರು. ಮತ್ತು ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ಭಾಷಣ ಇರುವ 'ಜನತೆಗೆ ವರದಿ' (ರಿಪೋರ್ಟ್ ಟು ದಿ ಪೀಪಲ್) ಬಿಡುಗಡೆ ಮಾಡಲಾಯಿತು.

ಈ ಬೋಜನ ಕೂಟದ ಸಂದರ್ಭದಲ್ಲಿ ಎಂದಿನಂತೆ ತೆಗೆಸಿಕೊಳ್ಳುವ ಪೋಟೋ ಸೆಷನ್ ಮಾತ್ರ ಯುಪಿಎ-1ರೊಂದಿಗೆ ಹೋಲಿಸಿದರೆ ಸಂಪೂರ್ಣ ತದ್ವಿರುದ್ಧವಾಗಿತ್ತು. ಈ ಸಂದರ್ಭದಲ್ಲಿ ಗೈರುಹಾಜರಿದ್ದುದು, ಯುಪಿಎ-1 ಮೈತ್ರಿಕೂಟದಲ್ಲಿ ಅತಿದೊಡ್ಡ ಬೆಂಬಲ ಕೂಟವಾಗಿದ್ದು, ಹೊರಗಡೆಯಿಂದ ಬೆಂಬಲ ನೀಡಿದ್ದ ಎಡಪಕ್ಷಗಳು. ಯುಪಿಎ-1ರಲ್ಲಿದ್ದು ಈಗ ಕಾಣದಿದ್ದ ಮತ್ತಿತರ ಮೈತ್ರಿ ಪಕ್ಷಗಳೆಂದರೆ ಲಾಲೂ ಪ್ರಸಾದ್ ಯಾದವ್ ಅವರ ಆರ್‌ಜೆಡಿ ಮತ್ತು ರಾಮ್‌ವಿಲಾಸ್ ಪಾಸ್ವಾನ್ ಅವರ ಲೋಕ್ ಜನಶಕ್ತಿ ಪಕ್ಷ. ಯುಪಿಎ-2ರಲ್ಲಿರುವ ಡಿಎಂಕೆಯ ಎಲ್ಲ ಸಚಿವರು, ಡಿಎಂಕೆ ಅದಿನಾಯಕ ಎಂ.ಕರುಣಾನಿಧಿ ಪುತ್ರಿ ಮತ್ತು ರಾಜ್ಯಸಭಾ ಸದಸ್ಯೆ ಕನಿಮೊಳಿ ಜೊತೆಗೆ ಎ.ರಾಜಾ ತಿಹಾರ್ ಜೈಲಿನಲ್ಲಿರುವುದು ಹೊರತುಪಡಿಸಿದರೆ, ಉಳಿದೆಲ್ಲ ಸಚಿವರು ಗೈರುಹಾಜರಾಗಿದ್ದರು. ಟಿ.ಆರ್. ಬಾಲು ಒಬ್ಬರು ಮಾತ್ರವೇ ಔತಣಕೂಟದಲ್ಲಿ ಪಾಲ್ಗೊಂಡಿದ್ದ ಡಿಎಂಕೆಯ ಪ್ರತಿನಿಧಿಯಾಗಿದ್ದರು. ಇದು ಯುಪಿಎ ಸರ್ಕಾರ ಕುರಿತು ಡಿಎಂಕೆ ಸರ್ಕಾರ ಎಷ್ಟು ಬೇಸರಗೊಂಡಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಅದೇ ರೀತಿ ಯುಪಿಎ-1 ಮೈತ್ರಿಕೂಟದಲ್ಲಿದ್ದ ಟಿಆರ್‌ಎಸ್, ಎಂಡಿಎಂಕೆ ಪಕ್ಷಗಳು ಔತಣಕೂಟದಲ್ಲಿ ಇರಲಿಲ್ಲ. ಎನ್‌ಸಿಪಿ ಮಾತ್ರವೇ, ಮೂಲತಃ ಯುಪಿಎ-1 ಮೈತ್ರಿಯಲ್ಲಿದ್ದ ಔತಣಕೂಟದಲ್ಲಿ ಉಪಸ್ಥಿತಿ ಇತ್ತು.


ಈಗಲೂ ಅನೈತಿಕ ಮಾರ್ಗವೇ

ಸ್ಪಷ್ಟವಾಗಿ ಹೇಳುವುದಾದರೆ ಯುಪಿಎ-2, ಸಂಸತ್ತಿನಲ್ಲಿರುವ ಕೆಲವು ಪಕ್ಷಗಳು ಮತ್ತು ಗುಂಪುಗಳೊಂದಿಗೆ ನೀಚತರನಾದ ಚೌಕಾಸಿ ಮತ್ತು ವಿವಿಧ ರೀತಿಯ ಡೀಲ್‌ಗಳು, ಅಂದರೆ ಯುಪಿಎ-1 ಅವಧಿಯಲ್ಲಿ ಇಂಡೋ-ಅಮೆರಿಕ ಅಣುಒಪ್ಪಂದಕ್ಕೆ ಸಹಿ ಹಾಕಲು ಏಕಪಕ್ಷೀಯವಾಗಿ ಮುಂದಾದ ಸಂದರ್ಭದಲ್ಲಿ ಎಡಪಕ್ಷಗಳು ತಮ್ಮ ಬೆಂಬಲ ಹಿಂತೆಗೆದುಕೊಂಡು ವಿಶ್ವಾಸ ಗೊತ್ತುವಳಿ ಮಂಡಿಸಿದಾಗ ಸರ್ಕಾರ ಉಳಿಸಿಕೊಳ್ಳಲು ಹಿಡಿದ ಅನೈತಿಕ ಮಾರ್ಗದ ರೀತಿಯಂತೆಯೇ ಈಗಲೂ ಸರ್ಕಾರ ಉಳಿದಿದೆ.

ಯುಪಿಎ-1 ಸರ್ಕಾರವನ್ನು- ಆ ಸಮಯದಲ್ಲಿ ದೇಶ ಮತ್ತು ಜನತೆಗೆ ಅಗತ್ಯವಾಗಿದ್ದ, ಬಿಜೆಪಿ ನೇತೃತ್ವದ ಆರು ವರ್ಷಗಳ ಎನ್‌ಡಿಎ ಆಡಳಿತದಲ್ಲಿ ಸಂಪೂರ್ಣ ಧಕ್ಕೆಗೆ ಒಳಗಾಗಿದ್ದ ದೇಶದ ಧರ್ಮನಿರಪೇಕ್ಷ ಮತ್ತು ಜಾತ್ಯತೀತ ಪ್ರಜಾಪ್ರಭುತ್ವವನ್ನು ಉಳಿಸಲು- ರಚಿಸಿದ ಮೈತ್ರಿಕೂಟವಾಗಿತ್ತು. ಯುಪಿಎ-1 ಸ್ಥಾಪನೆಯಾದಾಗ ಒಂದು ಪ್ರಮಾಣವನ್ನು ಮಾಡಿತ್ತು: ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಭ್ರಷ್ಟಾಚಾರ ಮುಕ್ತ, ಪಾರದರ್ಶಕ ಮತ್ತು ಜವಾಬ್ದಾರಿಯುತ ಸರ್ಕಾರ ಮತ್ತು ಜವಾಬ್ದಾರಿಯುತ ಆಡಳಿತಕ್ಕೆ ಒಳಪಟ್ಟಿರುವ ಹೊಣೆಗಾರಿಕೆ ಹೊಂದಿರುವ ಸರ್ಕಾರವನ್ನು ನೀಡುವುದಾಗಿ ಪ್ರಮಾಣ ಮಾಡಿತ್ತು. ಆ ಸರ್ಕಾರ ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಹೊಂದಿತ್ತು, ಈ ಕಾರ್ಯಕ್ರಮದ ಆಧಾರದಲ್ಲಿಯೇ ಎಡಪಕ್ಷಗಳು ಬಾಹ್ಯ ಬೆಂಬಲ ನೀಡಿದ್ದವು.

ವಿಶ್ವಾಸ ದ್ರೋಹ

ಆದರೆ ಯುಪಿಎ-2 ಸರ್ಕಾರ, ಯುಪಿಎ-1 ಸರ್ಕಾರ ಮಾಡಿಕೊಂಡಿದ್ದ ಪ್ರಮಾಣವನ್ನು ತುಂಬಾ ವ್ಯವಸ್ಥಿತವಾಗಿ ಧ್ವಂಸಗೊಳಿಸಿತು. ಹೊಸ ಆರ್ಥಿಕ ನೀತಿಗಳನ್ನು ಅನುಷ್ಠಾನಗೊಳಿಸಲು ಮತ್ತು ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಧೀನ ರಾಷ್ಟ್ರವನ್ನಾಗಿ ಮಾಡಲು, ನೆಪಕ್ಕಾದರೂ ಶ್ರೀಸಾಮಾನ್ಯನ ಪರ ಎಂದು ಹೇಳಿಕೊಳ್ಳುತ್ತಿದ್ದ ಅಂಶವನ್ನೂ ಕೈಬಿಟ್ಟಿತು.



ಹೋರಾಟವೇ ದಾರಿ... ಐತಿಹಾಸಿಕ ಆಹಾರ ಆಂದೋಲನದ ನೆನಪು

ಯುಪಿಎ-1 ಆಡಳಿತ ತನ್ನ ಅವಧಿಯಲ್ಲೇ, ಶ್ರೀಸಾಮಾನ್ಯನ ಕಲ್ಯಾಣಕ್ಕಾಗಿ ಮಾಡಿದ್ದ ಪ್ರಮಾಣ ಮತ್ತು ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಕಡೆಗಣಿಸಿತ್ತು. ಯುಪಿಎ-1 ಏಕಪಕ್ಷೀಯವಾಗಿ ಇಂಡೋ-ಅಮೆರಿಕ ನಡುವಿನ ಅಣುಒಪ್ಪಂದಕ್ಕೆ ಮುಂದಾಯಿತು ಮತ್ತು ಭಾರತವನ್ನು ಅಧೀನ ರಾಷ್ಟ್ರವನ್ನಾಗಿ ಮಾಡಿಕೊಳ್ಳುವ ಅಮೆರಿಕ ಸಾಮ್ರಾಜ್ಯಶಾಹಿಯ ಹೊಸ ಕಾರ್ಯತಂತ್ರವ್ಯೂಹವನ್ನು ಮುಂಚೂಣಿಗೆ ತಂದಿತು. ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಹೀಗೆ ಉಲ್ಲಂಘಿಸಿದ್ದು, ಎಡಪಕ್ಷಗಳು ಬೆಂಬಲ ನೀಡಲು ಮುಖ್ಯವಾಗಿದ್ದ ಆಧಾರವನ್ನೇ ಕೆಡವಿತು. ಆಗ ಎಡಪಕ್ಷಗಳಿಗೆ ಬೆಂಬಲ ಹಿಂಪಡೆಯುವುದನ್ನು ಬಿಟ್ಟರೆ ಅನ್ಯ ಆಯ್ಕೆಯೇ ಇಲ್ಲವಾಯಿತು. ಅದೇ ರೀತಿ ಮಾಡಿದ್ದ ಪ್ರಮಾಣವೂ ಉಲ್ಲಂಘಿಸಿರುವುದನ್ನು ಎಲ್ಲರೂ ನೋಡಬಹುದಾಗಿದೆ.

ಬೆಲೆ ಏರಿಕೆ ಬಗ್ಗೆ ಮಾತೇ ಇಲ್ಲ

ಯುಪಿಎ-2ನ ಈ ಎರಡು ವರ್ಷಗಳ ಅವಧಿಯಲ್ಲಿ ಅತ್ಯಂತ ಮುಖ್ಯವಾಗಿ ಎರಡು ಸಮಸ್ಯೆಗಳು ಸಾಮಾನ್ಯ ಜನ ಮತ್ತು ದೇಶವನ್ನು ಗಂಭೀರವಾಗಿ ಕಾಡಿತು. ಒಂದನೆಯದು ಅಗತ್ಯ ವಸ್ತುಗಳ ದರಗಳ ವಿಪರೀತವಾಗಿ ಏರಿಕೆಯಾಗಿದ್ದು, ಮತ್ತು ಎರಡನೆಯದು ಭಾರಿ ಪ್ರಮಾಣದ ಭ್ರಷ್ಟಾಚಾರ. ಹೀಗಿದ್ದರೂ ಎರಡು ವರ್ಷ ಆಡಳಿತ ಪೂರೈಸಿದ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಮಾಡಿದ ಭಾಷಣದಲ್ಲಿ ಅಪ್ಪಿತಪ್ಪಿಯೂ ಈ ಅಂಶಗಳನ್ನು ಪ್ರಸ್ತಾಪಿಸಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಬೆಲೆ ಏರಿಕೆಯನ್ನು, ಜಾಗತಿಕ ಮಟ್ಟದಲ್ಲಿ ತೈಲ ಮತ್ತು ಆಹಾರ ಪದಾರ್ಥಗಳ ದರಗಳು ಏರಿಕೆ ಕಂಡಿರುವುದರಿಂದ ದರಗಳಲ್ಲಿ ಏರಿಕೆಯಾಗಿದೆ ಎಂದು ಸಮರ್ಥಿಸಿದರು. ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಬೇಕೆಂದು ಪ್ರಸ್ತಾವಿಸಿದರಾದರೂ, ಈ ಗುರಿ ಸಾಧಿಸಲು ಅಗತ್ಯವಾದ ಯಾವುದೇ ಯೋಜನೆಗಳನ್ನು ಅವರು ಪ್ರಸ್ತಾಪಿಸಲಿಲ್ಲ. ಅಗತ್ಯ ವಸ್ತುಗಳ ದರ ಏರಿಕೆಗೆ ಪ್ರಮುಖ ಕಾರಣವಾಗಿರುವ ಎಲ್ಲ ಅಗತ್ಯ ಉತ್ಪನ್ನಗಳ ವಾಯಿದೆ ವಹಿವಾಟು(ಫ್ಯೂಚರ್ ಟ್ರೇಡಿಂಗ್) ನಿಷೇಧವನ್ನು ಕೇಂದ್ರ ಸರ್ಕಾರ ಈ ದಿನದವರೆಗೂ ನಿರಾಕರಿಸುತ್ತಾ ಬಂದಿದೆ.

ಭ್ರಷ್ಟಾಚಾರದಿಂದಾದ ನಷ್ಟದ ವಸೂಲಿ ಬಗೆಗೆ ತುಟಿ ಬಿಚ್ಚಲಿಲ್ಲ

ಭಾರಿ ಪ್ರಮಾಣದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ನಾಮಕಾವಸ್ತೆಗೆ ಎಂಬಂತೆ ಪ್ರಸ್ತಾವಿಸಿದರಾದರೂ (2ಜಿ ಸ್ಪೆಕ್ಟ್ರಂ ಮತ್ತು ಕಾಮನ್‌ವೆಲ್ತ್ ಹಗರಣ ಕುರಿತು) ಪ್ರಧಾನ ಮಂತ್ರಿಗಳ ಮಾತು ಹೇಗಿತ್ತೆಂದರೆ, ಭ್ರಷ್ಟಾಚಾರ ನಿಯಂತ್ರಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂದೆಯೂ ಕೈಗೊಳ್ಳಲಾಗುವುದು ಎಂದು ತೃಪ್ತಿಕರವಾಗಿ ಹೇಳಿದಂತಿತ್ತು. ಕಾನೂನು ಅದರದೇ ಆದ ಕ್ರಮ ಕೈಗೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಹೀಗಾಗದಂತೆ ನಾವು ಕ್ರಮಗಳನ್ನು ಕೈಗೊಳ್ಳುತ್ತೇವೆ. ಹಾಗೆಯೇ ಸರ್ಕಾರಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ವಿವೇಚನಾರಹಿತವಾಗಿ ಬಳಕೆ ಮಾಡುವುದನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದರು. ಇಲ್ಲಿ ಅತ್ಯಂತ ಪ್ರಮುಖವಾಗಿ ಮಾಡಬೇಕಾದ ಕೆಲಸ ಎಂದರೆ, ಈ ಭ್ರಷ್ಟಾಚಾರದಿಂದ ಆಗಿರುವ ನಷ್ಟವನ್ನು ಮತ್ತೆ ವಸೂಲಿ ಮಾಡಿ ಸಾಮಾನ್ಯ ಜನರ ಜೀವನ ಉತ್ತಮಪಡಿಸಲು ಬಳಕೆ ಮಾಡಬೇಕಾಗಿತ್ತು. ಆದರೆ ಈ ವಿಷಯದ ಕುರಿತು ಪ್ರಧಾನಿಗಳು ತುಟಿ ಬಿಚ್ಚಲಿಲ್ಲ.

ಆರ್ಥಿಕ ಪ್ರಗತಿಯ ಬೊಬ್ಬೆ:

ಪ್ರಧಾನ ಮಂತ್ರಿಗಳು, ನಿರೀಕ್ಷೆಯಂತೆಯೇ, ಕಳೆದ ಎರಡು ವರ್ಷಗಳ ಆರ್ಥಿಕ ಪ್ರಗತಿ ಕುರಿತು ಪ್ರಸ್ತಾಪಿಸಿದರು-ವಾರ್ಷಿಕ ಆರ್ಥಿಕ ಪ್ರಗತಿ ಶೇಕಡ 8.5- ಇದನ್ನು ಐತಿಹಾಸಿಕ ಸಾಧನೆ ಎಂತಲೂ ಬಣ್ಣಿಸಿದರು. ನಾವು ದೇಶೀಯ ಮಟ್ಟದಲ್ಲಿ 'ಸರ್ವಾಂಗೀಣ ಅಭಿವೃದ್ಧಿ' ಮತ್ತು ಜಾಗತಿಕ ಮಟ್ಟದಲ್ಲಿ 'ಸರ್ವಾಂಗೀಣ ಜಾಗತೀಕರಣ' ವನ್ನು ಪಾಲಿಸುತ್ತಿದ್ದೇವೆ. ಇದು ಬಡವರಿಗೆ ನೆರವಾಗಲಿದ್ದು, ಆದಾಯ ಮತ್ತು ಸಂಪತ್ತಿನ ನಡುವಿನ ಅಂತರವನ್ನು ಕಡಿಮೆಗೊಳಿಸಲಿದೆ.

ಇದಕ್ಕಿಂತಲೂ ಕ್ರೂರವಾದ ಜೋಕ್ ಇನ್ನೊಂದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿನ ಮಿಲಿಯನ್ ಡಾಲರ್ ಶ್ರೀಮಂತರ ಸಂಖ್ಯೆ 26 ರಿಂದ 52ಕ್ಕೆ ಮತ್ತು ಈಗ 69ಕ್ಕೆ ಮುಟ್ಟಿದೆ. ಅವರೆಲ್ಲರ ಒಟ್ಟಾರೆ ಆಸ್ತಿ ಮೌಲ್ಯ ಭಾರತದ ಒಟ್ಟು ಆಂತರಿಕ ಉತ್ಪನ್ನದ ನಾಲ್ಕನೆ ಮೂರರಷ್ಟಿದೆ. ಮತ್ತೊಂದು ಕಡೆ ದೇಶದ ಜನಸಂಖ್ಯೆಯ ಶೇಕಡ 77ರಷ್ಟು ಅಥವಾ 80 ಕೋಟಿಗೂ ಹೆಚ್ಚು ಮಂದಿ ಪ್ರತಿದಿನ 20 ರೂ.ಗಳಿಗಿಂತಲೂ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. ಆದಾಯ ಮತ್ತು ಸಂಪತ್ತಿನ ನಡುವಿನ ಅಂತರ ಕಡಿಮೆಯಾಗುತ್ತಿದೆ ಎಂದು ಪ್ರಧಾನಿಗಳು ನಮ್ಮನ್ನು ನಂಬಿಸಲು ಹೊರಟಿದ್ದಾರೆ. ಆದರೆ ವಾಸ್ತವವಾಗಿ ಈ ಅಂತರ ಇನ್ನಷ್ಟು ಹೆಚ್ಚಾಗಿದೆ.

ಭವಿಷ್ಯ ಕುರಿತಂತೆ ಪ್ರಧಾನಿಗಳ ದೂರದೃಷ್ಟಿ ಇನ್ನಷ್ಟು ಆತಂಕಕಾರಿಯಾಗಿದೆ. ನಮ್ಮ ಮುಂದಿರುವ ಸದ್ಯದ ಸವಾಲೆಂದರೆ ಹಣದುಬ್ಬರ ಪ್ರಮಾಣವನ್ನು ಅಂಕೆಯಲ್ಲಿಟ್ಟುಕೊಂಡು, ಆರ್ಥಿಕ

ಪುಟ 10ಕ್ಕೆ

ಕೊರಗ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮಂಗಳೂರು ಘಟಕವು ಮೇ 19ರಂದು ಸೂಟರ್‌ಪೇಟೆಯ ಗುರುವ ಮೇಸ್ತ್ರಿ ಭಾಗಿ ಸ್ಮರಣಾರ್ಥ ಸ್ವಯಂಪ್ರಭಾ ಸೀತಾರಾಂ ಹಮ್ಮಿಕೊಂಡಿದ್ದ ಕೊರಗ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಮೇ 29ರಂದು ಎನ್.ಜಿ.ಓ. ಸಭಾಂಗಣದಲ್ಲಿ ವ್ಯವಸ್ಥೆಗೊಳಿಸಿತ್ತು. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಮಂಗಳೂರು ನಗರ ಪೋಲೀಸ್ ಉಪ ಆಯುಕ್ತ ಮುತ್ತೂರಾಯ್, ಸಮಾಜಸೇವಕ ಎನ್.ಸೀತಾರಾಂ, ಬೆಂಗಳೂರಿನ 'ಸ್ಫೂರ್ತಿ' ಆಡಳಿತಾಧಿಕಾರಿ ವರದರಾಜ್, ಕಾರ್ಯದರ್ಶಿ ಎಂ.ರಾಜು, ಖ್ಯಾತ ವಿಚಾರವಾದಿ ನರೇಂದ್ರನಾಯಕ್ ಸಮಾರಂಭದಲ್ಲಿ ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ದಲಿತ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರಮಿಸಿದ ಕುದ್ಮಲ್ ರಂಗರಾಯರ ಕನಸನ್ನು ನನಸಾಗಿಸಲು ಪ್ರಯತ್ನ ನಡೆಸಬೇಕಾಗಿದೆ ಎಂದು ಸಿಐಟಿಯು ಮುಖಂಡ ವಸಂತ ಆಚಾರಿ ಹೇಳಿದರು.

ಕೊರಗ ಸಮುದಾಯದಿಂದ ಪ್ರಪ್ರಥಮ ಬಾರಿಗೆ ಪಿ.ಹೆಚ್.ಡಿ.ಪದವಿಯನ್ನು ಅದರಲ್ಲೂ ಆನ್ವಯಿಕ ರಸಾಯನಶಾಸ್ತ್ರದಲ್ಲಿ ಪಡೆದಿರುವ ಎಂ.ಬಾಬು ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಂಚಾಲಕರಾದ ಕೃಷ್ಣಪ್ಪ ಕೊಂಚಾಡಿ, ಕಾರ್ಯಕರ್ತರಾದ ಲಿಂಗಪ್ಪ ನಂತೂರು, ಜಯಕುಮಾರ್ ಮೊದಲಾದವರು ಕಾರ್ಯಕ್ರಮವನ್ನು ಸಂಘಟಿಸಿದ್ದರು.

★

ದಿ: ಎಂ.ಎಚ್.ಕೃಷ್ಣಪ್ಪನವರಿಗೆ ಶ್ರದ್ಧಾಂಜಲಿ ಸಭೆ

ಹಿರಿಯ ಕಮ್ಯೂನಿಸ್ಟ್ ಮುಖಂಡ ರಾಗಿದ್ದ ಎಂ.ಎಚ್.ಕೃಷ್ಣಪ್ಪನವರು ತಮ್ಮ 88ನೇ ವಯಸ್ಸಿನಲ್ಲಿ ಮೇ 16ರಂದು ನಿಧನರಾದರು. ಮೇ 29ರಂದು ಮಂಗಳೂರಿನ ಕದ್ರಿ ಗೋಕುಲಸದನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರ ನೂರಾರು ಅಭಿಮಾನಿಗಳು ಭಾಗವಹಿಸಿ ಶ್ರದ್ಧಾಂಜಲಿ ಅರ್ಪಿಸಿದರು.

1978ರವರೆಗೂ ಸಿಪಿಎಂ ಪಕ್ಷದ ಮುಖಂಡರಾಗಿ, ಕಾರ್ಯಕರ್ತನಾಗಿ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದ ಎಂ.ಎಚ್.ಕೃಷ್ಣಪ್ಪ ನವರೊಂದಿಗೆ ಸಹ ಕಾರ್ಯಕರ್ತರಾಗಿದ್ದು, ಅವರ ಕಾರ್ಯಶೀಲತೆಯನ್ನು ಚೆನ್ನಾಗಿ ಬಲ್ಲ ಇಂದಿನ ಹಿರಿಯ ಸಿಪಿಎಂ ಮುಖಂಡರಾದ ಕೆಆರ್.ಶ್ರೀಯಾನ್ ಮತ್ತು ಬಿ.ಮಾಧವ ತಮ್ಮ ಮಾತುಗಳ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು. ಅಲ್ಲದೆ ಪ್ರಾಂತ ರೈತ ಸಂಘದ ಕೆ.ಯಾದವಶೆಟ್ಟಿ ಹಾಗೂ ಸಾಮಾಜಿಕ ಕಾರ್ಯಕರ್ತ ಪಿ.ವಿ.ಮೋಹನ್ ಅವರೂ ಶ್ರದ್ಧಾಂಜಲಿಯ ಮಾತುಗಳನ್ನಾಡಿದರು.

ಎಂ.ಎಚ್.ಕೃಷ್ಣಪ್ಪನವರ ಪುತ್ರರಾದ ನ್ಯಾಯವಾದಿ ಯಶವಂತ ಮರೋಳಿ ಹಾಗೂ ಕುಟುಂಬದವರು ಶ್ರದ್ಧಾಂಜಲಿ ಸಭೆಯನ್ನು ಸಂಘಟಿಸಿದ್ದರು.

★

ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ ನಿರಶನ ಪ್ರತಿಭಟನೆ:

ಖಾಯಂ ನೌಕರರ ನೇಮಕಾತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ಸಂಯೋಜಿತ ಡಿಆರ್‌ಇಯು ಮೇ 31ರಂದು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಿರಶನ ಪ್ರತಿಭಟನೆ ನಡೆಸಿತು.



ವಾ. ಉ.

ನೌಕರರ ಹಿತವನ್ನು ಕಡೆಗಣಿಸಿ, ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ರೈಲ್ವೆ ಇಲಾಖೆಯ ವಿರುದ್ಧ ಡಿಆರ್‌ಇಯು ತೀವ್ರ ಹೋರಾಟ ನಡೆಸಲಿದೆ ಎಂದು ಹೇಳುವ ಮೂಲಕ ಡಿಆರ್‌ಇಯು ವಿಭಾಗೀಯ ಕಾರ್ಯದರ್ಶಿ ಹರಿದಾಸನ್ ಮುಷ್ಕರಕ್ಕೆ ಚಾಲನೆ ನೀಡಿದರು. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನಕ ಕಾರ್ಯದರ್ಶಿ ವಸಂತ ಆಚಾರಿ, 'ಸರ್ಕಾರ ಎಲ್ಲಿಯವರೆಗೆ ಕಾರ್ಪೊರೇಟ್ ವಲಯಕ್ಕೆ ರಿಯಾಯಿತಿ ನೀಡುವುದೋ ಅಲ್ಲಿಯವರೆಗೆ ಕಾರ್ಮಿಕರ ಮೇಲೆ ದಬ್ಬಾಳಿಕೆ, ಶೋಷಣೆ, ಅನ್ಯಾಯ ಮುಂದುವರೆಯುತ್ತದೆ. ಅಸಮಾನತೆ, ಬಡತನ, ನಿರುದ್ಯೋಗ ಇರುವವರೆಗೂ ಎಡ ಕಾರ್ಮಿಕ ಸಂಘಟನೆಗಳು ಹೋರಾಟ ನಡೆಸುತ್ತಲೇ ಇರುತ್ತವೆ. ರೈಲ್ವೆ ನೌಕರರ ಸಮಸ್ಯೆ ಪರಿಹಾರವಾಗದಿದ್ದಲ್ಲಿ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಡಿಆರ್‌ಇಯು ಮಂಗಳೂರು ಘಟಕದ ಅಧ್ಯಕ್ಷ ವಿ.ಎಸ್.ಚಂದ್ರಮೋಹನ್, ಪ್ರಧಾನ ಕಾರ್ಯದರ್ಶಿ ಎ.ವಿ.ಲಕ್ಷ್ಮಣನ್ ಮೊದಲಾದವರು ಹಾಜರಿದ್ದು ಪ್ರತಿಭಟನೆಗೆ ನೇತೃತ್ವ ನೀಡಿದರು.

★

ಮಕ್ಕಳ ಬೇಸಿಗೆ ಶಿಬಿರ

ಪಕ್ಕಲಡ್ಕ ಡಿವೈಎಫ್‌ಐ ಘಟಕವು ಕಳೆದ ಕೆಲವು ವರ್ಷಗಳಿಂದ ಮಕ್ಕಳಿಗಾಗಿ ಸಂತಸ ಕಲಿಕೆ ಶಿಬಿರಗಳನ್ನು ಏರ್ಪಡಿಸುತ್ತಾ ಬಂದಿದ್ದು, ಈ ಸಾಲಿನಲ್ಲಿ ಮೇ 15 ರಿಂದ 22ರವರೆಗೆ ಪಕ್ಕಲಡ್ಕ ಯುವಕ ಮಂಡಲದ ಸಹಭಾಗಿತ್ವದಲ್ಲಿ ನಡೆಸಿತು. ನೂರು ಮಂದಿ ಮಕ್ಕಳು ಮೂಕಾಭಿನಯ, ಜನಪದ ಗೀತೆ, ನೃತ್ಯ, ರೂಪಕ, ಜಾದೂ, ಚಿತ್ರಕಲೆಗಳಲ್ಲಿ ತರಬೇತಿ ಪಡೆದು ಶಿಬಿರದ ಕೊನೆಯ ದಿನ ಪ್ರದರ್ಶನವನ್ನೂ ನೀಡಿದರು.

'ಆಟ-ಪಾಠ' ಹೆಸರಿನಲ್ಲಿ ನಡೆದ ಈ ಶಿಬಿರವನ್ನು ರಂಗನಿರ್ದೇಶಕರೂ, 'ಸಹಮತ' ಫಿಲ್ಮ್ ಸೊಸೈಟಿಯ ಕಾರ್ಯದರ್ಶಿಗಳೂ ಆದ ಐವಾನ್ ಡಿ'ಸಿಲ್ವಾ ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮೈಮ್ ರಾಮದಾಸ್, ಸುನಂದ ಕೊಂಚಾಡಿ, ಹರೀಶ್ ಮರ್ಣೆ, ಖ್ಯಾತ ಜಾದೂಗಾರ ಕುದ್ರೋಳಿ ಗಣೇಶ್, ವಿಸ್ಮಯ ವಿನಾಯಕ, ಚಿತ್ರಕಲಾವಿದ ಎ.ಕೆ. ಜುಬೈರ್, ನವೀನ್ ಸೂರಿಂಜೆ, ಪ್ರಕಾಶ್ ಕೆ. ಪ್ರಶಾಂತ್ ಬೆಳ್ತಂಗಡಿ, ಮುರಹಂ ಕಾಸರಗೋಡು, ಸಂಪತ್ ಕುಂಡಲ್‌ಗುಡ್ಡೆ ಮುಂತಾದವರು ವಿವಿಧ ವಿಷಯಗಳಲ್ಲಿ ತರಬೇತಿ ನೀಡಿದರು. ಎಂಡೋಸಲ್ಫಾನ್‌ನ ದುಷ್ಪರಿಣಾಮಗಳನ್ನು ನಿರೂಪಿಸುವ 'ಗಂಧವತಿ' ಎಂಬ ನಾಟಕವನ್ನು ಮುರಹಂ ಕಾಸರಗೋಡು ಅವರು ನಿರ್ದೇಶಿಸಿದ್ದು, ಶಿಬಿರದ ಕೊನೆಯಲ್ಲಿ ಪ್ರದರ್ಶನ ನೀಡಲಾಯಿತು.

ಮಕ್ಕಳ ಲೋಕದ ಪರಿಣತ ಶಿಕ್ಷಕ ಕೆ.ಕೆ.ಪೇಜಾವರ ಶಿಬಿರದ ಸಮಾರೋಪ ಭಾಷಣ ಮಾಡಿದರು. ಪ್ರವೀಣ ವಿಸ್ಮಯ, ಆಟ-ಪಾಠ ತಂಡದ ಅಧ್ಯಕ್ಷರಾದ ಕುಮಾರ್ ಸೋನಿಲಾ, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸಂತೋಷ್‌ಕುಮಾರ್ ಬಜಾಲ್, ಸ್ಥಳೀಯರಾದ ಬಿ.ನಾಗೇಶ್‌ಶೆಟ್ಟಿ, ಅಶೋಕ್ ಸಾಲ್ಯಾನಾ, ಡಿವೈಎಫ್‌ಐ ಪಕ್ಕಲಕ್ಕ ಘಟಕದ ಯಶಪಾಲ್, ದೀಪಕ್ ಬಜಾಲ್ ಮೊದಲಾದವರು ಈ ಶಿಬಿರವನ್ನು ಯಶಸ್ವಿಯಾಗಿ ನಡೆಸಲು ಶ್ರಮಿಸಿರುತ್ತಾರೆ.


ಬೇಸಿಗೆ ಶಿಬಿರ

ಶ್ರಮಜೀವಿಗಳನ್ನು 'ದೂರವಿಟ್ಟ'

ಪುಟ 2 ರಿಂದ

ಪುರುಷ ಹಾಗೂ ಮಹಿಳಾ ಪೌರಕಾರ್ಮಿಕರು ಸುಡುಬಿಸಿಲನ್ನು ಲೆಕ್ಕಿಸದೆ ಪ್ರವಾಸಿಮಂದಿರದಿಂದ ಮೆರವಣಿಗೆಯಲ್ಲಿ ಸಾಗಿಬಂದರು. ಪ್ರತಿಭಟನೆಯ ಸಂಕೇತವಾಗಿ ಕೈಗಳಲ್ಲಿ ಪೊರಕೆಗಳನ್ನು ಹಿಡಿದಿದ್ದ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಬೆಂಬಲಾರ್ಥ ಘೋಷಣೆಗಳನ್ನು ಕೂಗುತ್ತಾ ಜಿಲಾಧಿಕಾರಿ ಕಛೇರಿ ಆವರಣವನ್ನು ಸಮೀಪಿಸುತ್ತಿದ್ದಂತೆ ಅವರಿಗೊಂದು ಆಘಾತದ ಸುದ್ದಿ ಕಾದಿತ್ತು.

ಧರಣಿಗಾಗಿ ಹಕಲಾಗಿದ್ದ ಜಮಖಾನೆಗಳನ್ನು ಪೊಲೀಸರು ಮಡಚಿ ಒಂದೆಡೆ ಇಟ್ಟಿದ್ದರು. ಹಾಗೂ ಪೊಲೀಸ್ ಪಡೆ ಜಿಲ್ಲಾಧಿಕಾರಿ ಕಛೇರಿ ಅವರಣದಲ್ಲಿ ಜಮಾಯಿಸಿ ಪೌರಕಾರ್ಮಿಕರು ಕಚೇರಿ ಬಳಿ ಬರುವುದನ್ನು ತಡೆದರು. ಜಿಲ್ಲಾಧಿಕಾರಿ ಮನೋಜ್‌ಕುಮಾರ ಮೀನಾ ಅವರ ಆದೇಶದ ಮೇರೆಗೆ ತಾವು ಈ ಕ್ರಮ ಕೈಗೊಂಡಿರುವುದಾಗಿ ಪೊಲೀಸರು ವಿವರಿಸಿದರು. ನೂರಕ್ಕೆ ನೂರರಷ್ಟು ದಲಿತರೇ ಇರುವ ಪೌರಸೇವಾ ನೌಕರರನ್ನು ಜಿಲ್ಲಾಧಿಕಾರಿ ಕಛೇರಿಯ ಬಳಿ ಬಿಡದೇಇರುವ ಮೂಲಕ ಜಿಲ್ಲಾಡಳಿತವು ಪ್ರತಿಭಟನೆಯ ಪ್ರಜಾಸತ್ತಾತ್ಮಕ ಹಕ್ಕನೇ ನಿರ್ಬಂಧಿಸಿತು. ಪೊಲೀಸರೊಂದಿಗೆ ಸ್ವಲ್ಪ ಹೊತ್ತು ವಾಗ್ವಾದ ನಡೆಯಿತು.

ನೀವು ಇಲ್ಲೇ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಯವರೇ ಇಲ್ಲಿಗೆ ಬಂದು ಮನವಿ ಸ್ವೀಕರಿಸುತ್ತಾರೆ, ಎಂದು ಪೊಲೀಸರು ಹೇಳಿದಧಾಟಿ ಜಿಲ್ಲಾಧಿಕಾರಿ ಏನೋ ಮಹಾ ಉಪಕಾರ ಮಾಡುತ್ತಾರೆ ಎನ್ನುವಂತಿತ್ತು. ಜಿಲ್ಲಾಧಿಕಾಯೇ ಪೌರಕಾರ್ಮಿಕರ ಬಳಿ ಬರುತ್ತಾರೆ ಎನ್ನುವುದು ಪೇಜಾವರ ಸ್ವಾಮೀಜಿ ದಲಿತರ ಕೇರಿಗೆ ಭೇಟಿನೀಡಿ ಕ್ರಾಂತಿ ಮಾಡುತ್ತಾರೆ ಎಂಬ ಭ್ರಮೆಯನ್ನು ಹುಟ್ಟಿಸಿದ ರೀತಿಯನ್ನು ನೆನಪಿಡುವಂತಿತ್ತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಜಿಲ್ಲಾಡಳಿತದ ಧೋರಣೆ ಅಸ್ಪೃಶ್ಯತೆಯನ್ನು ಜೀವಂತವಾಗಿಡುವ ಹುನ್ನಾರದಂತಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ದಲಿತರನ್ನು ಶತಶತಮಾನಗಳಿಂದ ಊರ ಹೊರಗೆ ಇರುತ್ತಿದ್ದು ಈಗ ಜಿಲ್ಲಾಧಿಕಾರಿ ಕಛೇರಿ ಆವರಣದ ಹೊರಗೆ ಇಡಲಾಗಿದೆ. ನಾವು ಹೋರಾಡಿ ನ್ಯಾಯವನ್ನು ಪಡೆಯುತ್ತೇವೆ ಎಂದವರು ಘೋಷಿಸಿದರು.

●

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ತಡೆಯಲು ಲೋಕಪಾಲ ವ್ಯವಸ್ಥೆಯ ಸ್ಥಾಪನೆಯಷ್ಟೇ ಸಾಲದು. ಅದರ ವಿರುದ್ಧ ಪರಿಣಾಮಕಾರಿ ಹೋರಾಟ ಬಹುಮುಖೀ ನಿಲುವನ್ನು ಆಧರಿಸಿರಬೇಕು. ಪ್ರಧಾನ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಕಚೇರಿಯನ್ನೂ ಒಳಗೊಳ್ಳುವ ಲೋಕಪಾಲ ಸಂಸ್ಥೆಯನ್ನು ಸ್ಥಾಪಿಸಬೇಕು, ಮತ್ತು ಜತೆಗೇ ಇತರ ಕ್ರಮಗಳನ್ನೂ ಆರಂಭಿಸಬೇಕು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರಗಳ ಎಲ್ಲ ಆಯಾಮಗಳನ್ನು ಗಮನಿಸುವ ಸಂಸ್ಥೆಗಳ ಸ್ಥಾಪನೆ ಅತ್ಯಗತ್ಯ. ಒಂದೇ ಆಯಾಮವನ್ನು ಎದುರಿಸುವ ಯಾವುದೇ ಅರೆಬರೆ ಪ್ರಯತ್ನ ಅಪೇಕ್ಷಿತ ಫಲಿತಾಂಶ ಕೊಡಲಾರದು.

ಭ್ರಷ್ಟಾಚಾರದ ವಿರುದ್ಧ ಹೋರಾಟ: ಬೇಕಿದೆ ಬಹುಮುಖೀ ನಿಲುವು

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಜೂನ್ 3, 2011 ರ ಸಂಪಾದಕೀಯ ಆಧರಿಸಿ)

ಲೋಕಪಾಲ ಮಸೂದೆಯ ಸುತ್ತ ನಡೆದಿರುವ ವಾದ-ವಿವಾದಗಳನ್ನು ನೋಡಿದರೆ ದಶಕಗಳಲ್ಲಿ ನಮಗೆ ಮುನ್ನಡೆಯಲು ಸಾಧ್ಯವಾಗಿರುವುದು ಅತ್ಯಲ್ಪವೇನೋ ಎಂದೆನಿಸುತ್ತದೆ. ಈ ಹಿಂದೆ ನಾವು ಗಮನಿಸಿರುವಂತೆ, ಲೋಕ□24ಾಲ □ಂಬ ಪರಿಕಲ್ಪನೆಯನ್ನು ಮೊದಲು ಮುಂದಿಟ್ಟದ್ದು 1969ರಲ್ಲಿ ಮೊರಾರ್ಜಿ ದೇಸಾಯಿ ಮುಖ್ಯಸ್ಥರಾಗಿದ್ದ ಆಡಳಿತ ಸುಧಾರಣಾ ಸಮಿತಿ. ಕೇಂದ್ರದಲ್ಲಿ ಈ ಸಂಸ್ಥೆಯೊಂದಿಗೆ, ರಾಜ್ಯಗಳಲ್ಲಿ ಲೋಕಾಯುಕ್ತ ಎಂಬ ಇಂತಹುದೇ ಸಂಸ್ಥೆಗಳನ್ನು ಸ್ಥಾಪಿಸಬೇಕಿತ್ತು. ಈ ಪರಿಕಲ್ಪನೆಗೆ ಪ್ರತಿರೋಧ ಬರುತ್ತದೆಂದು ಯಾರಾದರೂ ಭವಿಷ್ಯ ಹೇಳಬಹುದಾಗಿತ್ತು. ಹಾಗೆಯೇ ಆಗಿ, ಈ ಪ್ರಸ್ತಾವ ದೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿದೆ.

ಬೊಫೋರ್ಸ್ ಹಗರಣ ದೇಶದಲ್ಲಿ ಎಬ್ಬಿಸಿದ ರಾಜಕೀಯ ಅಲ್ಲೋಲ-ಕಲ್ಲೋಲದ ನಂತರ ಎಡಪಕ್ಷಗಳ ಒತ್ತಾಯದಿಂದ ಈ ಪರಿಕಲ್ಪನೆ 1990ರ ದಶಕದಲ್ಲಿ ಪುನರುಜ್ಜೀವನಗೊಂಡಿತು. 1996ರಲ್ಲಿ ಎಡಪಕ್ಷಗಳ ಹೊರಗಣ ಬೆಂಬಲದಿಂದ ರಚನೆಗೊಂಡ ಸಂಯುಕ್ತ ರಂಗ ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ವನ್ನು ತಯಾರಿಸಿ ಅಂಗೀಕರಿಸಿತು. ಅದರಲ್ಲಿ 'ಸ್ವಚ್ಛ ಆಡಳಿತ' ಎಂಬ ವಿಭಾಗದಲ್ಲಿ ಈ ಸಿಎಂಪಿ ಹೀಗೆ ಹೇಳಿತ್ತು: "ಸಂಯುಕ್ತ ರಂಗ ಒಂದು ಭ್ರಷ್ಟಾಚಾರ-ಮುಕ್ತ ಮತ್ತು ಸ್ವಚ್ಛ ಆಡಳಿತಕ್ಕೆ ಬದ್ಧವಾಗಿದೆ. ಲೋಕಪಾಲ ರಚನೆಗೆ ಒಂದು ಮಸೂದೆಯನ್ನು ಹನ್ನೊಂದನೇ ಲೋಕಸಭೆಯ ಮೊದಲ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗುವುದು. ಈ ಮಸೂದೆಯ ವ್ಯಾಪ್ತಿಗೆ ಪ್ರಧಾನ ಮಂತ್ರಿಗಳ ಹುದ್ದೆ ಕೂಡ ಬರುತ್ತದೆ. ಸಂಸತ್ತಿನ ಎಲ್ಲ ಸದಸ್ಯರು ವಾರ್ಷಿಕವಾಗಿ ಲೋಕಪಾಲರ ಎದುರು ತಮ್ಮ ಆಸ್ತಿಗಳನ್ನು ಕಾನೂನಿನ ಪ್ರಕಾರ ಘೋಷಿಸಬೇಕಾಗುತ್ತದೆ."


ಗಂಭೀರ ಭಿನ್ನಾಭಿಪ್ರಾಯ

ಮತ್ತೆ, ಈಗ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಸಾರಿರುವವರು ಎನಿಸಿಕೊಂಡವರ ನಡುವೆ ಕೂಡ, ಪ್ರಧಾನ ಮಂತ್ರಿಗಳನ್ನು, ಅವರ ಕಚೇರಿಯನ್ನು ಲೋಕಪಾಲ ಮಸೂದೆಯ ವ್ಯಾಪ್ತಿಯೊಳಗೆ ತರುವ ಪ್ರಶ್ನೆಯ ಮೇಲೆ ಒಂದು ಗಂಭೀರ ಭಿನ್ನಾಭಿಪ್ರಾಯ ತಲೆದೋರಿದೆ. ದೇವೇಗೌಡ ನೇತೃತ್ವದ ಸಂಯುಕ್ತ ರಂಗ ಸರಕಾರ ಎತ್ತಿಕೊಂಡ 1997ರ ಮಸೂದೆ ಬೆಳಕು ಕಾಣಲೇ ಇಲ್ಲ, ಏಕೆಂದರೆ ಅದು ಇದೇ ವಿವಾದದಲ್ಲಿ ಸಿಲುಕಿಕೊಂಡಿತು. ನಂತರ ಸಂಯುಕ್ತ ರಂಗ ಸರಕಾರವನ್ನು ಆವರಿಸಿದ ಅಸ್ಥಿರತೆ ಈ ವಿಷಯದಲ್ಲಿ ಮುಂದೇನೂ ಪ್ರಗತಿಯಾಗದಂತೆ ನೋಡಿಕೊಂಡಿತು. ಈಗ ಬಿಜೆಪಿ ನೇತೃತ್ವದ ಎನ್‌ಡಿಎ ತಾವು ಭ್ರಷ್ಟಾಚಾರ-ವಿರೋಧಿ ಹೋರಾಟಗಾರರು ಎಂದು ತೋರಿಸಿಕೊಂಡರೂ, ಸಂಯುಕ್ತ ರಂಗ ಸರಕಾರದ ಪತನದ ನಂತರ 1998ರಿಂದ ಆರು ವರ್ಷಗಳ ಕಾಲ ಆಡಳಿತ ನಡೆಸಿದ ಅವರ ಸರಕಾರ, ಈ ಪ್ರಶ್ನೆಯ ಬಗ್ಗೆ ದಿವ್ಯಮೌನ ತಳೆಯಿತು. ವಿರೋಧ ಪಕ್ಷದಲ್ಲಿದ್ದಾಗ ಭ್ರಷ್ಟಾಚಾರದ ವಿರುದ್ಧ ಹೋರಾಟ, ಅಧಿಕಾರದಲ್ಲಿದ್ದಾಗ ತದ್ವಿರುದ್ಧ(ಕರ್ನಾಟಕದ ಮಾದರಿಯಲ್ಲಿ) ಎಂಬುದು ಅದರ ತರ್ಕವಿದ್ದಂತೆ ಕಾಣುತ್ತದೆ.

ಮತ್ತೆ, ಎಡಪಕ್ಷಗಳ ಒತ್ತಾಯದಿಂದಾಗಿ, 2004ರಲ್ಲಿ ಯುಪಿಎ-1 ಸರಕಾರದ ಸಿಎಂಪಿ(ಸಮಾನ ಕನಿಷ್ಟ ಕಾರ್ಯಕ್ರಮ) "ಲೋಕಪಾಲ ಮಸೂದೆಯನ್ನು ಕಾನೂನು ಮಾಡಲಾಗುವುದು" ಎಂದು ಪುನರುಚ್ಚರಿಸಿತು.

ಹಲವು ಆಯಾಮಗಳು

ಲೋಕಪಾಲದ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿಗಳನ್ನು ಸೇರಿಸುವ ಪ್ರಶ್ನೆಯಲ್ಲದೆ, ಇತರ ಹಲವಾರು ವಿವಾದಾತ್ಮಕ ಪ್ರಶ್ನೆಗಳನ್ನು ಪರಿಹರಿಸಬೇಕಾಗಿದೆ. ನ್ಯಾಯಾಂಗವನ್ನು, ಅಥವ ಸಂಸತ್ತಿನ ಒಳಗೆ ಸಂಸದರ ವರ್ತನೆಯನ್ನು ಸೇರಿಸಬೇಕೇ ಬೇಡವೇ ಎಂಬ ಪ್ರಶ್ನೆಗಳಿವೆ. ನಮ್ಮ ಸಂವಿಧಾನದ ನಿರ್ದಿಷ್ಟ ಕಲಮುಗಳು ಆಡಳಿತ ಅಧಿಕಾರಿಗಳನ್ನು ಅವರನ್ನು ನೇಮಿಸಿರುವ ವ್ಯವಸ್ಥೆಗಿಂತ ಕೆಳಗಿನ ಯಾವುದೇ ವ್ಯವಸ್ಥೆ ವಜಾ ಮಾಡದಂತೆ, ತೆಗೆದು ಹಾಕದಂತೆ ರಕ್ಷಣೆ ಕೊಡುತ್ತದೆ. ಐಎಫ್‌ಎಸ್, ಐಎಎಸ್ ಮುಂತಾದ ಕೇಂದ್ರ ಸೇವೆಗಳ ಹಿರಿಯ ಅಧಿಕಾರಿಗಳನ್ನು, ಸುಪ್ರಿಂ ಕೋರ್ಟ್, ಹೈಕೋರ್ಟ್ ಮುಂತಾದವುಗಳ ನ್ಯಾಯಾಧೀಶರನ್ನು ನೇಮಿಸುವುದು ಭಾರತದ ರಾಷ್ಟ್ರಪತಿಗಳು. ಸಂವಿಧಾನದ ಈ ಅಂಶಗಳನ್ನು ತಿದ್ದುಪಡಿ ಮಾಡಬೇಕೇ? ಲೋಕಪಾಲ ಏಕಸದಸ್ಯ ಸಂಸ್ಥೆಯೇ, ಬಹುಸದಸ್ಯ ಸಂಸ್ಥೆಯೇ, ಅದು ನ್ಯಾಯಾಲಯದಂತಹ ಅಧಿಕಾರಗಳನ್ನೆಲ್ಲ ಚಲಾಯಿಸಬಹುದೇ? ಹಾಗಿದ್ದರೆ, ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ) ಅಥವ ಕೇಂದ್ರೀಯ ತನಿಖಾ ಕಚೇರಿ(ಸಿಬಿಐ)ಯಂತಹ ಸಂಸ್ಥೆಗಳ ಸ್ಥಾನಮಾನ ಅಥವ ಅಗತ್ಯ ಏನು? ಕೇಂದ್ರ ಸರಕಾರ ಇಂತಹ ಪ್ರಶ್ನೆಗಳ ಮೇಲೆ ರಾಜಕೀಯ ಪಕ್ಷಗಳೂ ಸೇರಿದಂತೆ ವಿವಿಧ ಭಾಗೀದಾರರೊಂದಿಗೆ ಸಮಾಲೋಚನೆಗಳ ಪ್ರಕ್ರಿಯೆಯನ್ನು ಆರಂಭಿಸಿದೆ. ದೇಶ ಇದರ ಫಲಿತಾಂಶಕ್ಕಾಗಿ ಕಾಯಬೇಕಾಗಿದೆ. ಅಂತಿಮವಾಗಿ, ನಮ್ಮ ಸಂವಿಧಾನಿಕ ವಿಧಿ-ವಿಧಾನಗಳ ಪ್ರಕಾರ, ಯಾವ ಮಟ್ಟದಲ್ಲಿಯೇ ಸಮಾಲೋಚನೆಗಳನ್ನು ನಡೆಸಿದರೂ, ಒಂದು ಶಾಸನವನ್ನು ಸಂಸತ್ತು ಮಾತ್ರವೇ ಜಾರಿಗೊಳಿಸಲು ಸಾಧ್ಯ ಆದ್ದರಿಂದ, ಸರಕಾರದ ಇವೆಲ್ಲ ಪ್ರಯತ್ನಗಳೇನೇ ಇದ್ದರೂ, ಲೋಕಪಾಲ ಮಸೂದೆಯನ್ನು ಸಂಸತ್ತಿನ ಎದುರು ತರದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.



ಈ ನಡುವೆ, ಬೇರೆ ಕೆಲವು ಸಂಗತಿಗಳಿಗೆ ಗಮನ ನೀಡಬೇಕಾಗಿದೆ. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸುವುದಲ್ಲದಿದ್ದರೂ, ತಡೆಯುವುದು ಗುರಿಯಾದರೂ, ಲೋಕಪಾಲ ವ್ಯವಸ್ಥೆಯ ಸ್ಥಾಪನೆಯಷ್ಟೇ ಸಾಲದು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಪರಿಣಾಮಕಾರಿ ಹೋರಾಟ ಬಹುಮುಖೀ ನಿಲುವನ್ನು ಆಧರಿಸಿರಬೇಕು. ಪ್ರಧಾನ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಕಚೇರಿಯನ್ನೂ ಒಳಗೊಳ್ಳುವ ಲೋಕಪಾಲ ಸಂಸ್ಥೆಯನ್ನು ಸ್ಥಾಪಿಸಬೇಕು, ಮತ್ತು ಜತೆಗೇ ಇತರ ಕ್ರಮಗಳನ್ನೂ ಆರಂಭಿಸಬೇಕು.

ಸಿಪಿಐ(ಎಂ) ಮತ್ತು ಎಡಪಕ್ಷಗಳು, ಹಲವು ವರ್ಷಗಳಿಂದ ಒಂದು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ಸ್ಥಾಪಿಸಬೇಕು ಎಂದು ಆಗ್ರಹಿಸುತ್ತಾ ಬಂದಿವೆ. ನ್ಯಾಯಾಧೀಶರು ಮತ್ತು ಇತರ ಹಿರಿಯ ನ್ಯಾಯಾಂಗ ಅಧಿಕಾರಿಗಳ ನೇಮಕವನ್ನು ನಿರ್ಧರಿಸುವುದಲ್ಲದೆ, ಈ ಆಯೋಗಕ್ಕೆ ನ್ಯಾಯಾಂಗದ ಸದಸ್ಯರ ಮೇಲಿನ ದುರ್ವರ್ತನೆಯ ಆಪಾದನೆಗಳ ತನಿಖೆ ಮಾಡುವ ಅಧಿಕಾರವೂ ಇರಬೇಕು. ಸಂಸತ್ತಿನ ಮೂಲಕ ದೋಷಾರೋಪಣೆಯ ಠರಾವನ್ನು ಮಂಡಿಸುವ ಸದ್ಯದ ಸಂವಿಧಾನಿಕ ವಿಧಾನ ಎಷ್ಟು ತೊಡಕಿನದ್ದೆಂದರೆ, ಅದನ್ನು ಅಗತ್ಯ ತಡೆಕ್ರಮವಾಗಿ ಬಳಸುವುದು ಸುಮಾರಾಗಿ ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಲೋಕಪಾಲದೊಂದಿಗೆ ಇಂತಹದೊಂದು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ಕೂಡ ರಚಿಸಬೇಕಾಗಿದೆ. ಈ ವಿಷಯದಲ್ಲೂ ಸರಕಾರ ಸಮಾಲೋಚನೆಗಳನ್ನು ಆರಂಭಿಸುವುದೊಳ್ಳೆಯದು.

ಜನಬದುಕು ಉತ್ತಮಗೊಳ್ಳಲು

ಇದರೊಂದಿಗೇ, ನಮ್ಮ ಪ್ರಜಾಸತ್ತಾತ್ಮಕ ಆಯ್ಕೆಗಳನ್ನು ಘೋರ ರೀತಿಯಲ್ಲಿ ವಿಕೃತಗೊಳಿಸುವ ಹಣಬಲದ ಹೆಚ್ಚುತ್ತಿರುವ ಬಳಕೆಯನ್ನು ನಿಗ್ರಹಿಸುವುದಕ್ಕಲ್ಲದಿದ್ದರೂ, ತಡೆಯಲಾದರೂ ಅರ್ಥಪೂರ್ಣವಾದ ಮತ್ತು ಸಾಕಷ್ಟು ಪ್ರಮಾಣದ ಚುನಾವಣಾ ಸುಧಾರಣೆಗಳನ್ನೂ ಆರಂಭಿಸಬೇಕು. ಚುನಾವಣೆಗಳಿಗೆ ಪ್ರಭುತ್ವ ನಿಧಿ ಒದಗಿಸುವ ಪ್ರಶ್ನೆಯ ಮೇಲೆ ಸ್ವಲ್ಪ ಚರ್ಚೆಗಳು ನಡೆದಿವೆ. ಅವನ್ನು ಮುಂದೊಯ್ಯಬೇಕು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಪ್ರಶ್ನೆಯನ್ನು ಮನಃಪೂರ್ವಕವಾಗಿ ಎದುರಿಸಬೇಕೆಂದಿದ್ದರೆ, ರಾಜಕೀಯ ಪಕ್ಷಗಳಿಗೆ ಎಲ್ಲ ಕಾರ್ಪೊರೇಟ್ ನಿಧಿ ನೀಡಿಕೆಯನ್ನು ನಿಷೇಧಿಸಬೇಕು. ಕಾರ್ಪೊರೇಟ್‌ಗಳು ಇಂತಹ ನಿಧಿನೀಡಿಕೆಯನ್ನು

ಪುಟ 10 ಕ್ಕೆ

ಬೀದಿ ಬದಿ ವ್ಯಾಪಾರ ಎಂಬುದು ಜನರ ಅಗತ್ಯವೂ ಹೌದು. ಬಡ ವ್ಯಾಪಾರಿಗಳ ಜೀವನಾಧಾರವೂ ಹೌದು. ಇದರಿಂದ ಏನಾದರೂ ತೊಂದರೆಗಳಿದ್ದಲ್ಲಿ ಮಾನವೀಯವಾಗಿ ಚಿಂತಿಸುವ ಧೋರಣೆ, ಪರ್ಯಾಯ ವ್ಯವಸ್ಥೆಯ ಪರಿಹಾರಬೇಕು. ಅದೊಂದು ಇಲ್ಲದೆ ಮುಸ್ಲೀಮರೇ ಅಧಿಕವಾಗಿರುವ ಈ ಬಡವರ ಮೇಲೆ ಬಿಜೆಪಿ ನಗರಪಾಲಿಕೆ ಆಡಳಿತ 'ಟೈಗರ್' ಅನ್ನು ಛೂ ಬಿಟ್ಟಿದೆ. ಆದರೆ ಈ ಜನ ಕೈಲಿ ಕೆಂಬಾವುಟ ಹಿಡಿದು ನಿಂತಿದ್ದಾರೆ. ನೋಡೋಣ ಗೆಲುವು ಯಾರದು.

ಮಂಗಳೂರು

ಬೀದಿಬದಿ ವ್ಯಾಪಾರಸ್ಥರನ್ನು ಬೀದಿಪಾಲು ಮಾಡುವ ಹುನ್ನಾರ

ಸುನೀಲ್‌ಕುಮಾರ್ ಬಜಾಲ್

ಜಗತ್ತಿನ ಬೆಳೆಯುತ್ತಿರುವ ನಗರಗಳಲ್ಲಿ ಒಂದಾದ ಮಂಗಳೂರು, ಮಹಾನಗರ ಪಾಲಿಕೆ ಭಾರತೀಯ ಜನತಾ ಪಾರ್ಟಿಯ ಆಡಳಿತದಲ್ಲಿ ಇದೆ. ಕಾಂಗ್ರೆಸ್ ಆಡಳಿತದ ನಿರಂತರ ಭ್ರಷ್ಟ ಜನವಿರೋಧಿ ಆಡಳಿತದಿಂದ ಬೇಸತ್ತ ಮಂಗಳೂರು ಜನತೆ ಬಿಜೆಪಿಯನ್ನು ಆಡಳಿತಕ್ಕೆ ತಂದರು. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಒಂಚೂರು ವ್ಯತ್ಯಾಸವಿಲ್ಲವೆಂದು ಈಗ ಮನಗಂಡಿದ್ದಾರೆ. ಭ್ರಷ್ಟಾಚಾರದಲ್ಲಿ ಸ್ವಜನ ಪಕ್ಷಪಾತದಲ್ಲಿ ಖಾಸಗೀಕರಣದಲ್ಲಿ, ತೆರಿಗೆ ಏರಿಕೆಯಲ್ಲಿ ಪಡಿಅಚ್ಚು ಒಂದೇ. ಆದರೆ ಆಡಳಿತದ ಹೆಸರು ಮಾತ್ರ ಬೇರೆಯಾಗಿದೆ. ಮಾತ್ರವಲ್ಲದೆ ಆಡಳಿತ ನಡೆಸುವಲ್ಲಿ ಕೂಡಾ ಕಾಂಗ್ರೆಸ್-ಬಿಜೆಪಿ ವಿರೋಧಪಕ್ಷವೆಂಬ ಬೇಧ ಭಾವವಿಲ್ಲದೆ ಹೊಂದಾಣಿಕೆಯಿಂದ ನಡೆಯುತ್ತಿದೆ. ಬಿಜೆಪಿ–ಕಾಂಗ್ರೆಸ್ ನೀತಿಯಿಂದ ಮಂಗಳೂರು ಜನತೆ ಬೇಸತ್ತಿದ್ದಾರೆ. ನೀರಿನ ದರ ಏರಿಕೆ ವಿಪರೀತವಾದಾಗ ಕಡಿತಗೊಳಿಸಬೇಕೆಂದು ಒತ್ತಾಯಿಸಿದ ಸಿಪಿಐ(ಎಂ) ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್, ಜೈಲು ಶಿಕ್ಷೆ ಹೇರಲಾಯಿತು. ಸ್ವಯಂ ಆಸ್ತಿ ತೆರಿಗೆಯಲ್ಲಿ ಆಗಿನ ಕಾಂಗ್ರೆಸ್, ಈಗಿನ ಬಿಜೆಪಿ ಸಮಾನ ಮನಸ್ಕರು. ಈಗ ನೀರಿನ ವಿತರಣೆ ಸಂಪೂರ್ಣ ಖಾಸಗೀಕರಣದ ಹುನ್ನಾರ ನಡೆಯುತ್ತಿದೆ. ದಲಿತ ಸಮುದಾಯ ಪಡೆಯಬೇಕಾದ ಹಕ್ಕಿಗಾಗಿ ತಿಂಗಳಿಗೊಂದು ಹೋರಾಟ ನಡೆಯುತ್ತಿದೆ.



ಜನರ ನೋವು ಬೇಡ ಬರೀ ರಿಯಲ್ ಎಸ್ಟೇಟ್ ದಂಧೆ

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ಪಡೆದಿರುವ ಬಿಜೆಪಿ ಸರ್ಕಾರ, ನಗರ ಸೌಂದರೀಕರಣಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ರಸ್ತೆ ಕಾಂಕ್ರೀಟೀಕರಣ (ಮುಖ್ಯರಸ್ತೆ) ಮಾಡಿ ಶ್ರೀಮಂತರಿಂದ ಶಹಬಾಷ್‌ಗಿರಿ ಪಡೆಯಹೊರಟಿದೆ. ಮಹಾನಗರ ಪಾಲಿಕೆ ಒಳರಸ್ತೆಗಳು ಸಂಪೂರ್ಣ ಕೆಟ್ಟು ಹೋಗಿದ್ದಾಗಲೂ ಅದನ್ನು ಸರಿಪಡಿಸುವವರೇ ಗತಿ ಇಲ್ಲ. ಬಿಜೆಪಿಯ ಕಾರ್ಪೋರೇಟರ್‌ಗಳು ಸಂಪೂರ್ಣ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮುಳುಗಿದ್ದಾರೆ. ಈಗ ಕಾಂಗ್ರೆಸ್ ಆಡಳಿತ ಹಾಕಿಕೊಟ್ಟ ಕಾರ್ಯಕ್ರಮವನ್ನು ಬಿಜೆಪಿ ಸಂಪೂರ್ಣ ಜಾರಿ ಮಾಡ ಹೊರಟಿದೆ. ಬೀದಿ ಬದಿ ವ್ಯಾಪಾರಸ್ಥರ ನಿರ್ಮೂಲನಾ ಕಾರ್ಯಕ್ರಮ.



ಮುಸ್ಲಿಂ ದ್ವೇಷಿ ಮನಸ್ಸು

ಬಿಜೆಪಿಯ ಆಡಳಿತದ ಕೋಮುವಾದ ಅಜೆಂಡಾ ಕೂಡಾ ಇವರ ಹಿಂದೆ ಅಡಗಿದೆ. ಯಾಕೆಂದರೆ ಮಂಗಳೂರಿನ ಮುಖ್ಯ ಬೀದಿಗಳಲ್ಲಿ ವ್ಯಾಪಾರ ಮಾಡುವ ನಾಗರೀಕರಲ್ಲಿ ಶೇ.80% ಜನ ಅಲ್ಪಸಂಖ್ಯಾತ ಮುಸ್ಲಿಮರು. ಅದಕ್ಕಾಗಿ ಇಲ್ಲಸಲ್ಲದ ಅಥವಾ ಸಣ್ಣಮುಟ್ಟ ತಪ್ಪುಗಳನ್ನೇ ಹಿಡಿದುಕೊಂಡು ಬೀದಿ ವ್ಯಾಪಾರಸ್ಥರ ಮೇಲೆ 'ಟೈಗರ್ ಕಾರ್ಯಾಚರಣೆ' ನಡೆಸಲಾಗುತ್ತಿದೆ. ಈ ಹೆಸರಿನಲ್ಲಿ ಬೀದಿ ಬದಿ ವ್ಯಾಪಾರ ಮಾಡುವ ಜನರನ್ನು ಓಡಿಸಿ ಅವರು ವ್ಯಾಪಾರ ಮಾಡುವ ತರಕಾರಿ, ಹಣ್ಣು ಹಂಪಲು, ತಂಪುಪಾನೀಯ, ಚಪ್ಪಲಿ, ಬಟ್ಟೆ ಬರೆ, ... ಹಾಗೂ ಇತ್ಯಾದಿ ಇತ್ಯಾದಿ ವಸ್ತುಗಳನ್ನು ಲೂಟಿ ಮಾಡಲಾಗುತ್ತಿದೆ. ನೂರು ರೂಪಾಯಿ ಯಿಂದ ರೂ.5,000 ರೂಪಾಯಿಯವರೆಗೆ ನಷ್ಟ ಮಾಡುತ್ತಿದ್ದಾರೆ. ನಗರ ಪಾಲಿಕೆ ಅಧಿಕಾರಿಗಳು, ಗುತ್ತಿಗೆದಾರ ಸಿಬ್ಬಂದಿಗಳು, ಪೋಲೀಸ್ ಇಲಾಖೆಯ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇತ್ತೀಚಿಗಿನ ಒಂದೂವರೆ ತಿಂಗಳಿಂದ ಈ ಕಾರ್ಯಾಚರಣೆ ನಡೆಯುತ್ತಿದೆ. ಸುಮಾರು ಮುನ್ನೂರಕ್ಕೂ ಮಿಕ್ಕಿರುವ ಬೀದಿ ಬದಿ ವ್ಯಾಪಾರಸ್ಥರು ದುಡಿಯಲು ಬೇರೆ ಉದ್ಯೋಗವಿಲ್ಲದವರು, ಆರ್ಥಿಕವಾಗಿ ಸಾಮರ್ಥ್ಯ ಹೀನರಾದ, ಅವಿದ್ಯಾವಂತ ಜನತೆ ಬೀದಿ ಬದಿ ವ್ಯಾಪಾರವನ್ನೇ ನಂಬಿ ಜೀವನ ಮಾಡುತ್ತಿದ್ದಾರೆ.

'ಹುಲಿ'ಯ ಕ್ರೌರ್ಯ:

ಅಸಂಘಟಿತ ವಿಭಾಗವಾದ ಬೀದಿ ಬದಿ ಕಾರ್ಮಿಕರು ಯಾವುದೇ ಸಂಘಟನೆಯ ಕಡೆಗೆ ಒಲವು ತೋರಿಸುತ್ತಿರಲಿಲ್ಲ. ಪೋಲೀಸ್ ಕಾರ್ಯಾಚರಣೆ ಆದಾಗ ಅದಕ್ಕೆ ಬಲಿಯಾಗುತ್ತಿದ್ದರು. ಎಷ್ಟೇ ದಾಳಿ ಆದರೂ, ನಷ್ಟ ಅನುಭವಿಸಿದರೂ ಹೊಟ್ಟೆಪಾಡಿಗಾಗಿ ಮರಳಿ ಮರಳಿ ತಮ್ಮ ಸಲಕರಣೆಗಳನ್ನು ಹೊತ್ತು ತಂದು ಬಳಕೆದಾರರಿಗೆ ವಸ್ತುಗಳನ್ನು ಪೂರೈಸುತ್ತಿದ್ದರು. ಆಳುವ ವರ್ಗಕ್ಕೆ ಕನಿಕರವೇ ಇಲ್ಲ. ಮೊದಲಿಗೆ ಬೀದಿ ಬದಿ ವ್ಯಾಪಾರಸ್ಥ ಸಮುದಾಯದ ಮೇಲೆ ಇಲ್ಲಸಲ್ಲದ ಆರೋಪವನ್ನು ಸೃಷ್ಟಿಸಿ ಇವರು ಇಡೀ ಸಮಾಜದ ವಿರೋಧಿಗಳು, ಸಾರ್ವಜನಿಕ ರಸ್ತೆಗೆ ತಡೆ ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳ ಮೇಲೆ ಕೈ ಹಾಕುತ್ತಾರೆ. ಜನರನ್ನು ಲೂಟಿ ಮಾಡುತ್ತಿದ್ದಾರೆ. ಕೊಳೆತ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಕೊಳೆತ ವಸ್ತುಗಳನ್ನು ಅಲ್ಲಿ ಇಲ್ಲಿ ಬಿಸಾಕಿ ರೋಗರುಜಿನ ಬರಲು ಕಾರಣರಾಗಿದ್ದಾರೆ. ಸದಾ ಗಲಾಟೆ

ಜನರ ಅಗತ್ಯ ಹಾಗೂ ವ್ಯಾಪಾರಿಗಳ ಬದುಕು

ಬೀದಿ ಬದಿ ವ್ಯಾಪಾರ ನಾಗರೀಕ ಸಮಾಜದ ಅವಿಭಾಜ್ಯ ಅಂಗ. ಬೀದಿ ಬದಿ ವ್ಯಾಪಾರ ಒಂದು ಕಡೆ ಸಾರ್ವಜನಿಕರಿಗೆ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಅನಿವಾರ್ಯವಾಗಿದ್ದರೆ, ಇನ್ನೊಂದು ಕಡೆ ಬಡ ಅಸಂಘಟಿತ ಕಾರ್ಮಿಕರ ಕುಟುಂಬ ನಿರ್ವಹಣೆಯ ಆಧಾರಸ್ತಂಭವಾಗಿದೆ. ಜಗತ್ತಿನೆಲ್ಲಡೆ ಎಲ್ಲಾ ದೇಶಗಳ ಪ್ರಮುಖ ನಗರಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಸಾಮಾನ್ಯ ಜನತೆಯ ಬದುಕಿಗೆ ಸಹಾಯವಾಗುವ ರೀತಿಯಲ್ಲಿ ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಜಗತ್ತಿನ ಆಳುವ ವರ್ಗಗಳು ಮಾತ್ರ ಬೀದಿಬದಿ ವ್ಯಾಪಾರವನ್ನು ಶತಾಯಗತಾಯ ಕೊನೆಗಾಣಿಸಬೇಕೆಂದು ದೃಢ ತೀರ್ಮಾನ ಕೈಗೊಂಡಿವೆ. ಸಮಾಜದಲ್ಲಿ ಬಂಡವಾಳಗಾರರ ಹಿತಾಸಕ್ತಿಗಳನ್ನೇ ಕಾಯುವ ಸರ್ಕಾರಗಳು ಬೀದಿ ಬದಿ ವ್ಯಾಪಾರ ಮಾಡುವ ಬಡ ಜನತೆಯ ಮೇಲೆ ಕೆಂಗಣ್ಣು ಬೀರಿದೆ. ಜಾಗತೀಕರಣದ ಅನಿಷ್ಟಗಳಾದ ಸೌಂದರೀಕರಣದ ನೆಪದಲ್ಲಿ ಮಂಗಳೂರು ಮಹಾನಗರ ಪಾಲಿಕೆಯು ಬೀದಿ ಬದಿ ವ್ಯಾಪಾರಸ್ಥರನ್ನು ಬೀದಿಗೆ ತಳ್ಳುವ ವ್ಯವಸ್ಥಿತ ಹುನ್ನಾರ ನಡೆಸುತ್ತಿದೆ.

ಮಾಡುತ್ತಿರುತ್ತಾರೆ ಇತ್ಯಾದಿ ಇತ್ಯಾದಿ. ಅಪಪ್ರಚಾರ ಪ್ರಾರಂಭಿಸಿ, ಜನಾಭಿಪ್ರಾಯವನ್ನು ಆಡಳಿತದ ಪರವಾಗಿಸಿ ಈಗ ಟೈಗರ್ ಎಂಬ ಹೆಸರಿನಲ್ಲಿ ಎರಡು ಲಾರಿಗೆ ಫ್ಲೆಕ್ಸ್, ಹುಲಿ ಪಟ್ಟೆಯ ಕವರನ್ನು ಹೊದಿಸಿ ಅವರಲ್ಲಿ ಟೈಗರ್ ಗುತ್ತಿಗೆದಾರರ ಸಿಬ್ಬಂದಿಗಳನ್ನು ಹಾಕಿ, ಮನಾಪ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳೊಂದಿಗೆ ದಾಳಿ ನಡೆಯುತ್ತಿದೆ. ಬೀದಿ ಬದಿ ವ್ಯಾಪಾರಸ್ಥರು ದಿನಾ ತಮ್ಮ ಊರಿನಿಂದ, ಮನೆಗಳಿಂದ ಬರುವುದು ರೈಡ್ ಆಗುತ್ತೇವೆಯೋ, ಇಲ್ಲವೋ ಎಂದು ನೋಡಿ ವಾಪಸ್ಸಾಗುವುದು ದಿನಾ ರೂಢಿಯಾಗಿದೆ.

ಕಾಂಗ್ರೆಸ್ ನೇತೃತ್ವದ ಹಿಂದಿನ ನಗರ ಪಾಲಿಕೆಯು ಕೂಡ ಬೀದಿ ಬದಿ ವ್ಯಾಪಾರಸ್ಥರ ನಿರ್ನಾಮಕ್ಕೆ ಕಾರ್ಯಕ್ರಮವನ್ನು ಅಂದು ಹಾಕಿತ್ತು. ಆದರೆ ಅದು ಕೇವಲ ನಾಟಕೀಯವಾಗಿತ್ತು. ಯಾವುದೋ ಒಂದು ಲಾರಿಯಲ್ಲಿ ಸಿಬ್ಬಂದಿಗಳು, ಅಧಿಕಾರಿಗಳು ಒಂದು ಸಿಕ್ಕಿದ್ದೆಲ್ಲವನ್ನು ದೋಚಿಕೊಂಡು ಹೋಗಿ ಬಳಿಕ ಅರ್ಧ ಗಂಟೆಯಲ್ಲೇ ಅದನ್ನು ವಾಪಸ್ ಕೊಡುತ್ತಿದ್ದರು. ವ್ಯಾಪಾರಿಗಳು ಮತ್ತೆ ತಮ್ಮ ಕಾರ್ಯವನ್ನು ಮುಂದುವರಿಸುತ್ತಿದ್ದರು. ಈ ಸಂದರ್ಭದಲ್ಲಿ ಬೆರಳೆಣಿಕೆಯಷ್ಟು ವ್ಯಾಪಾರಸ್ಥರು ಕಾಂಗ್ರೆಸ್‌ನ ಹಿಂದೆ, ಬಿಜೆಪಿಯವರ ಹಿಂದೆ ಅಲೆದಾಡಿದರೇ ಹೊರತು ನಾವು ಸಂಘಟಿತರಾಗಬೇಕು. ಹೋರಾಟ ನಡೆಸಬೇಕು. ಮುಂದೊಂದು ದಿನ ಅಪಾಯ ಎದುರಾಗಲಿದೆ ಎಂದು ಅವರು ತಿಳಿಯಲೇ ಇಲ್ಲ. ಅಂದಿನ ಕಾಂಗ್ರೆಸ್ ತೀರ್ಮಾನವನ್ನು ಇಂದು ಬಿಜೆಪಿಯವರು ಮತ್ತಷ್ಟು ಗಟ್ಟಿಗೊಳಿಸಿದರು. ದಿನಕ್ಕೆ 2–3 ಬಾರಿ ಟೈಗರ್ ಎಂಬ ಹೆಸರಿನ ಲಾರಿಯಲ್ಲಿ ಕಾರ್ಯಾಚರಣೆ ನಡೆಸಿ ಸಾವಿರಾರು ರೂ.ಮೌಲ್ಯದ ವಸ್ತುಗಳನ್ನು ದೋಚಿದರೆ ಹೊರತು ವಾಪಸ್ ಮಾಡಲಿಲ್ಲ.

ಇದೇ ಸಂದರ್ಭದಲ್ಲಿ ಬಹುಸಂಖ್ಯೆಯಲ್ಲಿರುವ ಮುಸ್ಲಿಂ ಬೀದಿ ಬದಿ ವ್ಯಾಪಾರಸ್ಥರ ಪರವಾಗಿ ನಾವಿದ್ದೇವೆ ಎಂದು ಮುಸ್ಲಿಂ ಲೀಗ್ ತನ್ನ ಬೇಳೆ ಬೇಯಿಸಿಕೊಳ್ಳಲು ಹೊರಟಿತು. ಮೇ 2ರಂದು ಜಿಲ್ಲಾಧಿಕಾರಿಗಳ ಕಛೇರಿಯೆದುರು 1 ದಿನದ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಂಡಿತು. ಆದರೆ ಅಲ್ಪಸಂಖ್ಯಾತ ಬೀದಿ ಬದಿ ವ್ಯಾಪಾರಸ್ಥರೇ ಇದಕ್ಕೆ ಸೊಪ್ಪು ಹಾಕಲಿಲ್ಲ. ಯಾಕೆಂದರೆ ಬೀದಿಬದಿ ವ್ಯಾಪಾರದಲ್ಲಿ ಎಲ್ಲಾ ಜಾತಿ ಧರ್ಮ ಭಾಷೆಯ ಜನರಿದ್ದರು. ಸತ್ಯಾಗ್ರಹಕ್ಕೆ ಸಿಐಟಿಯು ಹಾಗೂ ಡಿವೈಎಫ್‌ಐ ಮುಖಂಡರನ್ನು ಕರೆಸಲೇಬೇಕೆಂದು ಪಟ್ಟುಹಿಡಿದರು. ಬೇರೆ ದಾರಿ ಕಾಣಲಾರದೆ ಲೀಗ್‌ನ ಮುಖಂಡರು ಸಿಐಟಿಯು ಹಾಗೂ ಡಿವೈಎಫ್‌ಐನ ಮುಖಂಡರಿಗೆ ಆಹ್ವಾನ ನೀಡಿದರು. ಬೀದಿಬದಿ ವ್ಯಾಪಾರಸ್ಥರ ಬದುಕಿನ ಬಗ್ಗೆ ವಸ್ತುನಿಷ್ಠವಾಗಿ ಅರಿತು, ಸ್ಪಷ್ಟವಾದ ಕಣ್ಣೋಟದಿಂದ ಹೋರಾಟವನ್ನು ಮುಂದುವರಿಸುವ ದೃಢ ಸಂಕಲ್ಪದೊಂದಿಗೆ ಸಿಐಟಿಯು ಮಧ್ಯೆ ಪ್ರವೇಶಿಸಿತು. ಸತ್ಯಾಗ್ರಹವನ್ನು ಬೆಂಬಲಿಸಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವಶೆಟ್ಟಿ, ಡಿವೈಎಫ್‌ಐನ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿಯವರು ಮಾತನಾಡಿದರು. ಅದೇ ದಿನ ಸಂಜೆ ಸಿಐಟಿಯು ನೇತೃತ್ವದಲ್ಲಿ ಬೀದಿ ಬದಿ ವ್ಯಾಪಾರಸ್ಥರ ಹೋರಾಟವನ್ನು ಮುಂದುವರೆಸಲು ಸಭೆಯನ್ನು ಆಯೋಜಿಸಿದಾಗ ಮುಸ್ಲಿಂ ಲೀಗ್ ಅದಕ್ಕೆ ತಡೆಯೊಡ್ಡಿ ಶಾಸಕರಾದ ವಿ.ಟಿ.ಖಾದರ್‌ರವರನ್ನು ಕರೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿ, ತಾನು ವಿಧಾನಸಭೆಯೊಳಗೆ ಈ ಬಗ್ಗೆ ಮಾತನಾಡುತ್ತೇನೆ ಎಂದು ಹೇಳಿಸುವ ಮೂಲಕ ಹೋರಾಟವನ್ನು ಶಮನ ಮಾಡಲು ಪ್ರಯತ್ನಿಸಿದರು.



ನಿರೀಕ್ಷೆ ಮೀರಿ ಸ್ಪಂದನೆ

ಆದರೆ ಸಿಐಟಿಯು ಸಮಾವೇಶವನ್ನು ಆಯೋಜಿಸಿತು. ನಿರೀಕ್ಷೆಗೂ ಮೀರಿ ಭಾಗವಹಿಸಿದ ಬೀದಿ ಬದಿ ವ್ಯಾಪಾರಸ್ಥರ ಸಮಾವೇಶವನ್ನು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಉದ್ಘಾಟಿಸಿದರು. ಸಮಾವೇಶವು 'ಬೀದಿ ಬದಿ ವ್ಯಾಪಾರಸ್ಥರ ಸಂಘ ಮಂಗಳೂರು' ಎಂಬ ನಾಮಧೇಯದೊಂದಿಗೆ ಸಮಿತಿಯನ್ನು ರಚಿಸಿತು. ಸಂಘದ ಗೌರವಾಧ್ಯಕ್ಷರಾಗಿ ಸುನೀಲ್‌ಕುಮಾರ್‌ಬಜಾಲ್, ಅಧ್ಯಕ್ಷರಾಗಿ ಬಿ.ಎಂ.ಹಸನ್, ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಮುಸ್ತಾಫ, ಖಜಾಂಚಿಯಾಗಿ ಅತಾವುಲ್ಲಾ ಸೇರಿದಂತೆ 25 ಮಂದಿಯ ಸಮಿತಿಯನ್ನು ರಚಿಸಲಾಯಿತು.

ಬೀದಿ ಬದಿ ವ್ಯಾಪಾರಸ್ಥರ ನಿರ್ನಾಮಕ್ಕೆ ಟೊಂಕಕಟ್ಟಿ ನಿಂತಿರುವ ಬಿಜೆಪಿ ನೇತೃತ್ವದ ನಗರ ಪಾಲಿಕೆಯನ್ನೇ ಕೇಂದ್ರೀಕರಿಸಿ ಹೋರಾಟ ನಡೆಸಬೇಕೆಂಬ ತೀರ್ಮಾನಕ್ಕೆ ಬದ್ಧವಾಗಿ ತಾ:19.05.2011 ರಂದು ಮನಪಾ ಕಚೇರಿಯೆದುರು ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. 'ಟೈಗರ್ ಕಾರ್ಯಾಚರಣೆ'ಯನ್ನು ತಕ್ಷಣ ನಿಲ್ಲಿಸಬೇಕು. ಬೀದಿ ಬದಿ ವ್ಯಾಪಾರಕ್ಕೆ ಸಮರ್ಪಕ ವ್ಯವಸ್ಥೆಯನ್ನು ಕಲ್ಪಿಸಬೇಕು, ಇದಕ್ಕಾಗಿ ಮನಪಾ ಆಡಳಿತ ಮತ್ತು ಯೂನಿಯನ್ ಮುಖಂಡರ ಸಭೆ ಕರೆಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನಿಟ್ಟ ಸತ್ಯಾಗ್ರಹವನ್ನು ಬೆಂಬಲಿಸಿ, ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಕೆ.ಬಾಲಕೃಷ್ಣಶೆಟ್ಟಿ, ಕಟ್ಟಡ ಕಾರ್ಮಿಕರ ಸಂಘಟನೆಯ ವಾಸುದೇವ ಎಸ್.ಪಿ., ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು, ಸಿಪಿಐ(ಎಂ) ಕಾರ್ಪೋರೇಟರ್ ಜಯಂತಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ಭಾರತಿ ಬೋಳಾರ ಮುಂತಾದವರು ಮಾತನಾಡಿದರು. ಮೇಯರ್, ಕಮೀಷನರ್ ಬರಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದಾಗ ಪ್ರತಿಭಟನಾ ಸ್ಥಳಕ್ಕೆ ಅವರಿಬ್ಬರೂ ಆಗಮಿಸಿ ಈ ಬಗ್ಗೆ ಕೆಲವೇ ದಿನಗಳಲ್ಲಿ ಜಂಟಿ ಸಭೆ ಕರೆಯುವುದಾಗಿ ಆಶ್ವಾಸನೆ ನೀಡಿದರು. ಅಲ್ಲಿಯವರೆಗೆ ಯಥಾಸ್ಥಿತಿ ಕಾಪಾಡಬೇಕೆಂದು ಟೈಗರ್ ಕಾರ್ಯಾಚರಣೆ ಕೂಡಲೇ ನಿಲ್ಲಿಸಿ, ಹಿಂದಿನ ಯಥಾಸ್ಥಿತಿಯನ್ನೇ ನಾವು ಮುಂದುವರಿಸುತ್ತೇವೆ ಎಂದು ಸಂಘದ ಮುಖಂಡರು ಪಟ್ಟುಹಿಡಿದಾಗ ಮೇಯರ್, ಕಮೀಷನರ್ ಕಕ್ಕಾಬಿಕ್ಕಿಯಾದರು. ಈ ಬಗ್ಗೆ ಸಂಜೆ:5.30ಕ್ಕೆ ಮೇಯರ್ ಚೇಂಬರ್‌ನಲ್ಲಿ ಸಭೆ ನಡೆಸೋಣವೆಂದರು ಹೇಳಿ ಅಲ್ಲಿಂದ ಕಾಲ್ಕಿತ್ತರು.

ಮತ್ತೆ ಆರೋಪಗಳ ಮಳೆ- ಚಳುವಳಿಕಾರರ ಸವಾಲ್

ಸಂಜೆ ಸುಮಾರು 1 ಗಂಟೆಗಳ ಕಾಲ ಜರುಗಿದ ಸಭೆಯಲ್ಲಿ ವ್ಯಾಪಾರಸ್ಥರ ಮೇಲೆ ಆರೋಪಗಳ ಸುರಿಮಳೆಗೈದರೆ ಹೊರತು ಟೈಗರ್ ಕಾರ್ಯಾಚರಣೆ ನಿಲ್ಲಿಸಲು ಮನಪಾ ಮುಂದಾಗಲಿಲ್ಲ. "ಬೀದಿ ಬದಿ ವ್ಯಾಪಾರ ನಿಲ್ಲಿಸುವುದಾದರೆ ನಮಗೆ ದಿನಕ್ಕೆ 250 ರೂ. ನಗರ ಪಾಲಿಕೆ ನೀಡಬೇಕು. ಇಲ್ಲದಿದ್ದಲ್ಲಿ ನಮ್ಮನ್ನೆಲ್ಲಾ ಜೈಲಿಗೆ ಹಾಕಿರಿ" ಎಂದು ಸಂಘದ ಮುಖಂಡರು ಹೇಳಿದಾಗ ಮೇಯರ್, ಕಮೀಷನರ್‌ರವರಲ್ಲಿ ಬೇರೆ ಉತ್ತರ ಇರಲಿಲ್ಲ. ಈ ಬಗ್ಗೆ ಕುಲಂಕುಷವಾಗಿ ಚರ್ಚಿಸಲು ಮೇ 23 ರಂದು ಬೆಳಿಗ್ಗೆ 11 ಗಂಟೆಗೆ ಜಂಟಿ ಸಭೆಯನ್ನು ಆಯೋಜಿಸುವುದಾಗಿ ಮೇಯರ್, ಕಮೀಷನರ್‌ರವರು ಘೋಷಿಸಿದರು. ಕೊನೆಗೂ

ಪುಟ 10ಕ್ಕೆ

ಹೋರಾಟದಿಂದ ಪರಿಸ್ಥಿತಿಯೇ ಬದಲಾಯಿತು

'ದಿನಾ ಸಾಯೋವವರಿಗೆ ಅಳೋವವರ್ಯಾರು' ಎಂಬಂತೆ ಬಡವರ ಪ್ರಶ್ನೆಗಳು ಯಾವತ್ತೂ ವಿಷಯವಾಗುವುದೇ ಇಲ್ಲ. ಬೀದಿ ಬದಿ ವ್ಯಾಪಾರವೆನ್ನುವುದು ವಿಷಯವೇ ಅಲ್ಲ. ಮೊದಲು ನಾವು ಹೋರಾಟ ಹಾಗೂ ಸಂಘಟನೆಯ ಮೂಲಕ ವಿಷಯವನ್ನಾಗಿ ಮಾಡಬೇಕೆಂದು' ಹೋರಾಟಕ್ಕೆ ನಿರಂತರ ಮಾರ್ಗದರ್ಶನ ನೀಡಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಪದೇ ಪದೇ ಹೇಳುತ್ತಿದ್ದರು. ಬೀದಿ ಬದಿ ವ್ಯಾಪಾರಸ್ಥರ ಬಗ್ಗೆ ಸಾಮಾನ್ಯಜನತೆ ಮಧ್ಯಮವರ್ಗ ಹಾಗೂ ಸಾರ್ವಜನಿಕರು ಅತ್ಯಂತ ಕೀಳಾಗಿ ಪರಿಗಣಿಸಿದ್ದರು. ಮಾಧ್ಯಮ ವಲಯದಲ್ಲಂತೂ ಇವರ ಬಗ್ಗೆ ಉತ್ತಮ ಅಭಿಪ್ರಾಯವಿರಲಿಲ್ಲ.

ಯಾವಾಗ ಹಂತ ಹಂತವಾದ ಹೋರಾಟ ಬೆಳೆದು ಬಂತೋ ಕ್ರಮೇಣ ಜನರಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಬೀದಿ ಬದಿ ವ್ಯಾಪಾರಸ್ಥರ ವಾಸ್ತವ ಬದುಕಿನ ಬಗ್ಗೆ ಚಿಂತಿಸಲಾರಂಭಿಸಿದರು. ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಕೇಂದ್ರ ಸರ್ಕಾರವು 2009ರಲ್ಲಿ ಅಂಗೀಕರಿಸಿದ ರಾಷ್ಟ್ರೀಯ ನೀತಿಗಳು ಬೀದಿ ಬದಿ ವ್ಯಾಪಾರಸ್ಥರ ಪರವಾಗಿದೆ, ಯಾಕೆ ಸ್ಥಳೀಯಾಡಳಿತ ಬಡವರ ಪರವಾಗಿ ವ್ಯವಸ್ಥೆ ಮಾಡಲಾರದು ಎಂಬ ಅಭಿಪ್ರಾಯ ವ್ಯಾಪಕವಾಗಿ ಕೇಳಿಬಂತು. ಎಲ್ಲಾ ಪತ್ರಿಕೆಗಳು–ಟಿ.ವಿ. ಮಾಧ್ಯಮಗಳು ಸಂಪೂರ್ಣವಾಗಿ ಬೀದಿಬದಿ ವ್ಯಾಪಾರಸ್ಥರ ಪರವಾಗಿ ನಿಂತವು. ವಾರ್ತಾಭಾರತಿ ಪತ್ರಿಕೆಯು ಸಂಪಾದಕೀಯವನ್ನೇ ಬರೆಯಿತು. ನಮ್ಮ ಟಿ.ವಿ. ಹಾಗೂ ವಿ4 ಚಾನಲ್‌ಗಳು ಈ ಬಗ್ಗೆ ವಿಶೇಷ ಕಾರ್ಯಕ್ರಮವನ್ನೇ ನಡೆಸಿತು. ಅನುಪಮಾ ಎಂಬ ಮ್ಯಾಗಜಿನ್ ಈ ಬಗ್ಗೆ ಪ್ರಮುಖ ಸುದ್ದಿಯನ್ನಾಗಿ ಬಿತ್ತರಿಸಿತು. ನಗರದಲ್ಲಿರುವ ಮಧ್ಯಮವರ್ಗದ ಜನತೆ, ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು ಹೋರಾಟಕ್ಕೆ ಬೆಂಬಲ ನೀಡಿದರು. ಹೀಗೆ ನಿರಂತರ ಹೋರಾಟವು ಹೇಗೆ ಪರಿಸ್ಥಿತಿಯನ್ನೇ ಬದಲಾಯಿಸುತ್ತದೆ ಎಂಬುದಕ್ಕೆ ಬೀದಿ ಬದಿ ವ್ಯಾಪಾರಸ್ಥರ ಸಮರಶೀಲ ಹೋರಾಟವೇ ಸಾಕ್ಷಿ.

ಬೀದಿಬದಿ ವ್ಯಾಪಾರಸ್ಥರು ಬೀದಿಪಾಲು

ಪುಟ 5 ರಿಂದ

ಟೈಗರ್ ಕಾರ್ಯಾಚರಣೆ ನಿಲ್ಲಿಸುವ ಬಗ್ಗೆ ಇತ್ಯರ್ಥವಾಗಲೇ ಇಲ್ಲ. ಒಂದು ವೇಳೆ ನೀವು ಟೈಗರ್ ಕಾರ್ಯಾಚರಣೆ ನಡೆಸಿದರೆ ಬೀದಿಯಲ್ಲೇ ಅದಕ್ಕೆ ತಡೆಯೊಡ್ಡಲಾಗುವುದು ಎಂದು ಸಂಘದ ಮುಖಂಡರು ಸಭೆಯಲ್ಲಿ ಸವಾಲೆಸೆದು ಹೊರ ನಡೆದರು.

ಪ್ರತಿರೋಧ ಮತ್ತು ಜನ ಬೆಂಬಲ:

ಮರುದಿನ (ಮೇ 20) ಸಂಜೆ ಸುಮಾರು 150 ರಷ್ಟು ಬೀದಿ ಬದಿ ವ್ಯಾಪಾರಸ್ಥರು ಸಿಐಟಿಯು ಕಛೇರಿಯಿಂದ ಕೆಂಬಾವುಟವನ್ನು ಹಿಡಿದು ಮೆರವಣಿಗೆಯಲ್ಲಿ ಹೊರಟು ಸ್ಟೇಟ್ ಬ್ಯಾಂಕಿನಲ್ಲಿ ಬೀದಿ ಬದಿ ವ್ಯಾಪಾರ ನಡೆಸಿದರು. ಸಾರ್ವಜನಿಕರೂ ಕೂಡ ಬೆಂಗಾವಲಾಗಿ ನಿಂತರು. ಪೋಲೀಸರೂ ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಿಸಲು ಹರಸಾಹಸ ಪಟ್ಟರು. ಕೊನೆಗೂ ಆಗಮಿಸಿದ 'ಟೈಗರ್' ಲಾರಿ ಹಾಗೂ ಅಧಿಕಾರಿಗಳು ಪರಿಸ್ಥಿತಿ ಕೈಮೀರಿ ಹೋಗುವ ಸಂಭವವಿದೆ ಎಂದು ಅರಿತು, ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ವಾಪಸ್ ಹೋದರು. ಬಳಿಕ 3 ದಿನ ನಗರದಲ್ಲಿ ಟೈಗರ್ ಕಾರ್ಯಾಚರಣೆ ಇರಲಿಲ್ಲ. ಹೋರಾಟಕ್ಕೆ ಸಾರ್ವಜನಿಕ ಬೆಂಬಲ ಪಡೆಯುವ ಸಲುವಾಗಿ ಮೇ 21ರಂದು ನಗರದಾದ್ಯಂತ ಪಾದಯಾತ್ರೆ ಯನ್ನು ನಡೆಸಲಾಯಿತು. ಇದಕ್ಕೆ ಸಾರ್ವಜನಿಕ ರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಸಭೆ ರದ್ದು : ಕಮೀಷನರ್ ಕಛೇರಿ ಘೇರಾವ್:

ಮೇ 23ರ ಸಭೆಗೆ ವ್ಯಾಪಕ ತಯಾರಿ ನಡೆಸಿದ ಸಂಘವು ನೂರಾರು 200ರಷ್ಟು ಬೀದಿ ಬದಿ ವ್ಯಾಪಾರಸ್ಥರು ಮನಪಾ ಕಚೇರಿಯೆದುರು ಜಮಾಯಿಸಿದರು. ಇನ್ನೇನು ಸಭೆ ಪ್ರಾರಂಭವಾಗಲಿಕ್ಕಿದೆ ಎಂದು ಕಚೇರಿಯ ಒಳಗಡೆ ಹೋದರೆ ಮೇಯರ್, ಕಮೀಷನರ್ ಪರಾರಿ, ಸಭೆ ರದ್ದು, ಈ ಬಗ್ಗೆ ಸಂಘದ ಮುಖಂಡರಿಗೆ ಯಾವುದೇ ಮುನ್ಸೂಚನೆಯನ್ನು ನೀಡಲಿಲ್ಲ. ಆಕ್ರೋಶಗೊಂಡ ಬೀದಿಬದಿ ವ್ಯಾಪಾರಸ್ಥರು ಕಮೀಷನರ್ ಕಚೇರಿಗೆ ಘೇರಾವ್ ಹಾಕಿದರು. ನಿಗದಿಪಡಿಸಿದ ಸಭೆಯನ್ನು ಏಕಾಏಕಿ ರದ್ದುಗೊಳಿಸಿದ ಮನಪಾದ ಕ್ರಮವನ್ನು ಖಂಡಿಸಲಾಯಿತು. ಕೊನೆಗೆ ಸ್ಥಳಕ್ಕೆ ಆಗಮಿಸಿದ



ಜಂಟಿ ಆಯುಕ್ತರು, ಕಂದಾಯ ಅಧಿಕಾರಿಗಳು ಹಾಗೂ ಪೋಲೀಸ್ ಅಧಿಕಾರಿಗಳು ಪ್ರತಿಭಟನಾಕಾರರನ್ನು ಸಮಾಧಾನ ಪಡೆಯಲೆತ್ನಿಸಿದರು. ಟೈಗರ್ ಕಾರ್ಯಾಚರಣೆ ನಿಲ್ಲಿಸಿ, ಸಭೆಗೆ ದಿನಾಂಕ ನಿಗದಿಪಡಿಸಿ ಎಂದು ವ್ಯಾಪಾರಸ್ಥರು ಪಟ್ಟು ಹಿಡಿದಾಗ ಅಧಿಕಾರಿಗಳು ಮೇಯರ್-ಕಮೀಷನರ್ ಬಳಿ ಪೋನ್ ಸಂಪರ್ಕ ಮಾಡಿ ಮೇ 26ರಂದು ಸಂಜೆ 3-30ಕ್ಕೆ ಸಭೆ ನಡೆಸುವುದಾಗಿಯೂ ಹಾಗೂ ಅಲ್ಲಿಯ ತನಕ ಟೈಗರ್ ಕಾರ್ಯಾಚರಣೆ ಮಾಡುವುದಿಲ್ಲವೆಂದು ಭರವಸೆ ನೀಡಿದರು.

ಮತ್ತೆ ಮೈಮೇಲೆ ಹಾರಿದ ಬಿಜೆಪಿ 'ಟೈಗರ್':

ಈ ಎಲ್ಲಾ ಬೆಳವಣಿಗೆಗಳನ್ನು ಸಹಿಸದ ಬಿಜೆಪಿ ಆಡಳಿತ ಬೀದಿ ಬದಿ ವ್ಯಾಪಾರಸ್ಥರಿಗೆ ಬುದ್ಧಿ ಕಲಿಸಬೇಕೆಂದು ಮರುದಿನ (ಮೇ 24) ರಂದು 100-150ರಷ್ಟು ಪೋಲೀಸರನ್ನು ಮುಂದಿಟ್ಟು ಟೈಗರ್ ಕಾರ್ಯಾಚರಣೆ ನಡೆಸಿತು. ಬೀದಿ ಬದಿ ವ್ಯಾಪಾರಸ್ಥರು ಉಗ್ರಗಾಮಿ ಗಳೆಂಬಂತೆ ಅವರನ್ನು ತಪಾಸಣೆಗೊಳ ಪಡಿಸಲಾಯಿತು. ಕಾರ್ಯಾಚರಣೆಗೆ ತಡೆಯೊಡ್ಡಿದರೆ ಬೀದಿಬದಿ ವ್ಯಾಪಾರಸ್ಥರನ್ನು ಜೈಲಿಗೆ ಹಾಕುವ ಮೂಲಕ ಮೇ 26ರ ಸಭೆಯನ್ನು ನಡೆಯ ಕೂಡದು ಎಂಬ ಹತಾಶಾ ಚಿಂತನೆ ನಡೆಸಿತು. ಆದರೆ ಯಾವುದೇ ಅನಾಹುತಗಳಿಗೆ ದಾರಿ ಮಾಡಿಕೊಡಬಾರದೆಂಬ ಸಂಘದ ತೀರ್ಮಾನದಂತೆ ಶಾಂತಿಯುತವಾಗಿ ವರ್ತಿಸಿದರು. ಇಷ್ಟೆಲ್ಲಾ ಕಿತಾಪತಿಗಳನ್ನು ಮಾಡಿದ್ದರೂ ಅಂದು ಕೂಡ ಅವರ ಕೈಗೆ ಯಾವುದೇ ವಸ್ತುಗಳು ಸಿಗದೆ ಬರಿಗೈಯಲ್ಲಿ ವಾಪಸ್ಸಾದರು.

ಮೇ 26ರ ಸಭೆಗೆ ತಯಾರಿ ನಗರದೆಲ್ಲೆಡೆ ಬಹಳ ಜೋರಾಗಿ ನಡೆಯುತ್ತಿದ್ದಾಗ ಮುಂದಿನ ದಿವಸ ಸಭೆ ರದ್ದಾಗಿದೆ, ಜೂನ್ 2ಕ್ಕೆ ನಿಗದಿಯಾಗಿದೆ ಎಂದು ಮನಪಾ ಕಚೇರಿಯಿಂದ ಕರೆ ಬಂತು. ಆದರೂ ಧೃತಿಗೆಡದ ವ್ಯಾಪಾರಸ್ಥರು 26 ರಂದು ಮತ್ತೆ ಮನಪಾ ಕಚೇರಿಯೆದುರು ಜಮಾವಣೆಗೊಂಡರು. ಸಭೆಯನ್ನು ನಡೆಸಿ ಸಮಸ್ಯೆ ಇತ್ಯರ್ಥ ಪಡಿಸುವ ಬದಲು ಮುಂದಕ್ಕೆ ಹಾಕುವ ಮೂಲಕ ಹೋರಾಟದ ಕಾವನ್ನು ತಣ್ಣಗಾಗಿಸಲು ಕುತಂತ್ರ ನಡೆಸಿತು. ಇದಕ್ಕೂ ಬಗ್ಗದ ವ್ಯಾಪಾರಸ್ಥರು ಮೇ 27ರಂದು ನಗರದ ಹೃದಯಭಾಗದಲ್ಲಿ ರಸ್ತೆ ತಡೆ ಚಳುವಳಿ ನಡೆಸಿ ಬಂಧನಕ್ಕೊಳಗಾದರು. ಮೇ 28ರಂದು ಮನಪಾದ ಸಾಮಾನ್ಯ ಸಭೆಯು ನಡೆಯಲಿರುವುದರಿಂದ ಅಂದಿನಿಂದಲೇ ಮನಪಾ ಕಛೇರಿಯೆದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಲಾಯಿತು. ಸತ್ಯಾಗ್ರಹವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವರವರು ಉದ್ಘಾಟಿಸಿದರು. ಈ ಮಧ್ಯೆ ಮನಪಾದ ಪ್ರತಿಪಕ್ಷ ನಾಯಕರಾದ ಲ್ಯಾನ್ಸಿಲಾಟ್ ಪಿಂಟೋ, ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಸಿಪಿಐ(ಎಂ) ಪಕ್ಷದ ಕಾರ್ಪೋರೇಟರ್‌ಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಕಂಡು ಮನವಿ ಅರ್ಪಿಸಲಾಯಿತು. ಸಮಸ್ಯೆಯ ಗಂಭೀರತೆಯನ್ನು ವಿವರಿಸಲಾಯಿತು. ಮಾತ್ರವಲ್ಲದೆ ನಗರಾಭಿವೃದ್ಧಿ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಹಾಗೂ ಶಾಸಕರಾದ ಬಿ.ರಮಾನಾಥ ರೈ, ಮಂಗಳೂರು ಶಾಸಕರಾದ ಎನ್.ಯೋಗೇಶ್ ಭಟ್ ರವರಿಗೂ ಮನವಿ ನೀಡಲಾಯಿತು.

ಇದರ ಭಾಗವಾಗಿಯೇ ಮನಪಾದ ಸಾಮಾನ್ಯ ಸಭೆಯು ಬೀದಿ ಬದಿ ವ್ಯಾಪಾರಸ್ಥರ ಬದುಕಿನ ಬಗ್ಗೆ ಬೆಳಕು ಚೆಲ್ಲಿತು. ಕಾಂಗ್ರೆಸ್-ಸಿಪಿಐ(ಎಂ)-ಜೆಡಿ(ಎಸ್) ಹಾಗೂ ಪಕ್ಷೇತರ ಕಾರ್ಪೋರೇಟರ್‌ಗಳು ಟೈಗರ್ ಕಾರ್ಯಾಚರಣೆ ನಿಲ್ಲಿಸಬೇಕು. ಬೀದಿ ಬದಿ ವ್ಯಾಪಾರಸ್ಥರಿಗೆ ಸಮರ್ಪಕ ವ್ಯವಸ್ಥೆ ಮಾಡಬೇಕೆಂದು ಒಕ್ಕೊರಲಿನಿಂದ ಆಗ್ರಹಿಸಿದರು. ಕೊನೆಗೂ ಮೇಯರ್‌ರವರು ಈ ಬಗ್ಗೆ ಜೂನ್ 2 ರಂದು ಪ್ರತ್ಯೇಕವಾಗಿ ಜಂಟಿ ಸಭೆ ನಡೆಸಿ ಚರ್ಚಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ●

ಭ್ರಷ್ಟಾಚಾರದ ವಿರುದ್ಧ ಹೋರಾಟ

ಪುಟ 7 ರಿಂದ

ಒಂದು ಹೂಡಿಕೆಯೆಂದೇ ಪರಿಗಣಿಸುತ್ತಿದ್ದು, ಅದು ರಾಜಕೀಯ ಭ್ರಷ್ಟಾಚಾರದ ಒಂದು ಪ್ರಮುಖ ಮೂಲಕಾರಣವಾಗುತ್ತದೆ. ಕಾರ್ಪೋರೇಟ್‌ಗಳು ಖಂಡಿತವಾಗಿಯೂ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಕ್ರೋಡೀಕರಿಸಲು ತಮ್ಮ ಕೊಡುಗೆಯನ್ನು ನೀಡಬೇಕು. ಈ ಗುರಿಸಾಧನೆಗೆ, ಅವರ ಕೊಡುಗೆಗಳು ಮತ್ತು ನಿಧಿ ನೀಡಿಕೆ ಚುನಾವಣಾ ಆಯೋಗ ನಡೆಸುವ ಒಂದು ಸಂಗ್ರಹನಿಧಿಗೆ ಹೋಗಬಹುದು, ಅಥವ ಚುನಾವಣೆಗಳಿಗೆ ಪ್ರಭುತ್ವದ ಹಣಕಾಸು ಒದಗಿಸಲು ಸರಕಾರ ನಿರ್ಧರಿಸಬಹುದಾದ ಬೇರೆ ಯಾವುದೇ ಸಂಸ್ಥೆಗೆ ಹೋಗಬಹುದು.

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಈ ಎಲ್ಲ ಆಯಾಮಗಳನ್ನು ಗಮನಿಸುವ ಇಂತಹ ಸಂಸ್ಥೆಗಳ ಸ್ಥಾಪನೆ ಅತ್ಯಗತ್ಯ. ಒಂದೇ ಆಯಾಮವನ್ನು ಎದುರಿಸುವ ಯಾವುದೇ ಅರೆಬರೆ ಪ್ರಯತ್ನ ಅಪೇಕ್ಷಿತ ಫಲಿತಾಂಶ ಕೊಡಲಾರದು.

ಅಂತಿಮವಾಗಿ, ಉನ್ನತ ಮಟ್ಟಗಳಲ್ಲಿ ಭ್ರಷ್ಟಾಚಾರದ ನಿರ್ಮೂಲನೆಯ ಅಗತ್ಯದ ಮಹತ್ವವನ್ನು ಮತ್ತೊಮ್ಮೆ ಒತ್ತಿ ಹೇಳುವ ಅಗತ್ಯವೇನೂ ಇಲ್ಲ. ವಿವಿಧ ಹಗರಣಗಳ ಮೂಲಕ ಲೂಟಿ ಮಾಡಿರುವ ಅಪಾರ ಮೊತ್ತಗಳನ್ನು ಆಹಾರ ಭದ್ರತೆ, ಎಲ್ಲರಿಗೂ ಆರೋಗ್ಯ ಮತ್ತು ಶಿಕ್ಷಣ ಕೊಡಲು ಬಳಸಿದರೆ, ಆಗ ಭಾರತ, ತನ್ನ ಜನತೆಗೆ ಒಂದು ಉತ್ತಮ ಗುಣಮಟ್ಟದ ಬದುಕು ಒದಗಿಸಿ ಗುಣಾತ್ಮಕವಾಗಿ ಭಿನ್ನವಾಗಿರುತ್ತದೆ. ಆದ್ದರಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟ, ಭೌತಿಕವಾಗಿಯೂ, ನೈತಿಕವಾಗಿಯೂ ಉತ್ತಮವಾದ ಒಂದು ಭಾರತವನ್ನು ನಿರ್ಮಿಸಲು ಅಗತ್ಯ. ●

ರಾಜ್ಯ ಮಟ್ಟದ ನಿರಂತರ ಧರಣಿ

ಪುಟ 11 ರಿಂದ

ಕೇಸ್ ಮೂಲಕ ಅಧಿಕ ದಂಡ ವಸೂಲಿ, ಬೆಂಗಳೂರಿನಲ್ಲಿ 40,000 ನೂತನ ಪರ್ಮಿಟ್ ನೀಡುವುದನ್ನು ಸಮ್ಮೇಳನ ಖಂಡಿಸಿದೆ.


2011 ಜೂನ್ 23 ರಂದು JCTU ನ ಬೆಲೆ ಏರಿಕೆ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟವನ್ನು ಯಶಸ್ವಿಗೊಳಿಸಲು ಸಮ್ಮೇಳನ ನಿರ್ಣಯಿಸಿದೆ.

ಸಮ್ಮೇಳನವು 45 ಜನರ ನೂತನ ರಾಜ್ಯ ಸಮಿತಿಯನ್ನು ಆಯ್ಕೆಮಾಡಿದೆ. ಈಏಂಖಆಗ ಅಧ್ಯಕ್ಷರಾಗಿ ಎಸ್.ಮೀನಾಕ್ಷಿ ಸುಂದರಂ, ಉಪಾಧ್ಯಕ್ಷರಾಗಿ ಹೆಚ್.ಜಿ.ಶ್ರೀನಿವಾಸ ಮೂರ್ತಿ , (ಬೆಂಗಳೂರು), ಎಲ್.ಟಿ.ಸುವರ್ಣ (ದಕ್ಷಿಣ ಕನ್ನಡ), ತಂಗರಾಜು (ಕೋಲಾರ), ಪ್ರಧಾನ ಕಾರ್ಯದರ್ಶಿಯಾಗಿ ಬಿ.ವಿ.ರಾಘವೇಂದ್ರ, ಕಾರ್ಯದರ್ಶಿಗಳಾಗಿ, ರಾಜು ದೇವಾಡಿಗ (ಉಡುಪಿ), ಇ.ಬಸವರಾಜು (ರಾಯಚೂರು), ಶ್ರೀನಿವಾಸಮೂರ್ತಿ (ದಾವಣಗೆರೆ), ಸಂತೋಷ್ ಕುಮಾರ್ (ಬಳ್ಳಾರಿ) ರುದ್ರಮೂರ್ತಿ (ಬೆಂಗಳೂರು), ಮತ್ತು ಖಜಾಂಚಿಯಾಗಿ ಸಿ.ಎನ್.ಶ್ರೀನಿವಾಸ್ ಆಯ್ಕೆಯಾಗಿದ್ದಾರೆ. ●

ಕ್ರೂರಿಗಳು

ಬಂಡವಾಳ ಶಾಹಿಗಳಿಗೆ ಬೇಕಾದುದೇನು
ಹಣ ಮಾತ್ರ ಎಂಬುದನು ಬಲ್ಲೆಯಾ ನೀನು?
ಹೀಗಾಗಿ ಅಡಗಿಸಲು ಕಾರ್ಮಿಕರ ಸದ್ದ
ಯಾವುದೇ ಕ್ರೌರ್ಯಕ್ಕೆ ಈ ಜನರು ಸಿದ್ಧ

-ವಿಡಂಬಾರಿ



ಆಟೋ ಚಾಲಕರ ಪ್ರಥಮ ರಾಜ್ಯ ಸಮ್ಮೇಳನ

ವಸತಿ–ಪಡಿತರ–ಪಿಂಚಣಿ, ಕಲ್ಯಾಣಮಂಡಳಿ ಯೋಜನೆ ಜಾರಿಗಾಗಿ ನೂತನ ಪರ್ಮಿಟ್ ನೀಡಿಕೆ ನಿಲ್ಲಿಸಲು ಒತ್ತಾಯ

ದೇಶದಲ್ಲಿ 40 ಲಕ್ಷ ಆಟೋ ಚಾಲಕರಿದ್ದಾರೆ. ಸಾರ್ವಜನಿಕರಿಗೆ ಅತ್ಯವಶ್ಯಕವಾದ ಸಾರಿಗೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಈ ಆಟೋ ಚಾಲಕರಿಗೆ ಜೀವನ ಭದ್ರತೆ ಎಂಬುದೇ ಇಲ್ಲ. ವಿ.ವಿ.ಗಿರಿ ಕಾರ್ಮಿಕ ಅಧ್ಯಯನ ಸಂಸ್ಥೆಯು ಸಾರಿಗೆ ಕ್ಷೇತ್ರ ಈ ಕಾರ್ಮಿಕರ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ ಸಂಘಟಿತ ಕಾರ್ಮಿಕರಿಗೆ ಸಿಗುವ, ಭವಿಷ್ಯನಿಧಿ, ಪಿಂಚಣಿ, ಆರೋಗ್ಯ ಸೌಲಭ್ಯ (ಇಎಸ್ಐ) ಸೇರಿದಂತೆ ಕಲ್ಯಾಣ ಸೌಕರ್ಯಗಳನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿದೆ.

ಯುಪಿಎ–1 ಸರ್ಕಾರದ ಅವಧಿಯಲ್ಲಿ ಎಡಪಕ್ಷಗಳ ಒತ್ತಾಯದಿಂದ ವಿ.ವಿ.ಗಿರಿ ಸಂಸ್ಥೆಗೆ ಈ ಅಧ್ಯಯನ ಮಾಡುವ ಜವಾಬ್ದಾರಿ ನೀಡಲಾಗಿತ್ತು. ಈ ಸಮಿತಿ ವರದಿ ಸಲ್ಲಿಸಿ ವರುಷಗಳೇ ಉರುಳಿದರೂ, ಪಾರ್ಲಿಮೆಂಟ್ ಚಲೋ ನಂತಹ ಹೋರಾಟಗಳನ್ನು ಮಾಡಿದರೂ ಕೇಂದ್ರ ಯುಪಿಎ–2 ಸರ್ಕಾರ ಈ ಶಿಫಾರಸ್ಸುಗಳನ್ನು ಜಾರಿ ಮಾಡುತ್ತಿಲ್ಲ. ಬದಲಿಗೆ ಸಾರಿಗೆ ಕಾರ್ಮಿಕರು, ಜನಸಾಮಾನ್ಯರ ಬದುಕಿನ ಮೇಲೆ ತೀವ್ರ ದಾಳಿ ಮಾಡುವ ರೀತಿಯಲ್ಲಿ ಮತ್ತೆ ಪೆಟ್ರೋಲ್ ಬೆಲೆಯನ್ನು ರೂ.8, ಡೀಸೆಲ್ ಬೆಲೆಯನ್ನು ರೂ.4 ಏರಿಸಲು ಹೊರಟಿದೆ. ಈ ನೀತಿಯನ್ನು ತೀವ್ರವಾಗಿ ಪ್ರತಿಭಟಿಸಬೇಕು ಎಂದು ಅಖಿಲ ಭಾರತ ರಸ್ತೆ ಸಾರಿಗೆ ನೌಕರರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ.ಕೆ.ದಿವಾಕರನ್ ಹೇಳಿದರು. ಅವರು ಸಿಐಟಿಯು ನೇತೃತ್ವದಲ್ಲಿ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಮೇ 31ರಂದು ಆರಂಭವಾದ ಫೆಡರೇಷನ್ ಆಫ್ ಕರ್ನಾಟಕ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ಎಫ್‌ಕೆಎಆರ್‌ಡಿಯು) ನ ಪ್ರಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಆರ್‌ಡಿಯು ಸಂಘದ ಅಧ್ಯಕ್ಷರಾದ ಮೀನಾಕ್ಷಿ ಸುಂದರಂರವರು ಮಾತನಾಡಿ ರಾಜ್ಯ ಬಿಜೆಪಿ ಸರ್ಕಾರ ರಾಜ್ಯದಲ್ಲಿ ರಸ್ತೆಗಳ ನಿರ್ಮಾಣಕ್ಕೆ ವಿಶ್ವ ಬ್ಯಾಂಕಿನಿಂದ 1500 ಕೋಟಿ ರೂ.ಗಳನ್ನು ಸಾಲ ತರುತ್ತಿದೆ. ಆದರೆ ಆಟೋ ಚಾಲಕರು, ಸಾರ್ವಜನಿಕರು ರಸ್ತೆಯಲ್ಲಿ, ಸೇತುವೆ ಮೇಲೆ ಸಂಚರಿಸಬೇಕಾದರೆ 'ಟೋಲ್' ಹೆಸರಿನ ದುಬಾರಿ ಸುಂಕ ಕೊಡಬೇಕಾಗಿದೆ. ಆಟೋ ಚಾಲಕರ ಮಕ್ಕಳಿಗೆ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ಮನೆ ನಿವೇಶನಗಳು ಕನಸಿನ ಗಂಟಾಗಿದೆ. ದಕ್ಷಿಣ ಭಾರತದಲ್ಲಿ ಬಡವರಿಗೆ 2 ರೂ.ಗೆ ಕೆ.ಜಿ. ಅಕ್ಕಿ ಕೊಡದಿರುವುದು ಕರ್ನಾಟಕ ರಾಜ್ಯದಲ್ಲಿ ಮಾತ್ರ, ಚುನಾವಣೆ ಪ್ರಣಾಳಿಕೆಯ ಭರವಸೆಯನ್ನು ಈಡೇರಿಸದ ಸರ್ಕಾರ ಜಾತಿ ಮಠಗಳಿಗೆ ಕೋಟಿ ಕೋಟಿ ರೂ.ಕೊಡುಗೆ ಕೊಡುತ್ತಿದೆ ಎಂದರು. ಆಟೋರಿಕ್ಷಾ ತಯಾರಕ ಕಂಪನಿಗಳ ಲಾಬಿಯೊಂದಿಗೆ ಕೈಜೋಡಿಸಿ ಸರ್ಕಾರ ಬೆಂಗಳೂರಿನಲ್ಲಿ 40 ಸಾವಿರ ಆಟೋ ರಿಕ್ಷಾ ಪರವಾನಗಿಗಳನ್ನು ಕೊಡಲು ಹೊರಟಿರುವುದು ಅನ್ಯಾಯ ಎಂದು ಮೀನಾಕ್ಷಿ ಸುಂದರಂ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಆಟೋ ಚಾಲಕರಿಗೆ 10ನೇ ತರಗತಿ ಕನಿಷ್ಠ ವಿದ್ಯಾರ್ಹತೆ ಎನ್ನುವ ಧೋರಣೆ ಶಿಕ್ಷಣ ಪಡೆಯಲಾಗದವರಿಗೆ ಇರುವ ಈ ಆಟೋ ಚಾಲಕ ಉದ್ಯೋಗದ ಅವಕಾಶವನ್ನು ವಂಚಿಸಿದಂತೆ ಎಂದು ಮೀನಾಕ್ಷಿ ಸುಂದರಂ ಹೇಳಿದರು.



ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ವಿಜೆಕೆ ನಾಯರ್‌ರವರು ಮಾತನಾಡಿ ಆಟೋ ಚಾಲಕರ ಹೋರಾಟಕ್ಕೆ ದೊಡ್ಡ ಚರಿತ್ರೆ ಇದೆ. ಈ ಹೋರಾಟ ಆಟೋ ಚಾಲಕರ ಸ್ವಂತ ಲಾಭಕ್ಕಾಗಿ ಮಾತ್ರ ಅಲ್ಲ. ರಸ್ತೆ ರಿಪೇರಿಗಾಗಿ, ಪೆಟ್ರೋಲ್ ಬೆಲೆ ಕಡಿತ ಮಾಡಲು ಆಟೋ ಚಾಲಕರು ಹೋರಾಟ ನಡೆಸಿದರೆ ಅದರ ಪ್ರಯೋಜನ ಎಲ್ಲ ಸಾರ್ವಜನಿಕರಿಗೂ ಆಗುತ್ತದೆ. ಇದೇ ಸಿಐಟಿಯು ಧೋರಣೆ ಎಂದರು.

ಶಾಸಕರಾದ ನೆ.ಲ.ನರೇಂದ್ರಬಾಬು ಮಾತನಾಡಿ ಆಟೋ ಚಾಲಕರ ಸಮಸ್ಯೆಗಳ ಪರವಾಗಿ ದನಿ ಎತ್ತುವುದಾಗಿ ಭರವಸೆ ನೀಡಿದರು. ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪರವಾಗಿ ಆಗಮಿಸಿದ್ದ ಹಿರಿಯ ಅಧಿಕಾರಿ ಡಿಸೋಜೇ ಅವರು ಮಾತನಾಡಿ ಸಾರಿಗೆ ನೀತಿ ನಿರೂಪಿಸುವಾಗ ಕಾರ್ಮಿಕರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಕೈಗೊಳ್ಳಲು ಶ್ರಮಿಸುವುದಾಗಿ ಭರವಸೆ ನೀಡಿದರು. ಆದರ್ಶ ಆಟೋ ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್‌ನ ಅಧ್ಯಕ್ಷರಾದ ಆರ್.ಮಂಜುನಾಥ್ ಶುಭ ಕೋರಿ ಮಾತನಾಡಿದರು.

ಪೋಲೀಸರ ಲಾಠಿಬೂಟುಗಳಿಗೆ ಹೆದರದೆ ಕಾರ್ಮಿಕರ ಪರವಾಗಿ ದಿಟ್ಟವಾಗಿ ಹೋರಾಟ ಮಾಡುವ ಸಂಘಟನೆ ಎಂದರೆ ಅದು ಸಿಐಟಿಯು ಮಾತ್ರ ಸುಮಾರು ದಶಕಗಳಿಂದಲೂ ಸಿಐಟಿಯು ಆಟೋ ಚಾಲಕರಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ಬರುತ್ತಿದೆ. ಸಿಐಟಿಯು ಹೋರಾಟಕ್ಕೆ ನನ್ನ ಬೆಂಬಲವಿದೆ ಎಂದು ಅಭಿನಂದಿಸಿದರು.

ವೇದಿಕೆಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಅಖಿಲ ಭಾರತ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಆಟೋ ರಿಕ್ಷಾ ಚಾಲಕರ ಸಂಘದ ಉಪಾಧ್ಯಕ್ಷರಾದ ಶ್ರೀನಿವಾಸ ಮೂರ್ತಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಮುಂತಾದವರು ಹಾಜರಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕೆ.ಆರ್. ವೆಂಕಟೇಶ್‌ಗೌಡ ಅವರು ಆರಂಭದಲ್ಲಿ ಸ್ವಾಗತಿಸಿ ಮಾತನಾಡಿ ಆಟೋ ಚಾಲಕರ ಬದುಕು ದಿನೇ ದಿನೇ ದುರ್ಬರವಾಗುತ್ತಿದೆ. ಬದುಕಿಗೆ ಸುರಕ್ಷತೆ ಇಲ್ಲ. ಅಪಘಾತವಾದರೆ ಜೀವನಕ್ಕೆ ಭದ್ರತೆ ಇಲ್ಲ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಾಧ್ಯವಿಲ್ಲ. ಆಟೋ ಚಾಲಕರು ಹಾಗೂ ಕಾರ್ಮಿಕರ ಬಗೆಗೆ ನಮ್ಮ ಸರ್ಕಾರಗಳು ಅನುಸರಿಸುವ ನೀತಿಗಳು ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ ಎಂದರು.

ಸಮಾರಂಭದ ಆರಂಭಕ್ಕೆ ಮೊದಲು ನಗರದ ಚಿಕ್ಕಲಾಲ್‌ಬಾಗ್‌ನಿಂದ ಪುರಭವನದವರೆಗೆ ಆಟೋಗಳೊಂದಿಗೆ ಆಟೋ ಚಾಲಕರ ಮೆರವಣಿಗೆ ನಡೆಯಿತು. ಪುರಭವನದ ಮುಂಭಾಗದಲ್ಲಿ ಧ್ವಜಾರೋಹಣವನ್ನು ಎ.ಆರ್.ಡಿ.ಯುನ ಹಿರಿಯ ಮುಖಂಡರಾದ ಶ್ರೀನಿವಾಸಮೂರ್ತಿಯವರು ನೆರವೇರಿಸಿದರು.

ಭದ್ರತಾ ಮಂಡಳಿ ಯೋಜನೆಗಳಿಗಾಗಿ ರಾಜ್ಯ ಮಟ್ಟದ ನಿರಂತರ ಧರಣಿ 2011 ಜುಲೈ 18 ರಿಂದ

ರಾಜ್ಯ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿ ಯೋಜನೆಗಾಗಿ, ಶೇರು ಮಾರುಕಟ್ಟೆ ಆಧಾರಿತ ಪಿಂಚಣಿ ಮತ್ತು ಬೆಲೆ ಏರಿಕೆ ವಿರೋಧಿಸಿ 2011 ಜುಲೈ 18 ರಿಂದ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ನಿರಂತರ ಧರಣಿ ನಡೆಸಲು ಆಟೋ ಚಾಲಕರ ಪ್ರಥಮ ರಾಜ್ಯ ಸಮ್ಮೇಳನ ತೀರ್ಮಾನಿಸಿದೆ.

2011 ಮೇ 31 ಮತ್ತು ಜೂನ್ 1 ರಂದು ನಗರದ ಟೌನ್‌ಹಾಲ್‌ನಲ್ಲಿ ನಡೆದ ಪ್ರಥಮ ರಾಜ್ಯ ಸಮ್ಮೇಳನವು ಎಲ್ಲಾ ಚಾಲಕರು ಈ ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಮಾಡಲು ಮನವಿ ಮಾಡಿದೆ.


ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿಗೆ ಕೂಡಲೇ ಸದಸ್ಯರನ್ನು ನೊಂದಾಯಿಸಿ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಬೇಕು ಆ ಮೂಲಕ ಆಟೋ ಚಾಲಕರಿಗೆ ಅದರ ಸೌಲಭ್ಯವನ್ನು ನೀಡಲು ಮುಂದಾಗಬೇಕೆಂದು ಸಮ್ಮೇಳನವು ಆಗ್ರಹಿಸಿದೆ.

ಅಂತೆಯೆ ಬೆಲೆ ಏರಿಕೆಗೆ ಕಾರಣವಾಗಿರುವ ಪೆಟ್ರೋಲ್–ಡೀಸೆಲ್–ಆಟೋ ಗ್ಯಾಸ್ ದರಗಳನ್ನು ಇಳಿಸಲು ಕೂಡಲೇ ಅದರ ಮೇಲಿನ ಕೇಂದ್ರ ಮತ್ತು ರಾಜ್ಯ ತೆರಿಗೆಗಳನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಿದೆ.

ಪ್ರಧಾನ ಕಾರ್ಯದರ್ಶಿ ಬಿ.ವಿ.ರಾಘವೇಂದ್ರ ಮಂಡಿಸಿದ ಕರಡು ವರದಿಯ ಮೇಲೆ ಸುಮಾರು 40 ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಚರ್ಚೆ ನಡೆಸಿದರು.

ಆಟೋ ಚಾಲಕರಿಗೆ ಕಾಲೋನಿ, ಕೆಜಿ 2ರೂ ನಂತೆ ಮಾಸಿಕ 35 ಕೆಜಿ ಪಡಿತರ ನೀಡಲು ಸರ್ಕಾರ ಮುಂದಾಗ ಬೇಕೆಂದು ಒತ್ತಾಯಿಸಿ ಸಮ್ಮೇಳನವು ನಿರ್ಣಯ ಅಂಗೀಕರಿಸಿದೆ. ಅಂತೆಯೆ ಮೋಟಾರ ವಾಹನ ಕಾಯ್ದೆ ತಿದ್ದುಪಡಿ, ಐಪಿಸಿ ತಿದ್ದುಪಡಿ ಮೂಲಕ ಅಪಘಾತಕ್ಕೆ ಕೊಲೆ ಮೊಕದ್ದಮೆ ಹಾಕುವ ತಿದ್ದುಪಡಿ ವಿರೋಧಿಸಿ ಸಮ್ಮೇಳನ ನಿರ್ಣಯ ಕೈಗೊಂಡಿದೆ. ಅಂತೆಯೆ ವಾಹನ ಚಾಲನ ಪರವಾನಗಿಗೆ ವಿದ್ಯಾರ್ಹತೆ ಕಡ್ಡಾಯ ರದ್ದುಪಡಿಸಬೇಕೆಂದು ಆಗ್ರಹಿಸಿದೆ.

ಆರ್‌ಟಿಓ ಮತ್ತು ಪೋಲೀಸ್ ಅಧಿಕಾರಿಗಳ ಕಿರುಕುಳ, ಸಿಂಪ್ಯೂಟರ್




ವೇದರಾಜ ಎನ್.ಕೆ.

ಕುತ್ತಿಗೆಗೆ ಕಟ್ಟುವ ಪ್ರಯತ್ನಗಳು ಫಲ ಕೊಡುತ್ತಿಲ್ಲ

2ಜಿ ಹಗರಣದಲ್ಲಿ ಈ ವಾರ ಬಯಲಾಗಿರುವ ಸಂಗತಿಗಳು ಇದನ್ನು ಕೇವಲ ಒಬ್ಬ ವ್ಯಕ್ತಿಯ ಕುತ್ತಿಗೆಗೆ ಕಟ್ಟುವ ಪ್ರಯತ್ನಗಳು ಫಲ ಕೊಡುತ್ತಿಲ್ಲ ಎಂಬುದನ್ನು ತೋರಿಸಿದೆ. ಅದು ನವ-ಉದಾರವಾದೀ ದಾರಿ ಪ್ರೋತ್ಸಾಹಿಸುತ್ತಿರುವ ಚಮಚಾ ಬಂಡವಾಳಶಾಹಿಯ ನೇರ ದುಷ್ಫಲ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ ; ಕಪ್ಪು ಹಣದ ನಿಗ್ರಹದ ವಿಷಯದಲ್ಲಿ ಸುಪ್ರಿಂ ಕೋರ್ಟ್ ಟೀಕೆಗೆ ಒಳಗಾಗಿರುವ ಸರಕಾರ ಈ ದಿಕ್ಕಿನಲ್ಲಿ ಏನೋ ಮಾಡಲಾಗುತ್ತಿದೆ ಎಂದು ತೋರಿಸುವ ಪ್ರಯತ್ನ ನಡೆಸುತ್ತಿದೆ. ಆದರೆ ಇಲ್ಲಿಯೂ ಯೋಗಗುರುವೊಬ್ಬನನ್ನು ಒಲಿಸಿಕೊಳ್ಳುವಲ್ಲಿ ಸಂಘ ಪರಿವಾರದೊಂದಿಗೆ ಸ್ಪರ್ಧೆಯೇ ಮುಖ್ಯವಾದಂತಿದೆ; ಅತ್ತ ಹಣದುಬ್ಬರ ತಡೆಯುವ ಹೆಸರಿನಲ್ಲೂ ಯುಪಿಎ-2 ಸಿನಿಕತನ ವ್ಯಕ್ತವಾಗುತ್ತಿದೆ. ಆಹಾರ ಹಣದುಬ್ಬರ ತಡೆಯಲು ಸುಪ್ರಿಂಕೋರ್ಟ್ ಸೂಚಿಸಿರುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಆಸಕ್ತಿ ವಹಿಸದೆ, ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ದಾಸ್ತಾನು ವ್ಯವಸ್ಥೆಯನ್ನು ಉತ್ತಮ ಗೊಳಿಸುವುದು, ಆಹಾರವಸ್ತುಗಳ ವ್ಯಾಪಾರದಲ್ಲಿ ವಾಯಿದಾ ವ್ಯವಹಾರವನ್ನು ನಿಷೇಧಿಸುವುದು ಮುಂತಾದ ಕ್ರಮಗಳ ಬಗ್ಗೆ ಯೋಚಿಸಲೂ ಹೋಗದ ಸರಕಾರದ 'ಇಂಟರ್-ಮಿನಿಸ್ಟ್ರಿಯಲ್ ಗ್ರೂಪ್', ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗೆ ಅವಕಾಶ ನೀಡುವುದೇ ಇದಕ್ಕೆ ರಾಮಬಾಣ ಎಂದು ನಂಬಿಸ ಹೊರಟಿದೆ.

ಭ್ರಷ್ಟಾಚಾರ ನಿಗ್ರಹ: ಸರಕಾರದ ಭರವಸೆಗಳ ಬಗ್ಗೆಯೇ ಸಂದೇಹ

ಭ್ರಷ್ಟಾಚಾರದ ವಿರುದ್ಧ ಯುಪಿಎ-2 ಮುಖಾಮುಖಿ ಸಮರ ನಡೆಸುತ್ತದೆ, ಈ ಬಗ್ಗೆ ಪಾರದರ್ಶಕತೆ ಇರುತ್ತದೆ ಎಂದು ಯುಪಿಎ ಅಧ್ಯಕ್ಷೆ ಸಾರಿದ್ದಾರೆ; ಯುಪಿಎ-2 ಸರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಪ್ರಧಾನ ಮಂತ್ರಿಗಳು ಮತ್ತೆ-ಮತ್ತೆ ಭರವಸೆ ನೀಡುತ್ತಲೇ ಇದ್ದಾರೆ. ಆದರೆ ಅವರ ಭರವಸೆಯ ಬಗ್ಗೆ ಸಂದೇಹ ಮೂಡಿಸುವಂತಹ ಬೆಳವಣಿಗೆಗಳು ನಡೆಯುತ್ತಲೇ ಇವೆ. ಸ್ವತಃ ವಕೀಲರಾಗಿರುವ ದೂರಸಂಪರ್ಕ ಮಂತ್ರಿಗಳು 2ಜಿ ವಿಚಾರಣೆಯಲ್ಲಿ ತಾವೇ ವಕಾಲತ್ತು ವಹಿಸಲಿದ್ದು, ತಮ್ಮ ಮತ್ತು ಪ್ರಧಾನಮಂತ್ರಿಗಳ ನಡುವೆ ವಿನಿಮಯಗೊಂಡಿದೆ ಎನ್ನಲಾದ 18 ಪತ್ರಗಳನ್ನು ಬಳಸಿ ತನ್ನ ಕ್ರಮಗಳಿಗೆ ಸರಕಾರದ ಅತ್ಯುನ್ನತ ಮಟ್ಟದಲ್ಲಿ ಮಂಜೂರಾತಿ ಇತ್ತು ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವುದಾಗಿ ತನ್ನ ಕಾನೂನು ತಜ್ಞರ ತಂಡಕ್ಕೆ



ಕೃಪೆ : ದಿ ಹಿಂದೂ

ಹೇಳಿದ್ದಾರಂತೆ. ತನ್ನ ದೂರಸಂಪರ್ಕ ಧೋರಣೆಯ ಬಗ್ಗೆ ಚಿದಂಬರಂ ಮತ್ತು ಪ್ರಣಬ್ ಮುಖರ್ಜಿ ಯವರೊಡನೆಯೂ ಸಮಾಲೋಚನೆ ನಡೆಸಿರುವುದನ್ನು ಸೂಚಿಸುವ ದಸ್ತಾವೇಜುಗಳನ್ನೂ ಅವರು ಸಲ್ಲಿಸುತ್ತಾರಂತೆ. ಅಂದರೆ ಯುಪಿಎ-2 ಸರಕಾರದ ಪ್ರಧಾನಮಂತ್ರಿಗಳು, ಗೃಹಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳಿಗೆ ಈ ಬಗ್ಗೆ ಗೊತ್ತಿತ್ತು, ಅವರು ಯಾವುದೇ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ ಎಂದು ಅವರು ತೋರಿಸಿಕೊಡುತ್ತಾರಂತೆ.

ಈಗ ದೇಶದ ಅಟಾರ್ನಿ ಜನರಲ್ ಆಗಿರುವ ಜಿ.ಇ.ವಹನ್ವತಿಯವರು ಡಿಸೆಂಬರ್ 2007ರಲ್ಲಿ 2ಜಿ ಸಭೆಯೊಂದರಲ್ಲಿ ಭಾಗವಹಿಸಿದ್ದರು ಎಂದು ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ಸಿಕ್ಕಿರುವ ಉತ್ತರ ಸೂಚಿಸುತ್ತಿದೆ. ಆಗ ಅವರು ಸಾಲಿಸಿಟರ್-ಜನರಲ್ ಆಗಿದ್ದರು. ಆಗ ಅವರು ಒಂದು ಟಿಪ್ಪಣಿಯನ್ನು ದೂರಸಂಪರ್ಕ ಮಂತ್ರಿಗಳಿಗೆ ಸಲ್ಲಿಸಿದ್ದರಂತೆ. ಆ ಸಭೆಯಲ್ಲಿ, ಆಗ ವಿದೇಶಾಂಗ ಮಂತ್ರಿಯಾಗಿದ್ದ ಪ್ರಣಬ್ ಮುಖರ್ಜಿಯವರೂ ಇದ್ದರಂತೆ. ಆದರೆ ಈ ಸಭೆಯ ಕಲಾಪ ವಿವರವಾಗಲೀ, ವಹನ್ವತಿಯವರ ಟಿಪ್ಪಣಿಯ ಪ್ರತಿಯಾಗಲೀ ತಮ್ಮ ಬಳಿ ಇಲ್ಲ ಎಂದು ದೂರಸಂಪರ್ಕ ಇಲಾಖೆ ಹೇಳುತ್ತಿದೆ. ಈ ಮಾಹಿತಿ ಹಕ್ಕಿನಡಿಯ ಪ್ರಶ್ನೆಗೆ ಉತ್ತರಿಸಲು ಮೊದಲು ದೂರಸಂಪರ್ಕ ಇಲಾಖೆ ನಿರಾಕರಿಸಿತ್ತು, ನಂತರ ಕೇಂದ್ರೀಯ ಮಾಹಿತಿ ಆಯೋಗ(ಸಿಐಸಿ)ಕ್ಕೆ ಅಪೀಲು ಹೋದ ಮೇಲೆಯೇ ಈ ಮಾಹಿತಿ ನೀಡಲಾಗಿದೆ ಎಂಬುದು ಯುಪಿಎ-2 ಸರಕಾರದ ಪಾರದರ್ಶಕತೆ, ಭರವಸೆಗಳ ಬಗ್ಗೆ ಬಹಳಷ್ಟು ಹೇಳುತ್ತದೆ.

ಅತ್ತ 2ಜಿ ಕುರಿತ ಜೆಪಿಸಿಯ ಯುಪಿಎ ಸದಸ್ಯರು ಈಗಲೂ ಈ ಹಗರಣದಲ್ಲಿ ದೇಶದ ಬೊಕ್ಕಸ ಕಳಕೊಂಡ ಅಗಾಧ ಮೊತ್ತದ ಬಗ್ಗೆ ಚೌಕಾಸಿ ನಡೆಸುವಂತೆ ಕಾಣುತ್ತಿದೆ. ಸಿಎಜಿಗೆ ಈ ರೀತಿ ಸಂಭಾವ್ಯ ನಷ್ಟದ ಲೆಕ್ಕಾಚಾರ ಮಾಡುವ ಅಧಿಕಾರ ಇದೆಯೇ ಎಂಬುದು ಅವರ ಸಂದೇಹ. ಕಳೆದ ವಾರ ಜೆಪಿಸಿ ಎದುರು ಹಾಜರಾದ ಸಿಎಜಿ ಮುಖ್ಯಸ್ಥರು ಈಗ ಜನಜನಿತವಾಗಿರುವ ಲೆಕ್ಕಾಚಾರವನ್ನು ಜೆಪಿಸಿ ಎದುರು ಸಮರ್ಥಿಸಿಕೊಂಡಿದ್ದಾರೆ ಮತ್ತು ಈ ರೀತಿ ಲೆಕ್ಕಾಚಾರ ಮಾಡುವಲ್ಲಿ ತಮ್ಮ ಸಂಸ್ಥೆಗೆ ನೀಡಿರುವ ಆದೇಶವ್ಯಾಪ್ತಿಯ ಉಲ್ಲಂಘನೆಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇನ್ನೊಂದೆಡೆ, ಈ ರಂಗದಲ್ಲಿ ಈ ವಾರದ ಇನ್ನೊಂದು ಬೆಳವಣಿಗೆಯೆಂದರೆ, ಈಗ ಮಾಜಿಯಾಗಿರುವ ದೂರಸಂಪರ್ಕ ಮಂತ್ರಿಗಳ ಹಿಂದೆ ಯುಪಿಎ-1 ದೂರಸಂಪರ್ಕ ಮಂತ್ರಿಗಳಾಗಿದ್ದ, ಯುಪಿಎ-2 ರಲ್ಲಿ ದೂರಸಂಪರ್ಕ ಮಂತ್ರಿ ಸ್ಥಾನಕ್ಕೆ ಒಬ್ಬ ಸ್ಪರ್ಧಿಯೂ ಆಗಿದ್ದ, ಈಗಿನ ಯುಪಿಎ ಜವಳಿ ಮಂತ್ರಿ ದಯಾನಿಧಿ ಮಾರನ್ ಕೊರಳಿಗೂ ಹಗರಣವೊಂದು ಸುತ್ತಿಕೊಳ್ಳುತ್ತಿರುವಂತೆ ಕಾಣುತ್ತಿದೆ. ಅವರು ಮಂತ್ರಿಯಾಗಿದ್ದಾಗ ಏರ್‌ಸೆಲ್ ಕಂಪನಿಯ ಪ್ರಾಯೋಜಕ ತನ್ನ ಕಂಪನಿಯನ್ನು ಮಲೇಸ್ಯಾದ ಕಂಪನಿ ಮ್ಯಾಕ್ಸಿಸ್‌ಗೆ ಅದನ್ನು ಮಾರಲು ಒತ್ತಡ ಹೇರಿದ್ದರು, ಈ ಮ್ಯಾಕ್ಸಿಸ್ ಕಂಪನಿಯ ಒಂದು ಅಂಗ ಕಂಪನಿ ಮಾರನ್ ಕುಟುಂಬದ ಸನ್ ಡೈರೆಕ್ಟ್ ಟಿವಿಯಲ್ಲಿ 830 ಕೋಟಿ ರೂ. ಹೂಡಿಕೆ ಮಾಡಿದೆ ಎಂಬುದು ಈಗ ಕೇಳಬರುತ್ತಿರುವ ಆಪಾದನೆ. ಈಗ ನ್ಯಾಯಾಂಗ ಕಸ್ಟಡಿಯಲ್ಲಿರುವ ಕನ್ನಿಮೋಳಿ

ಪುಟ 15 ಕ್ಕೆ

ಏರ್ ಇಂಡಿಯಾ ಹಣಕಾಸು ಸಂಕಟ: ಕಾರಣಕರ್ತರಾರು?

ಪೈಲಟ್‌ಗಳ ಮುಷ್ಕರದ ನಂತರ ಈಗ ಏರ್ ಇಂಡಿಯಾ ವೈಮಾನಿಕ ಇಂಧನದ ಬಿಲ್ ಪಾವತಿ ಮಾಡಲಾಗದೆ ವಿಮಾನ ಹಾರಾಟಗಳನ್ನು ರದ್ದು ಮಾಡಬೇಕಾದ ಸ್ಥಿತಿಗೆ ಬಂದಿದೆ. ಇವೆರಡಕ್ಕೂ ಅದರ ಹದಗೆಟ್ಟ ಹಣಕಾಸು ಪರಿಸ್ಥಿತಿ ಕಾರಣ. ಆದರೆ ಹಣಕಾಸು ಪರಿಸ್ಥಿತಿ ಹದಗೆಡಲು ಯಾರು ಕಾರಣ? ನೌಕರರಂತೂ ಕಾರಣರಲ್ಲ. 2007ರಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಕಂಪನಿಗಳನ್ನು ತರಾತುರಿಯಲ್ಲಿ ವಿಲೀನಗೊಳಿಸಿದ ನಂತರ ತಲೆದೋರಿರುವ ಸಮಸ್ಯೆಯಿದು. ವಾಸ್ತವವಾಗಿ ಈ ರಾಷ್ಟ್ರೀಯ ವಿಮಾನ ಸಂಸ್ಥೆ ಹಣಕಾಸು ಮತ್ತು ಮಾರುಕಟ್ಟೆ ನಷ್ಟ ಅನುಭವಿಸಲು ಮತ್ತು ಆಮೂಲಕ 'ಮುಕ್ತ ಆಕಾಶ'ದ ಧೋರಣೆ ಯಡಿಯಲ್ಲಿ ಖಾಸಗೀ ಕಂಪನಿಗಳು ಏಕಸ್ವಾಮ್ಯವನ್ನು ಪಡೆಯುವಂತೆ ಮಾಡಲು ಕಾರಣರಾದ ನಿಜವಾದ ಅಪರಾಧಿಗಳನ್ನು ರಕ್ಷಿಸಲಿಕ್ಕಾಗಿ ದೇಶದ ಗಮನವನ್ನು ಬೇರೆಡೆಗೆ ತಿರುಗಿಸುವ ಯೋಜಿತ ಪ್ರಯತ್ನಗಳ ಭಾಗವಾಗಿಯೇ ಏರ್ ಇಂಡಿಯಾ ಆಡಳಿತ ಮತ್ತೆ-ಮತ್ತೆ ತನ್ನ ನೌಕರರ ಮೇಲೆ ಸವಾರಿ ಮಾಡಲು ಹೋಗಿ ಕೈಗಾರಿಕಾ ಅಸಂತುಷ್ಟಿಯನ್ನು ಸೃಷ್ಟಿಸುವ ಪ್ರಯತ್ನ ನಡೆಸುತ್ತಲೇ ಇದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಟೀಕಿಸಿದೆ.

ಈ ರಾಷ್ಟ್ರೀಯ ವಿಮಾನ ಸಂಸ್ಥೆಯ ಪ್ರಸಕ್ತ ಹಣಕಾಸು ಬಿಕ್ಕಟ್ಟಿಗೆ ಹಿಂದಿದ್ದ ನಾಗರಿಕ ವಿಮಾನಯಾನ ಮಂತ್ರಿಯ ಉದ್ದೇಶಪೂರಿತ ಕೃತ್ಯಗಳು ಕಾರಣ ಎಂಬುದು ಇತ್ತೀಚೆಗೆ ಮಾಧ್ಯಮಗಳ ಕೆಲವು ವಿಭಾಗಗಳಲ್ಲಿ ಪ್ರಕಟವಾಗಿರುವ ಸಿಎಜಿ (ದೇಶದ ಮಹಾಲೆಕ್ಕ ಪರಿಶೋಧಕರ ಕಚೇರಿ) ವರದಿ ದೃಢಪಡಿಸಿದೆ. ಏರ್ ಇಂಡಿಯಾಕ್ಕೆ ಇನ್ನೂ 111 ವಿಮಾನಗಳ ಖರೀದಿ ಅಗತ್ಯವಿರಲಿಲ್ಲ. ಆದರೂ ಅಂತಹ ಖರೀದಿ ನಡೆಸುವಂತೆ ಬಲವಂತ ಮಾಡಿದ್ದರಿಂದ ಅದಕ್ಕೆ 10,000 ಕೋಟಿ ರೂ.ಗಳ ನಷ್ಟವಾಗಿದೆ ಹಾಗು ಅದರ ಹಣಕಾಸು ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡಿದೆ. ಎಂದು ಸಿಎಜಿ ವರದಿ ತಿಳಿಸಿದೆ.

ಸಾರ್ವಜನಿಕ ಘಟಕಗಳ ಸಂಸದೀಯ ಸಮಿತಿ ಸಂಸತ್ತಿನಲ್ಲಿ ಮಾರ್ಚ್ 12, 2010ರಂದು ಮಂಡಿಸಿದ ತನ್ನ ನಾಲ್ಕನೇ ವರದಿಯಲ್ಲಿ ವಿಲೀನದಲ್ಲಿ ಅನಗತ್ಯ ತರಾತುರಿ ಹಾಗೂ ವಿಲೀನದ ನಂತರ ಉಸ್ತುವಾರಿಯ ಅಭಾವದ ಕುರಿತು ತನಿಖೆ ನಡೆಸಿ ಇದಕ್ಕೆ ಯಾರು ಹೊಣೆ ಎಂದು ನಿಗದಿ ಪಡಿಸಬೇಕು ಎಂದು ಶಿಫಾರಸು ಮಾಡಿತ್ತು. ಮತ್ತು ಪರಿಷ್ಕೃತ ವಿಲೀನ ವೇಳಾಪಟ್ಟಿಯ ಮೇಲೆ ನಿಗಾ ಇಡುವ, ಮೂರು ತಿಂಗಳಿಗೊಮ್ಮೆ ಈ ಕೆಲಸದ ಪ್ರಗತಿಯನ್ನು ಪರಾಮರ್ಶಿಸುವ ಒಂದು ವ್ಯವಸ್ಥೆಯನ್ನು ಏರ್ಪಡಿಸಬೇಕು ಎಂದೂ ಶಿಫಾರಸು ಮಾಡಿತ್ತು. ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ವಿಲೀನದಿಂದ ಆಗಿರುವ ನಷ್ಟವನ್ನು ಸರಕಾರ ಭರಿಸಬೇಕು ಎಂದೂ ಅದು ಶಿಫಾರಸು ಮಾಡಿತ್ತು, ಏಕೆಂದರೆ ಆಗಿನ ಮಂತ್ರಿಗಳ ನೇತೃತ್ವದ ಒಂದು ಸರಕಾರೀ ಧೋರಣೆಯಿಂದಾಗಿ ಈ ವಿಲೀನ ನಡೆದಿದೆ. ಯುಪಿಎ ಸರಕಾರ ಈ ಶಿಫಾರಸುಗಳ ಮೇಲೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಸರಕಾರದ ಈ ನಿಷ್ಕ್ರಿಯತೆ ಮತ್ತು ಏರ್ ಇಂಡಿಯಾದ ವಿಮಾನ ಖರೀದಿಯ ಬಗ್ಗೆ ಅದರ ದಿವ್ಯಮೌನವೇ ಎಲ್ಲವನ್ನೂ ಹೇಳುತ್ತದೆ ಎಂದು ಸಿಐಟಿಯು ಬಲವಾಗಿ ಟೀಕಿಸಿದೆ.

ಕನ್ನಡ ವಾರಪತ್ರಿಕೆ



ನೀನೇ ನಮ್ಮಮ್ಮ ....ರೆಡ್ಡಿ ಬಳಗದ ವರಾತ
ನೀವು ನನ್ನ ಮಕ್ಕಳಲ್ಲ .....ಸುಶ್ಮಾ ಸ್ವರಾಜ್ ಉವಾಚ

ಬಿಜೆಪಿ ದರ್ಬಾರ್


■ ಆರ್.ರಾಮಕೃಷ್ಣ

ಈ ಸುಶ್ಮಾ ಸ್ವರಾಜ್ ಯಾರು ಅಂತ ಕರ್ನಾಟಕದ ಜನಕ್ಕೆ ಹೆಚ್ಚು ವಿವರಿಸಬೇಕಾದ ಅಗತ್ಯವೇ ಬರುವುದಿಲ್ಲ. ಅವರು ನಮಗೆಲ್ಲಾ ಚಿರ ಪರಿಚಿತ. ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕಿ ಹಾಗೂ ಬಿಜೆಪಿ ಕೇಂದ್ರ ನಾಯಕಿಯೂ ಆದ ಈಕೆ ಪ್ರತಿವರ್ಷ ವರಮಹಾಲಕ್ಷ್ಮಿ ಹಬ್ಬದಂದು ತಪ್ಪದೇ ಕರ್ನಾಟಕ ರಾಜ್ಯದ ಬಳ್ಳಾರಿಗೆ ಬಂದು 'ಸಾಂಗ'ವಾದ 'ಪೂಜೆ' ಮಾಡಿ, ಮರಳಿ ದೆಹಲಿಗೆ ತೆರಳುವ ಸ್ವರಾಜ್ ಯಾರಿಗೆ ತಾನೆ ಗೊತ್ತಿಲ್ಲ. ಒಂದು ರೀತಿಯಲ್ಲಿ ಅವರು ಕರ್ನಾಟಕ ಹಲವರಿಗೆ ಅಮ್ಮ ಇದ್ದಂತೆ ಅದರಲ್ಲೂ ನಮ್ಮ ಜನಾರ್ಧನ ರೆಡ್ಡಿ, ಕರುಣಾಕರರೆಡ್ಡಿ...ಮುಂತಾದ ರೆಡ್ಡಿ ಬಳಗಕ್ಕಂತೂ ಸಾಕ್ಷಾತ್ ಅಮ್ಮನೇ.

ಈ ಕರುಣಾಮಯಿ ಅಮ್ಮ ನಮ್ಮ ರೆಡ್ಡಿ ಬಳಗ ಸಂಕಷ್ಟಕ್ಕೆ ಸಿಲುಕಿದಾಗೆಲ್ಲಾ ಅವರನ್ನು ಕಾಪಾಡಿದ ಮಹಾತಾಯಿ ಎಂಬುದು ದೇಶವ್ಯಾಪಿ ಜನಜನಿತವಾದ ವಿಚಾರ. ರೆಡ್ಡಿ ಸಹೋದರರಂತೂ ಇವರನ್ನು ಅಮ್ಮ... ಅಮ್ಮ...ಅಂತಲೇ ಕರೆಯುತ್ತ ಹಿಂದೆ ಸುತ್ತುತ್ತಾರೆ. ರೆಡ್ಡಿ ಬಳಗ ದೆಹಲಿಗೆ ಹೋದಾಗಲೆಲ್ಲ ಮೊದಲು ಆಗುವುದು ಈ ಅಮ್ಮನ ದರ್ಶನವೇ. ನಂತರ ಉಳಿದ್ದದ್ದು. ಇರಲಿ.

ಈಗೇನಾಗಿದೆ ನೋಡಿ. ಈ ದೆಹಲಿ ಅಮ್ಮ ನಾನು ರೆಡ್ಡಿ ಸಹೋದರರಿಗೆ ಅಮ್ಮ ಅಲ್ಲ...ನಾನು ರೆಡ್ಡಿ ಸಹೋದರರೊಂದಿಗೆ ವರಮಹಾಲಕ್ಷ್ಮಿ ಹಬ್ಬದ ದಿನ ಬಿಟ್ಟರೆ ಉಳಿದಂತೆ ಮಾತೇ ಆಡುವುದಿಲ್ಲ ... ಅವರನ್ನು ರಾಜ್ಯ ಬಿಜೆಪಿ ಸಂಪುಟಕ್ಕೆ ಸೇರಿಸಿಕೊಳ್ಳಲು ನಾನು ಕಾರಣಳಲ್ಲ. ಆಗ ಕರ್ನಾಟಕದ ಉಸ್ತುವಾರಿ ಹೊಣೆ ಹೊತ್ತಿದ್ದ ಅರುಣ್ ಜೇಟ್ಲಿ, ಜೊತೆಗೆ ಅನಂತ್ ಕುಮಾರ್, ವೆಂಕಯ್ಯ ನಾಯ್ಡು ಕಾರಣರು ಅಂತ ಅಂದಿದ್ದಾರೆ.

ರೆಡ್ಡಿ ಸಹೋದರರ ತಲೆ ಮೇಲೆ ಕೈ ಇಟ್ಟು, ಆಶೀರ್ವಾದ ಮಾಡಿ ಮಾಧ್ಯಮಗಳಿಗೆ ಹಾಗೇ ಫೋಸ್ ಕೊಟ್ಟು ಈಗ ಪಾಪ ರೆಡ್ಡಿಗಳಿಗೆ ಕಷ್ಟಕಾಲ ಬಂದಿರುವಾಗ ಅವರನ್ನು ನಡು



ನೀರಿನಲ್ಲಿ...ಕ್ಷಮಿಸಿ ಆಳವಾದ ಗಣಿ ಕುಳಿಯಲ್ಲಿ ಹೀಗೆ ಕೈ ಬಿಟ್ಟು ಬಿಟ್ಟರೆ ಹೇಗೆ ? ಮುಂದೆ ಈ ಕರುಣಾಮಯಿ ಅಮ್ಮನ ಸುಂದರ ಮಕ್ಕಳ ಕತೆ ಏನು ?

ವರಮಹಾಲಕ್ಷ್ಮಿಯ ಈ ಮಹಾ ಆರಾಧಕಿ ಸುಶ್ಮಾ ಸ್ವರಾಜರಿಗೆ ತಾನು ಈ ರೆಡ್ಡಿ ಸಹೋದರರಿಗೆ ತಾಯಿ ಅಲ್ಲ, ಅವರ ತಾಯಿ ಎಂಬ ಬೇರೆ ಒಬ್ಬರು ಇದ್ದಾರೆ ಎಂಬುದರ ಜ್ಞಾನೋದಯವಾದರೂ ಈಗ ಆದದ್ದೇಕೆ ?

ಬಳ್ಳಾರಿಯಲ್ಲಿ ಗಣಿಗಾರಿಕೆ ಹೆಸರಿನಲ್ಲಿ ನಡೆಸಲಾಗಿರುವ ಸಚಿವ ಸಹೋದರರ ಘನಾಂದಾರಿ ಕೆಲಸಗಳ ಬಗೆಗೆ ಸುಪ್ರಿಂ ಕೋರ್ಟ್ ಆದೇಶದಂತೆ ಜಂಟಿ ತನಿಖೆ ಆರಂಭವಾಗಿದೆ. ಈ ಬಗ್ಗೆ ಕರ್ನಾಟಕ ಲೋಕಾಯುಕ್ತರು ಕೊಡಬೇಕಿರುವ ಅಂತಿಮ ವರದಿ ಸಲ್ಲಿಕೆಯ ದಿನ ಇನ್ನೇನು ಬಂದೇ ಬಿಡುತ್ತಿದೆ. ಸಿಬಿಐ ಕೂಡ ತನಿಖೆಯ ಗುದ್ದಲಿ ಹಿಡಿದು ನಿಂತಿದೆ. ಇಷ್ಟಾದರೂ ಇನ್ನೂ ರೆಡ್ಡಿ ಸಹೋದರರಿಗೆ ಅಮ್ಮ ಆಗಿದ್ದು ಆಶಿರ್ವಾದ ಮಾಡುತ್ತಾ ಕೂಡುವುದಾದರೂ ಹೇಗೆ ?

ರೆಡ್ಡಿ ಸಹೋದರರು ಒಂದೊಮ್ಮೆ ಕರ್ನಾಟಕದ ಪರಪ್ಪನ ಅಗ್ರಹಾರದ 'ಮಾವನ ಮನೆ'ಯ ಪಾಲಾಗಿ ಹೋದರೆ, ತನಗೆ ದೆಹಲಿಯ 'ತಿಹಾರ್' ಎಂಬ ಅತಿಥಿ ಗೃಹಪ್ರವೇಶ ಮಾಡ ಬೇಕಾದ ಸಂದರ್ಭ ಬರಬಹುದಲ್ಲವೇ ಎಂಬ ವಿವೇಕೋದಯವೇ ಸುಶ್ಮಾ ಸ್ವರಾಜರಿಗೆ ರೆಡ್ಡಿ ಸಹೋದರರ ನಿಜವಾದ ಅಮ್ಮ ನೆನಪಾಗಲು ಕಾರಣವಲ್ಲವೇ ?

ಬಾಲಂಗೋಚಿ

ರೆಡ್ಡಿ ಬಳಗದ ಘನತೆ, ಅರ್ಹತೆ,ಯೋಗ್ಯತೆಗೆ ತಕ್ಕಂತೆ ಅವರಿಗೆ ರಾಜಧಾನಿಯ ಪರಪ್ಪನ ಅಗ್ರಹಾರದ ಮಾವನ ಮನೆಯೇ ಸರಿ ನಾವು ಅಂದುಕೊಳ್ಳುತ್ತಿರುವಾಗ ಅದಕ್ಕೊಂದು ಅಡ್ಡಿ ಬರುವ ಸಾಧ್ಯತೆ ಕಂಡು ಬರುತ್ತಿದೆ. ಪರಪ್ಪನ ಅಗ್ರಹಾರದ ಅತಿಥಿಗೃಹಕ್ಕೆ ಸ್ವತ: ಯಡಿಯೂರಪ್ಪ ನವರೆ ಆಗಮಿಸುವ ಸಂಭವ ಸಾಧ್ಯತೆಗಳಿರುವು ದರಿಂದ ಅದನ್ನು ಅವರಿಗಾಗಿ ಮೀಸಲಿಡುವುದು ಒಳ್ಳೆಯದಲ್ಲವೇ ? ಮುಖ್ಯಮಂತ್ರಿ ಯಡಿ ಯೂರಪ್ಪನವರಂತಹ ಅರ್ಹ ಹಿರಿಯರಿರುವಾಗ ವಿನೂತನ ಸುಸಜ್ಜಿತ ಅತಿಥಗೃಹವನ್ನು ಕಿರಿಯ ಸಹೋದರರರಿಗೆ ಬಿಡುವುದು ತರವೇ ? ಅದನ್ನು ಹಿರಿಯರಿಗೇ ಮೀಸಲಿರಿಸಿ ಬಳ್ಳಾರಿಯ ಸಹೋದರರಿಗೆ ಬಳ್ಳಾರಿಯ ಅತಿಥಿಗೃಹವನ್ನೇ ಮೀಸಲಿಡುವುದೇ ಸರಿಯಲ್ಲವೇ ?

"ಎರಡೇ ವರ್ಷಗಳಲ್ಲಿ ಕರ್ನಾಟಕ ಗುಡಿಸಲು ರಹಿತ ರಾಜ್ಯ !!!"

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಈಗ ಮೂರು ವರ್ಷ ತುಂಬಿದೆ. ಈ ಸಂಭ್ರಮದ ಸಂದರ್ಭಕ್ಕೆ ರಾಜ್ಯದ ಜನತೆಗಾಗಿ ಒಂದು ಮಹಾನ್ ಜೋಕ್ ಮಾಡಬೇಕು ಅನಿಸಿತೇನೋ ನಮ್ಮ ಡಾ।ಬಿ.ಎಸ್. ಯಡಿಯೂರಪ್ಪನವರಿಗೆ. ಅಗೋ ಒಂದು ಅದ್ಭುತವಾದ ಜೋಕ್ ಅನ್ನೇ ಸಿಡಿಸಿದ್ದಾರೆ. "ಇನ್ನು ಎರಡೇ ವರ್ಷಗಳಲ್ಲಿ ರಾಜ್ಯದಲ್ಲಿ ಮನೆ ಇಲ್ಲದ ಎಲ್ಲರಿಗೂ ಸೂರು ಕಲ್ಪಿಸಲಾಗುವುದು...ಕರ್ನಾಟಕವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಲಾಗುವುದು...' ಅನ್ನುತ್ತಿದೆ ರಾಜ್ಯದ ಮು.ಮ.ಗಳ ಹೇಳಿಕೆ.

ಇಂದಿರಾಗಾಂಧಿಯವರ 'ಗರೀಬಿ ಹಠಾವೋ' ಎಂಬ ಮಹಾ ಜೋಕ್‌ಗಿಂತ ಇದು ದೊಡ್ಡ ಜೋಕಾ ಅಥವಾ ಚಿಕ್ಕ ಜೋಕಾ ಅಂತ ನಾವೀಗ ಯೋಚಿಸಬೇಕಾಗಿದೆ.

ಈ ಸುಸಂದರ್ಭದಲ್ಲಿ ಯಡಿಯೂರಪ್ಪನವರಿಗೆ ಕೆಲವೊಂದು 'ಚಿನ್ನ ಚಿನ್ನ' ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಪ್ರಶ್ನೆಗಳು

0 ಸ್ವಾಮಿ ಕರ್ನಾಟಕ ರಾಜ್ಯದಲ್ಲಿ ಸ್ವಂತ ಮನೆ ಇಲ್ಲದ, ಸ್ವಂತ ಮನೆ ನಿವೇಶನ ಇಲ್ಲದ ಬಡವರು ಎಷ್ಟು ಜನರಿದ್ದಾರೆ ? ಎಂದಾದರು ಅಂದಾಜನ್ನು ಮಾಡಿದ್ದೀರ ?

0 ಎರಡು ವರ್ಷದಲ್ಲಿ ರಾಜ್ಯದಲ್ಲಿ ಮನೆ ಇಲ್ಲದ ಬಡವರನ್ನೆಲ್ಲ ನಿರ್ಮೂಲನೆ ಮಾಡುವ ಶಪಥ ಮಾಡುತ್ತಿರುವ ನೀವು ಕಳೆದ ಮೂರು ವರ್ಷಗಳ ಆಡಳಿತದಲ್ಲಿ ಬಡವರಿಗೆ ಎಷ್ಟು ಮನೆ ಕಟ್ಟಿಕೊಟ್ಟಿದ್ದೀರಿ ಜನತೆಗೆ ಲೆಕ್ಕ ಹೇಳುತ್ತೀರ ?.

0 ಕಳೆದ ಎರಡೂವರೆ ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ಭೀಕರ ಪ್ರವಾಹದಲ್ಲಿ ಮನೆ ಮಾರು ಕಳೆದುಕೊಂಡು ಇಂದಿಗೂ ಕಂಗಾಲಾಗಿ ಆಕಾಶ ನೋಡುತ್ತಾ ಕಾಲ ದೂಡುತ್ತಿರುವ ನಿರಾಶ್ರಿತರಿಗೆ ಕಟ್ಟಿಕೊಡಬೇಕಿರುವ ಮನೆಗಳನ್ನು ಎಂದು ಪೂರ್ಣಗೊಳಿಸಿಕೊಡುತ್ತೀರಿ.?

0 ರಾಜ್ಯದ ನಗರ, ಪಟ್ಟಣ, ಹಳ್ಳಿ ಎನ್ನದೇ ಊರೂರುಗಳಲ್ಲಿ ಕೂಲಿಕಾರರು, ಬಡರೈತರು ಅಸಂಘಟಿತ ಕಾರ್ಮಿಕರು ಒಂದು ಪುಟ್ಟ ಮನೆ ಕಟ್ಟಿಕೊಳ್ಳಲು ತುಂಡು ಭೂಮಿ ಅಂದರೆ ಮನೆ ನಿವೇಶನ ಕೊಡಿ ಅಂತ ಅರ್ಜಿ ಹಾಕಿಕೊಂಡು ಧರಣ, ಚಳುವಳಿ ಅಂತ ಮಾಡ್ತಾ ಇದ್ದಾರಲ್ಲ ಅವರಿಗೆ ನಿವೇಶನ ಕೊಡುವುದು ಒಂದೆಡೆ ಇರಲಿ. ಅವರ ಮೇಲೆ ನಿಮ್ಮ ಪೋಲೀಸರನ್ನು ಛೂ ಬಿಟ್ಟು ಈ ಬಡಬಗ್ಗರ ನಡ ಮುರಿಯುವುದಿಲ್ಲ ಅಂತ ನಮಗೆ ಭರವಸೆ ಕೊಡುವಿರ ?

ಅಲ್ಪ ಸಂಖ್ಯಾತರ ಆಶಾಕಿರಣ!

ರಾಜ್ಯ ಬಿಜೆಪಿ ಸರ್ಕಾರವು ತಾನು ಅಲ್ಪ ಸಂಖ್ಯಾತರ ಆಶಾಕಿರಣ ಅಂತ ಬೊಬ್ಬೆ ಹೊಡೆಯುವುದನ್ನು ನೀವು ಕೇಳಿರುತ್ತೀರಿ. ಬೆಂಗಳೂರಿನ ಬಿಎಂಟಿಸಿ ಬಸ್‌ಗಳ ಮೇಲೆ ಮುಸ್ಲಿಂ ಮಹಿಳೆಯೊಬ್ಬರು ಯಡಿಯೂರಪ್ಪ ನವರಿಗೆ ರಾಖಿ ಕಟ್ಟುತ್ತಿರುವ ಚಿತ್ರವಿರುವ ಜಾಹಿರಾತು ರಾರಾಜಿಸುತ್ತಿದೆ. (ಕಾಲೇಜುಗಳಲ್ಲಿ ತಮ್ಮನ್ನು ಕಾಡುವ ಪೋಕರಿ ಹುಡುಗರ ಕಾಟದಿಂದ ಪಾರಾಗಲು ಹುಡುಗಿಯರು ರಾಖಿ ಹಬ್ಬದ ದಿನ ಅವರನ್ನು ಹುಡುಕಾಡಿ ಕಾಡಿ ರಾಖಿ ಕಟ್ಟುತ್ತಾರೆ ಅನ್ನುವ ವಿಷಯ ಯಾಕೋ ಈ ಸಂದರ್ಭದಲ್ಲಿ ಬೇಡ ಬೇಡವೆಂದರೂ ನೆನಪಾಗುತ್ತಿದೆ. ಅಲ್ಲವೇ) ನಗರದ ಬೀದಿ ಬೀದಿಗಳಲ್ಲಿ ಈ ಸಂಬಂಧ ಬಿಜೆಪಿ ಸರ್ಕಾರದ ಬೃಹತ್ ಜಾಹಿರಾತು ಫಲಕಗಳು ವಿಜೃಂಬಿಸುತ್ತಿವೆ. ಬಿಜೆಪಿ ಸರ್ಕಾರವು ನಿಜವಾಗಿಯೂ ಅಲ್ಪ ಸಂಖ್ಯಾತರ ಆಶಾಕಿರಣವೇ. ಆದರೆ ಯಾವ ಅಲ್ಪ ಸಂಖ್ಯಾತರು ಎಂಬುದಷ್ಟೆ ಇಲ್ಲಿ ಪ್ರಶ್ನೆ. ಇರಲಿ ಅದನ್ನು ಕೊನೆಗೆ ನೋಡೋಣ. ಈಗ ವಿಷಯ ಏನಪ್ಪಾಂದ್ರೆ, ರಾಜ್ಯದ ಹೈಕೋರ್ಟ್ ಧಾರ್ಮಿಕ ಅಲ್ಪ ಸಂಖ್ಯಾತರ ವಿಷಯ ವೊಂದರ ಸಂಬಂಧವಾಗಿ ಘನ ಬಿಜೆಪಿ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ರಾಜ್ಯ ವಕ್ಫ್ ಮಂಡಳಿಯ ಅಧಿಕಾರಾವಧಿ ಮುಗಿದು ಹದಿನೆಂಟು ತಿಂಗಳಾಗಿದೆ. ಅವಧಿ ಮುಗಿದ ಕೂಡಲೇ ಸರ್ಕಾರ ಚುನಾವಣೆ ನಡೆಸಬೇಕಾಗಿತ್ತು. ಚುನಾವಣೆ ನಡೆಸಿ ಚುನಾಯಿತರಿಗೆ ಅಧಿಕಾರ ಕೊಟ್ಟು ಬಿಟ್ಟರೆ ತಾನು ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದ

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

ತಹ್ರೀರ್ ಚೌಕ ಸ್ಪೈನಿಗೆ ಬಂತು

ಈಜಿಪ್ಪಿನ ಕೈರೋದ ತ್ರ್ೀರ್ ಚೌಕ ಮತ್ತು "ಅರಬ್ ವಸಂತ" ಎಂದು ಕರೆಯಲಾದ ಪ್ರಜಾಸತ್ತೆಗೆ ಅರಬ್ ದೇಶಗಳ ಜನತೆಯ ನೇರ ಕಾರ್ಯಾಚರಣೆ, ಜಗತ್ತಿನಾದ್ಯಂತ ಸ್ಫೂರ್ತಿಯ ಚಿಲುಮೆ ಆಗಿದೆ. ಕಳೆದ ಎರಡು ವಾರಗಳಲ್ಲಿ ಸ್ಪೈನಿನ ಜನತೆ ಅದರಲ್ಲೂ ಯುವ ಜನತೆ ಮತ್ತು ಕಾರ್ಮಿಕರು ತಹ್ರೀರ್ ಚೌಕದ ಸ್ಫೂರ್ತಿಯನ್ನು, ಸ್ಪೈನಿನ ರಾಜಧಾನಿ ಮ್ಯಾಡ್ರಿಡ್ ಮಾತ್ರವಲ್ಲ 166 ಪಟ್ಟಣಗಳಿಗೆ ತಂದರು. ಮ್ಯಾಡ್ರಿಡಿನ ಕೇಂದ್ರದಲ್ಲಿರುವ ಪೋರ್ಟಾಡೆಲ್ ಸೊಲ್ ಚೌಕವನ್ನು ಹತ್ತಾರು ಸಾವಿರ ಜನ ಕಳೆದ ಎರಡು ವಾರಗಳಿಂದ ಆಕ್ರಮಿಸಿದ್ದಾರೆ. ಟೆಂಟುಗಳನ್ನು ಹಾಕಿ ವಾಸಿಸುತ್ತಿದ್ದಾರೆ. ಸರ್ಕಾರದ ನೀತಿಗಳು ಮತ್ತು ವ್ಯವಸ್ಥೆ ಬಗ್ಗೆ ಪ್ರತಿಭಟಿಸುತ್ತಿದ್ದಾರೆ. ಅದೇ ರೀತಿ 166 ಪಟ್ಟಣಗಳ ಪ್ರಮುಖ ಕೇಂದ್ರೀಯ ಚೌಕಗಳಲ್ಲೂ ನಡೆದಿದೆ.



ಇವೆಲ್ಲಾ ಆರಂಭವಾಗಿದ್ದು ಮೇ 15 ರಂದು. ಅಂದು ಕೆಲವು ಸಾಮಾಜಿಕ ಚಳುವಳಿಗಳು ಮ್ಯಾಡ್ರಿಡಿನ ಕೇಂದ್ರದಲ್ಲಿ ಪೋರ್ಟಾ ಡೆಲ್ ಸೊಲ್ ಚೌಕದಲ್ಲಿ ಪ್ರತಿಭಟನಾ ಪ್ರದರ್ಶನ ಆಯೋಜಿಸಿದ್ದರು. ಸರ್ಕಾರದ ಮಿತವ್ಯಯದ ಹೆಸರಲ್ಲಿ ಸಾರ್ವಜನಿಕ ಮತ್ತು ಕಲ್ಯಾಣ ಯೋಜನೆಗಳಲ್ಲಿ ಭಾರೀ ಕಡಿತದ ನೀತಿಗಳ ವಿರುದ್ಧ, ಮತ್ತು ತುರ್ತು ಪ್ರಜಾಸತ್ತಾತ್ಮಕ ಸುಧಾರಣೆಗಳಿಗೆ ಒತ್ತಾಯಿಸಿ ಪ್ರತಿಭಟನೆ ಇತ್ತು. ಮೇ 22 ರಂದು ನಡೆಯಲಿರುವ ಸ್ಥಳೀಯ ಸಂಸ್ಥೆಯ ಚುನಾವಣೆಯ ಮೇಲೆ ಪರಿಣಾಮ ಬೀರಬಹುದು ಎಂಬ ನೆಪ ಒಡ್ಡಿ ಅದಕ್ಕೆ ಸರ್ಕಾರ ಅನುಮತಿ ನಿರಾಕರಿಸಿತು. ಪ್ರತಿಭಟನಾಕಾರರನ್ನು ಚೌಕದಿಂದ ಹೊರ ಹಾಕಿತು. ಇದರ ವಿರುದ್ಧ ಪ್ರತಿಭಟನೆಯಾಗಿ ಚೌಕವನ್ನು ಮರುದಿನ ಪ್ರತಿಭಟನಾಕಾರರು ಆಕ್ರಮಿಸಿಕೊಂಡರು. ಅಲ್ಲಿಯೇ ನೆಲೆ ಊರಿದರು. ಸುದ್ದಿ ಹರಡುತ್ತಿದ್ದಂತೆ ಭಾರಿ ಸಂಖ್ಯೆಯಲ್ಲಿ ಜನ ಚೌಕವನ್ನು ಬಂದು ಸೇರಿದರು. ಪೋಲೀಸರು ಏನೂ ಮಾಡಲಾಗಲಿಲ್ಲ.

ಮೇ 15ರ ಚಳುವಳಿ

ಮಾತ್ರವಲ್ಲ ಸ್ಪೈನಿನ 166 ಪಟ್ಟಣಗಳಿಗೆ ಹಬ್ಬಿತು. ಚುನಾವಣೆಗಳು ಬಂದವು. ಹೋದವು. ಆದರೆ ಚಳುವಳಿ ನಿಲ್ಲಲಿಲ್ಲ. ಹಲವು ಪಟ್ಟಣಗಳಲ್ಲಿ ದಿನವೂ ಪ್ರತಿಭಟನಾ ಪ್ರದರ್ಶನಗಳು ಮತ್ತು ಚೌಕದ ಆಕ್ರಮಣ ಮುಂದುವರೆದಿದೆ. ಈಗ ಮೇ 15ರ ಚಳುವಳಿ ಎಂದು ಇದು ಹೆಸರು ಪಡೆದಿದೆ. ಹಲವು ಇತರ ಯುರೋಪಿಯನ್ ದೇಶಗಳ (ಬರ್ಲಿನ್, ಪ್ಯಾರಿಸ್, ರೋಂ) ನಗರಗಳಲ್ಲೂ ಸೌಹಾರ್ದ ಪ್ರತಿಭಟನೆಗಳು ನಡೆದಿವೆ. ಇಟಲಿಯ 10 ನಗರಗಳಲ್ಲೂ ಇದೇ ರೀತಿಯ ಚೌಕ ಆಕ್ರಮಣ ಚಳುವಳಿ ನಡೆದಿದೆ.

ಸ್ಪೈನ್ ಜಾಗತಿಕ ಆರ್ಥಿಕ ಬಿಕ್ಕಟ್ಟು ಅತ್ಯಂತ ತೀವ್ರವಾಗಿ ತಟ್ಟಿದ ಯುರೋಪಿಯನ್ ದೇಶ. ಸರ್ಕಾರ, ದಿವಾಳೀಕೋರ ಜೂಜುಕೋರ ನೀತಿಗಳಿಂದ ತೀವ್ರ ಹಣಕಾಸು ಬಿಕ್ಕಟ್ಟು ತಟ್ಟಿದೆ. ದೇಶವೇ ದಿವಾಳಿ ಆಗುವ ಅಂಚಿಗೆ ಬಂದಿದೆ. ಅದರ ಪರಿಣಾಮವನ್ನು ಜನರ ಮೇಲೆ ದಾಟಿಸುವ ಬ್ಯಾಂಕುಗಳು ಮತ್ತು ಕಂಪನಿಗಳ ಹುನ್ನಾರಗಳು ಜನರನ್ನು ರೊಚ್ಚಿಗೆಬ್ಬಿಸಿದೆ. ಈಗಾಗಲೇ "ಮಿತವ್ಯಯ"ದ ನೀತಿಗಳಿಂದ ತೀವ್ರ ನಿರುದ್ಯೋಗ ಹರಡಿದೆ. ಜಗತ್ತಿನಲ್ಲೇ 12 ನೇ ದೊಡ್ಡ ಆರ್ಥಿಕವಾದ ಸ್ಪೈನ್ ಮುಂದುವರೆದ ದೇಶಗಳಲ್ಲಿ ಅತ್ಯಂತ ಹೆಚ್ಚು – ಶೇ. 20 ಕ್ಕೂ ಹೆಚ್ಚು – ನಿರುದ್ಯೋಗ ಕಂಡಿದೆ. ಯುವ ಜನರ (18 ರಿಂದ 25 ವರ್ಷದವರ) ನಿರುದ್ಯೋಗ ಶೇ. 45 ದಾಟಿದೆ. ಇಂದಿನ ಸ್ಪೈನಿನ ಯುವ ಜನತೆ "ಕಳೆದು ಹೋದ ಪೀಳಿಗೆ" ಎನ್ನಲಾಗುತ್ತಿದೆ.

"ಬಂಡವಾಳಶಾಹಿಯೇ ಬಿಕ್ಕಟ್ಟು"

ಇವೆಲ್ಲದರ ಹಿನ್ನೆಲೆಯಲ್ಲಿ ಈ ಭಾರೀ ಪ್ರತಿಭಟನೆ ಸ್ವಾಭಾವಿಕ. ಪ್ರತಿಭಟನೆಯ ಮುಂಚೂಣಿಯಲ್ಲಿ ಯುವ ಜನತೆ ಇದ್ದರೆ, ಎಲ್ಲಾ ಸಂಘಟಿತ ಶಕ್ತಿಗಳು–ಟ್ರೇಡ್ ಯೂನಿಯನುಗಳು, ರಾಜಕೀಯ ಪಕ್ಷಗಳು (ಎರಡು ಆಳುವ ವರ್ಗಗಳ ಪಕ್ಷಗಳನ್ನು ಬಿಟ್ಟು), ಸಾಮಾಜಿಕ ಚಳುವಳಿಗಳು ಸಾಥ್ ನೀಡಿವೆ. ಚೌಕದಲ್ಲಿ "ಬಂಡವಾಳಶಾಹಿಯೇ ಬಿಕ್ಕಟ್ಟು", "ನಿಜವಾದ ಪ್ರಜಾಸತ್ತೆ ಈಗಲೇ ಬೇಕು" ಮುಂತಾದ ಭಾರೀ ಬ್ಯಾನರುಗಳೂ ಕಂಡು ಬಂದವು. "ನಾವು ಜನ. ರಾಜಕಾರಣಿಗಳು ಮತ್ತು ಬ್ಯಾಂಕರುಗಳ ಕೈನಲ್ಲಿರುವ ಸರಕುಗಳಲ್ಲ", "ಅವರಿಗೆ ಮತ ಕೊಡಬೇಡಿ" (ಆಳುವ ವರ್ಗದ ಎರಡುಪ್ರಮುಖ ಪಕ್ಷಗಳಿಗೆ) ಎಂಬಂತಹ ಘೋಷಣೆಗಳು ಕೇಳ ಬಂದವು. ಇವು ಚಳುವಳಿಕಾರರ ಗಮನಾರ್ಹ ರಾಜಕೀಯ ಪ್ರಜ್ಞೆಯ ಮಟ್ಟ ತೋರಿಸಿವೆ. ಎರಡು ರಾಜಕೀಯ ಪಕ್ಷಗಳ ವ್ಯವಸ್ಥೆಯಲ್ಲಿ ಬದಲಿ ರಾಜಕೀಯ ದನಿಗಳಿಗೆ ಅವಕಾಶ ಇಲ್ಲದಿರುವುದರ ವಿರುದ್ಧ ಆಕ್ರೋಶ ತೋರಿಸಿವೆ.

ಮೇ 22 ರಂದು ನಡೆದ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಆಳುವ ಪಕ್ಷ 13 ರಲ್ಲಿ 11 ಪ್ರಾಂತ್ಯಗಳಲ್ಲಿ ಪರಾಭವ ಹೊಂದಿದೆ. ಮುನಿಸಿಪಾಲಿಟಿಗಳಲ್ಲೂ ತೀವ್ರ ಪರಾಭವ ಕಂಡಿದೆ. 1970 ರಿಂದ ಸತತವಾಗಿ ಗೆಲ್ಲುತ್ತಿದ್ದ ಹಲವು ಪ್ರಾಂತ್ಯ ಮತ್ತು ಪಟ್ಟಣಗಳಲ್ಲಿ ಸೋತಿದೆ. ಶೇ. 10 ಕ್ಕಿಂತಲೂ ಹೆಚ್ಚು ಮತ ಕಳೆದುಕೊಂಡಿದೆ. ಆದರೆ ಇದರ ಪ್ರಮುಖ ಪ್ರಯೋಜನ ಎರಡು ಪಕ್ಷಗಳ ವ್ಯವಸ್ಥೆಯಲ್ಲಿ ಆಗುವಂತೆ ಬಲಪಂಥೀಯ ಪಕ್ಷಕ್ಕೆ ಆಗಿದೆ. ಇದು ಹಿಂದೆಂದಿಗಿಂತಲೂ ಹೆಚ್ಚಿನ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳ ಆಳುವ ವರ್ಗಗಳು ರೂಪಿಸಿದ ಪ್ರಜಾಸತ್ತೆಯ ತೀವ್ರ ಮಿತಿಗಳನ್ನು ಜನರಿಗೆ ಮನದಟ್ಟು ಮಾಡಿವೆ. ಆದ್ದರಿಂದ ಎಚ್ಚೆತ್ತ ಜನತಾ ಚಳುವಳಿ ಆರ್ಥಿಕ ನೀತಿ ಮತ್ತು ತೀವ್ರ ಪ್ರಜಾಸತ್ತಾತ್ಮಕ ಸುಧಾರಣೆ ಎರಡಕ್ಕೂ ತೀವ್ರ ಒತ್ತಾಯ ತರಲಿದೆ.

ವಿಧಾನಸಭಾ ಅಧ್ಯಕ್ಷ ಕೆ.ಜಿ. ಬೋಪಯ್ಯ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರು ರಾಜೀನಾಮೆ ನೀಡಲಿ – ಸಿ.ಪಿಐ(ಎಂ)

ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ ಅಕ್ಟೋಬರ್ 10, 2010ರಂದು ವಿಶ್ವಾಸಮತ ಕುರಿತು ಶಾಸಕರು ಮತದಾನ ನಡೆಸುವ ಪ್ರಕ್ರಿಯೆಯಲ್ಲಿ ಸಭಾಧ್ಯಕ್ಷರಾಗಿದ್ದ ಕೆ.ಜಿ.ಬೋಪಯ್ಯನವರು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅನ್ಯಮಾರ್ಗಗಳಲ್ಲಿ ಅನುಕೂಲ ಮಾಡುವ ಸಲುವಾಗಿಯೇ 16 ಶಾಸಕರನ್ನು ಅನರ್ಹಗೊಳಿಸುವ ಆದೇಶವನ್ನು ಮಾಡಿದ್ದಾರೆ ಎಂದು ಸರ್ವೋಚ್ಚ ನ್ಯಾಯಾಲಯವು ಛೀಮಾರಿ ಹಾಕುವ ರೀತಿಯಲ್ಲಿ ಸ್ಪೀಕರ್ ಅವರ ಪಾತ್ರವನ್ನು ಗುರುತಿಸಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಶಾಸಕರನ್ನು ಅನರ್ಹಗೊಳಿಸಿರುವುದನ್ನು ಅನೂರ್ಜಿತಗೊಳಿಸಿದೆ. ಸ್ಪೀಕರ್‌ರವರ ಪಾತ್ರ ದೋಷಪೂರಿತ ಹಾಗೂ ಪಕ್ಷಪಾತದಿಂದ ಕೂಡಿರುವ ಹಿನ್ನಲೆಯಲ್ಲಿ ನಾಳೆಯಿಂದ (ಜೂನ್ 2, 2011) ಆರಂಭವಾಗುವ ವಿಧಾನಸಭೆಯ ಅಧಿವೇಶನದ ಸಭಾಧ್ಯಕ್ಷ ಸ್ಥಾನವನ್ನು ಕೆ.ಜಿ ಬೋಪಯ್ಯನವರು ವಹಿಸಬಾರದು. ಈ ಹಿನ್ನಲೆಯಲ್ಲಿ ಸಭಾಧ್ಯಕ್ಷ ಶ್ರೀ ಬೋಪಯ್ಯನವರು ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸುತ್ತದೆ.

ಸ್ಪೀಕರ್ ಸ್ಥಾನವನ್ನು ದುರುಯೋಗಪಡಿಸಿಕೊಂಡು ಅಕ್ರಮವಾಗಿ ಅಧಿಕಾರದಲ್ಲಿ ಮುಂದುವರಿಯುತ್ತಿರುವ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದೂ ಸಿಪಿಐ(ಎಂ) ಆಗ್ರಹಿಸುತ್ತದೆ.

ಜೂನ್ 1 ರಂದು ಸಿಪಿಐ(ಎಂ) ರಾಜ್ಯಸಮಿತಿ ನೀಡಿದ ಹೇಳಿಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಭ್ರಷ್ಟಾಚಾರ ನಿಗ್ರಹ....

ಪುಟ 13 ರಿಂದ

ಯವರ ಮೇಲಿನ ಆಪಾದನೆಯ ಪ್ರತಿರೂಪ.

ಒಟ್ಟಿನಲ್ಲಿ 2ಜಿ ಹಗರಣವನ್ನು ಕೇವಲ ಒಬ್ಬ ವ್ಯಕ್ತಿಯ ಕುತ್ತಿಗೆಗೆ ಕಟ್ಟುವ ಪ್ರಯತ್ನಗಳು ಫಲ ಕೊಡುತ್ತಿಲ್ಲ. ಅದು ನವ-ಉದಾರವಾದೀ ದಾರಿ ಪ್ರೋತ್ಸಾಹಿಸುತ್ತಿರುವ ಚಮಚಾ ಬಂಡವಾಳಶಾಹಿಯ ನೇರ ದುಷ್ಫಲ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

★

ಈಗ ಕಪ್ಪು ಹಣ ಲೆಕ್ಕಾಚಾರದ ಕಸರತ್ತು

ದೇಶದಲ್ಲಿ ಕಪ್ಪುಹಣ ಎಷ್ಟು ಉತ್ಪತ್ತಿ ಯಾಗುತ್ತಿದೆ ಎಂಬ ಲೆಕ್ಕಾಚಾರಗಳೆಲ್ಲ ಕೇವಲ ಊಹೆಗಳ ಮೇಲೆ ನಿಂತಿದೆ ಎನ್ನುತ್ತಿರುವ ಯುಪಿಎ ಸರಕಾರ ಅದನ್ನೇ ಕಪ್ಪುಹಣದ ನಿಗ್ರಹದಲ್ಲಿ ಕಾಣುತ್ತಿರುವ ಹಿಂಜರಿಕೆಗೆ ಸಮರ್ಥನೆಯೆಂಬಂತೆ ಮುಂದಿಡುತ್ತಿತ್ತು. ಆದರೆ ದೇಶದ ಸರ್ವೋಚ್ಚ ನ್ಯಾಯಾಲಯದ ಟೀಕೆಗಳು ಮತ್ತು ಈಗ ದೇಶದಲ್ಲೆಲ್ಲ ಭ್ರಷ್ಟಾಚಾರದ ವಿರುದ್ಧ ವ್ಯಕ್ತವಾಗುತ್ತಿರುವ ಆಕ್ರೋಶದ ಹಿನ್ನೆಲೆಯಲ್ಲಿ, ತಾನೂ ಕಪ್ಪು ಹಣದ ನಿಗ್ರಹಕ್ಕೆ ಬದ್ಧ ಎಂದು ತೋರಿಸುವ ಪ್ರಯತ್ನ ನಡೆಸಬೇಕಾಗಿ ಬಂದಿದೆ. ಈ ದಿಕ್ಕಿನಲ್ಲಿ ಅದು ದೇಶದ ಮೂರು ಉನ್ನತ ಆರ್ಥಿಕ ಸಂಸ್ಥೆಗಳನ್ನು ಈ ಬಗ್ಗೆ ಅಧ್ಯಯನಕ್ಕೆ ಒಪ್ಪಿಸಿದೆ. ಈ ಮೂರು ಸಂಸ್ಥೆಗಳೆಂದರೆ, ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ಧೋರಣೆ ಸಂಸ್ಥೆ (ಎನ್‌ಐಪಿಎಫ್‌ಪಿ), ರಾಷ್ಟ್ರೀಯ ಹಣಕಾಸು ನಿರ್ವಹಣಾ ಸಂಸ್ಥೆ(ಎನ್‌ಐಎಫ್‌ಎಂ) ಮತ್ತು ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿ(ಎನ್‌ಸಿಎಇಆರ್).

ಇವು ಈಗಾಗಲೇ ಮಾರ್ಚ್ ತಿಂಗಳಲ್ಲಿ ತಮ್ಮ ಅಧ್ಯಯನಗಳನ್ನು ಆರಂಭಿಸಿದ್ದು 18 ತಿಂಗಳಲ್ಲಿ ಕಪ್ಪು ಹಣದ ಉತ್ಪತ್ತಿಯ ಮೂಲಗಳು, ಕಾರಣಗಳು, ಪ್ರಮಾಣ, ಅವುಗಳನ್ನು ಬಿಳಿ ಮಾಡುವ ದಾರಿಗಳು ಹಾಗೂ ಕಪ್ಪು ಹಣವನ್ನು ಪತ್ತೆ ಮಾಡುವ ಹಾಗೂ ತಡೆಯುವ ಮಾರ್ಗೋಪಾಯಗಳ ಬಗ್ಗೆ ಶಿಫಾರಸು ಮಾಡುತ್ತವಂತೆ.

ಇದರ ಮೊದಲು ಯುಪಿಎ-2 ಸರಕಾರ ತೆರಿಗೆ ಅಧಿಕಾರಿಗಳ ಒಂದು ಉನ್ನತ ಸಮಿತಿಯನ್ನು ರಚಿಸಿದ್ದು ಕಪ್ಪು ಹಣವನ್ನು ತಡೆಯಲು ಕಾನೂನುಗಳನ್ನು ಬಿಗಿಗೊಳಿಸುವ ಬಗ್ಗೆ ಕ್ರಮಗಳನ್ನು ಸೂಚಿಸಬೇಕೆಂದೂ ಹೇಳಿದೆ. ಜೂನ್ 4ರಿಂದ ಯೋಗ ಗುರು ವೆನಿಸಿಕೊಂಡಿರುವ ಬಾಬಾ ರಾಂದೇವ್ ನಡೆಸಬೇಕೆಂದಿರುವ ಉಪವಾಸ ಸತ್ಯಾಗ್ರಹವನ್ನು ಕೈಬಿಡುವಂತೆ ಮನವೊಲಿಸಲು ಕೈಗೊಂಡಿರುವ ಕ್ರಮಗಳು ಎನ್ನಲಾಗಿದೆ. ಈ ನಡುವೆ ಬಾಬಾ ರಾಂದೇವ್‌ರನ್ನು ಒಲಿಸಿಕೊಳ್ಳಲು ಯುಪಿಎ-2 ಸರಕಾರ ಸಂಘ ಪರಿವಾರದೊಂದಿಗೆ ಸ್ಪರ್ಧೆಗೆ ಇಳಿದಿರುವಂತೆ ಕಾಣುತ್ತಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಯುಪಿಎ-2 ಘಟಾನುಘಟಿಗಳು ಅವರನ್ನು ಭೇಟಿಯಾಗಿ 'ಮನವೊಲಿಸಲು' ಪ್ರಯತ್ನಿಸುತ್ತಿದ್ದಾರೆ. ಅತ್ತ ಈ ಬಾಬಾ ಲೋಕಪಾಲ ಕಾನೂನಿನ ವ್ಯಾಪ್ತಿಗೆ ಪ್ರಧಾನ ಮಂತ್ರಿಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಬರಬೇಕಾಗಿಲ್ಲ ಎಂಬ ಯುಪಿಎ-2 ನಿಲುವನ್ನು ಒಮ್ಮೆ ಬೆಂಬಲಿಸಿ, ಮರುದಿನ ತಾನು ಹಾಗೆ ಹೇಳಿಲ್ಲ ಎಂದಿದ್ದಾರೆ.

★

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ: ಯುಪಿಎ ಸಿನಿಕ ಪ್ರಯತ್ನ

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎಡಪಂಥೀಯರ ಹಿನ್ನಡೆಯ ಹಿನ್ನೆಲೆಯಲ್ಲಿ ಆರ್ಥಿಕ 'ಸುಧಾರಣೆ'ಗಳ ವೇಗವನ್ನು ಹೆಚ್ಚಿಸುವ ಪ್ರಯತ್ನಗಳು ಆರಂಭವಾಗಿವೆ. ಯುಪಿಎ-2 ಸರಕಾರದ ಮುಖ್ಯ ಆರ್ಥಿಕ ಸಲಹೆ ಗಾರರ ನೇತೃತ್ವದಲ್ಲಿರುವ ಹಣದುಬ್ಬರ ಕುರಿತ ಅಂತರ-ಇಲಾಖೆ ಗುಂಪು ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಅವಕಾಶ ನೀಡಬೇಕು ಎಂದು ಶಿಫಾರಸು ಮಾಡಿದೆ. ಈ ಗುಂಪು ಹಣದುಬ್ಬರ ತಡೆಯಲು ಬೇರೆ ಯಾವ ಪರಿಣಾಮಕಾರ ಕ್ರಮಗಳನ್ನೂ ಶಿಫಾರಸು ಮಾಡಿಲ್ಲ ಎಂಬುದನ್ನು ಗಮನಿಸಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕೆಂಬ ಸುಪ್ರಿಂಕೋರ್ಟ್ ಸಲಹೆಯನ್ನು ಕಿವಿಗೆ ಹಾಕಿಕೊಳ್ಳದ ಸರಕಾರ ಇಂತಹ ಶಿಫಾರಸಿಗೆ ಕಿವಿತೆರೆದು ಕೂತಿದೆ.

ಇದು ಹಣದುಬ್ಬರವನ್ನು ತಡೆಯುವಲ್ಲಿನ ವಿಫಲತೆಯನ್ನೇ ಬಳಸಿ ಕೊಂಡು ಬಹುರಾಷ್ಟ್ರೀಯ ಕಂಪನಿಗಳಿಗೆ ಇನ್ನಷ್ಟು ರಿಯಾಯ್ತಿಗಳನ್ನು ಒದಗಿಸುವ ಪ್ರಯತ್ನ ಎಂಬುದು ತಜ್ಞರ ವಿಶ್ಲೇಷಣೆ. ವಾಲ್‌ಮಾರ್ಟ್ ನಂತಹ ಬಹುರಾಷ್ಟ್ರೀಯ ಕಂಪನಿಗಳು ಚಿಲ್ಲರೆ ವ್ಯಾಪಾರದಲ್ಲಿ ಪ್ರವೇಶಿಸಿದರೆ ಪೂರೈಕೆ ಪ್ರಕ್ರಿಯೆಯಲ್ಲಿ ದಕ್ಷತೆ ಹೆಚ್ಚುತ್ತದೆ, ಇದು ಬೆಲೆಯೇರಿಕೆಯನ್ನು ತಡೆಯಲು ನೆರವಾಗುತ್ತದೆ ಎಂಬುದು ಎಫ್‌ಡಿಐ ಪ್ರತಿಪಾದಕರ ವಾದ.

ಇದು ಎಂತಹ ಹುಸಿ ವಾದ ಎಂಬುದನ್ನು ಈಗಾಗಲೇ ಅಂತರಾಷ್ಟ್ರೀಯ ಅನುಭವ ತೋರಿಸಿಕೊಟ್ಟಿದೆ, ಸರಕಾರಗಳ ನಿಯಂತ್ರಣವನ್ನು ಈ ಬಹುರಾಷ್ಟ್ರೀಯ ದೈತ್ಯರು ಸದಾ ನಿರುಪಯುಕ್ತಗೊಳಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಶಿಫಾರಸನ್ನು ಬಲವಾಗಿ ವಿರೋಧಿಸುತ್ತ ಹೇಳಿದೆ. ಈ ದೈತ್ಯ ಕಂಪನಿಗಳು ತಮ್ಮ ಅಪಾರ ಹಣಕಾಸು ಬಲದಿಂದ ರೈತರು ಮತ್ತು ಬಳಕೆದಾರರ ಮೇಲೆ ಗುತ್ತೇದಾರಿಕೆಯನ್ನು ಬಳಸಿಕೊಂಡು ತಮಗೆ ಲಾಭವಾಗುವ ರೀತಿಯಲ್ಲಿ ಬೆಲೆಗಳಲ್ಲಿ ಗೋಲ್‌ಮಾಲ್ ಮಾಡುತ್ತವೆ, ಅತ್ತ ಲಕ್ಷಾಂತರ ಸಣ್ಣ ಅಸಂಘಟಿತ ಚಿಲ್ಲರೆ ವ್ಯಾಪಾರಸ್ಥರ ಬದುಕು ಮೂರಾಬಟ್ಟೆಯಾಗುತ್ತದೆ ಎಂದು ಅದು ಆತಂಕ ವ್ಯಕ್ತಪಡಿಸಿದೆ.

ಈ ನಡುವೆ ಮೂರು ವಾರಗಳಲ್ಲಿ ಇಳಿಮುಖವಾಗುತ್ತಿದೆ ಎನ್ನಲಾಗುತ್ತಿದ್ದ ಆಹಾರ ಹಣದುಬ್ಬರ ಮತ್ತೆ 8.55%ಕ್ಕೇರಿದೆ. ●

ಭೂಮಿ-ನಿವೇಶನಕ್ಕಾಗಿ ರೈತಕೂಲಿಕಾರರ ಪಟ್ಟು

ಪುಟ 2 ರಿಂದ

ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು

ಮೊದಲ ದಿನ ಸಂಜೆ ಹೆಚ್ಚುವರಿ ಜಿಲ್ಲಾಧಿಕಾರಿಗಳು ಬಾಬಣ್ಣ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಾಂತಪ್ಪ ಮತ್ತಿತರರ ಅಧಿಕಾರಿಗಳೊಂದಿಗೆ ಆಗಮಿಸಿ ಧರಣಿನಿರತರ ಮಧ್ಯೆ ಕುಳಿತು ಪ್ರತಿಭಟನಾಕಾರರ ಬೇಡಿಕೆಗಳನ್ನು ಆಲಿಸಿದರು. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸೋಣ ಪ್ರತಿಭಟನೆಯನ್ನು ವಾಪಸ್ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಬೇಡಿಕೆಗಳ ಬಗ್ಗೆ ಸ್ಪಷ್ಟ ಉತ್ತರ ನೀಡುವ ತನಕ ಹೋರಾಟವನ್ನು ಮುಂದುವರೆಸಲಾಗುವುದು ಎಂದು ಡಿ.ಸಿ.ಗೆ ರೈತ ಸಂಘ ತಿಳಿಸಿತು.

ಮೊದಲ ದಿನ ರಾತ್ರಿ ಭಾರೀ ಮಳೆ ಸುರಿಯಿತು. ಆದರೂ ರೈತರು ಧೃತಿಗೆಡದೇ ಪ್ರತಿಭಟನೆಯನ್ನು ಮುಂದುವರೆಸಿದರು. ಪ್ರತಿಭಟನೆಯ ಸ್ಥಳದಲ್ಲಿಯೇ ಅಡುಗೆಯನ್ನು ತಯಾರಿಸಿ, ಊಟ ತಿನ್ನುತ್ತಿದ್ದರು.

ಮೇ 27 ರಂದು ಮಧ್ಯಾಹ್ನ 3 ಗಂಟೆಯಿಂದ 5 ಗಂಟೆಯ ತನಕ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ರೈತ ಸಂಘದ ನಿಯೋಗವು ಚರ್ಚೆ ನಡೆಸಿತು. ರೈತ ಕೂಲಿಕಾರರ ಬಡವರ ಸಮಸ್ಯೆಗಳು, ಮನೆ - ನಿವೇಶನ, ಬ್ಯಾಂಕ್ ಸಾಲ ಪ್ರಶ್ನೆ ಕುರಿತು ಚರ್ಚೆ ಮಾಡಲಾಯಿತು.

ಜೂನ್ 15 ರೊಳಗೆ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮನೆ ನಿವೇಶನ ನೀಡಲು ಸರ್ಕಾರಿ ಜಮೀನನ್ನು ಹುಡುಕಲಾಗುವುದು. ಸರ್ಕಾರಿ ಜಮೀನು ಸಿಗದ ಕಡೆ ಖಾಸಗಿ ಜಮೀನನ್ನು ಖರೀದಿಸಿ ಬಡವರಿಗೆ ನಿವೇಶನ ಹಂಚಲಾಗುವುದು. ಶ್ರೀನಿವಾಸಪುರ ಪಟ್ಟಣದಲ್ಲಿ ಕೆರೆಯಲ್ಲಿ ನಿರ್ಮಿಸಿಕೊಂಡಿರುವ ಮನೆಗಳ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಲಾಗುವುದು. ಕೆರೆಯಲ್ಲಿನ ಮನೆಗಳಿಗೆ ಸರ್ಕಾರದಿಂದ ಅನುಮತಿ ಸಿಗದಿದ್ದರೆ ಬೇರೊಂದು ಸ್ಥಳದಲ್ಲಿ ಅವರಿಗೆ ನಿವೇಶನ ನೀಡಲಾಗುವುದು. ಬ್ಯಾಂಕ್ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಾಲ ನೀಡುವಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡುವುದು ಮತ್ತು ಬಗರ್‌ಹುಕುಂ ಮಂಜೂರಾತಿ ಸಮಿತಿಯನ್ನು ರಚನೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಲಿಖಿತ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ನಿಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾಧ್ಯಕ್ಷ ಪಿ.ಆರ್.ಸೂರ್ಯನಾರಾಯಣ, ಜಿಲ್ಲಾ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಮುಖಂಡರಾದ ನವೀನ್‌ಕುಮಾರ್, ಕೃಷ್ಣೇಗೌಡ, ಆನಂದ್, ಗಂಗಮ್ಮ, ಎಸ್.ರಮೇಶ್, ಹೊಲ್ಲಂಬಳ್ಳಿ ವೆಂಕಟೇಶಪ್ಪ, ನಾರಾಯಣರೆಡ್ಡಿ, ರಾಮಾಂಜಿ ಮತ್ತಿತರರು ವಹಿಸಿದ್ದರು. ●

ಅಲ್ಪ ಸಂಖ್ಯಾತರ ಆಶಾಕಿರಣ!

ಪುಟ 13 ರಿಂದ

ವ್ಯವಹಾರಗಳಲ್ಲಿ ಮೂಗು ತೂರಿಸುವುದು ಸಾಧ್ಯವೇ ?

ಅವಧಿ ಮುಗಿದ ಮೇಲೆ ಆಡಳಿತಾಧಿಕಾರಿಯನ್ನು ನೇಮಿಸುವುದು ಆಮೇಲೆ ಮತ್ತೆ ಮತ್ತೆ ಅವರ ಅವಧಿ ವಿಸ್ತರಿಸುತ್ತಾ ಇರುವುದು....ಒಟ್ಟು ಜುಟ್ಟು ತನ್ನ ಕೈಯಲ್ಲಿಯೇ ಇರಬೇಕು. "ಮಂಡಳಿ ಅದರ ಪಾಡಿಗೆ ಕೆಲಸ ಮಾಡಲು ಬಿಡಿ. ವಿನಾಕಾರಣ ಅದರಲ್ಲಿ ತಲೆ ಹಾಕಬೇಡಿ" ಅಂತ ಕೋರ್ಟ್ ಛೀಮಾರಿ ಹಾಕಿದೆ. ಅಯ್ಯೋ ಬಿಡಿ ಸ್ವಾಮಿ ಇದೆಂಥಾ ಛೀಮಾರಿ, ಇನ್ನೂ ಎಂತೆಂಥ ಮಹಾ ಛೀಮಾರಿಗಳನ್ನು ತಾಳಿಕೊಂಡು ಯಡಿಯೂರಪ್ಪನವರು ನಗುನಗುತ್ತ ಗೆಲುವಿನ ಸಂಕೇತವಾಗಿ ಎರಡು ಬೆರಳು ಮೇಲೆತ್ತಿ ತೋರುತ್ತಾ (ಆಗೀಗ ಅಳುತ್ತಾ) ಒಟ್ಟಿನಲ್ಲಿ ನಮ್ಮ ಮಠಾಧೀಶರುಗಳ ಆಶೀರ್ವಾದ ಬಲದಿಂದ ರಾಜ್ಯದಲ್ಲಿ ಬಿಜೆಪಿ ದರ್ಬಾರ್ ಅನ್ನು ಸಾಂಗವಾಗಿ ನಡೆಸುತ್ತಿಲ್ಲವೇ?

ಬಾಲಂಗೋಚಿ

ಈ ಬಿಜೆಪಿ ಸರ್ಕಾರ ನಿಜಕ್ಕೂ ಅಲ್ಪಸಂಖ್ಯಾತರ ಆಶಾಕಿರಣವೇ. ಅಲ್ಪಸಂಖ್ಯಾತರು ಅಂದರೆ ಯಾರು ಸ್ವಾಮಿ? ಗಣಿ ಸಂಪತ್ತನ್ನು ಅಕ್ರಮವಾಗಿ ತೋಡಿಕೊಳ್ಳುವ ಗಣಿ ಉದ್ಯಮದ 'ಗಣ್ಯ'ರು, ಡೊನೇಷನ್ ಲಾಬಿ ನಡೆಸುವ ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಣೋದ್ಯಮಿಗಳು, ಲಿಕ್ಕರ್ ದೊರೆಗಳು, ಭೂಗಳ್ಳ ರಿಯಲ್ ಎಸ್ಟೇಟ್ ದಂಧೆಕೋರರು ಇವರೆಲ್ಲರ ಸಂಖ್ಯೆ ಪರಿಗಣಿಸಿದರೆ ರಾಜ್ಯದ ರೈತರು ಕೂಲಿಕಾರರು, ಬಡವರ ಸಂಖ್ಯೆಗೆ ಹೋಲಿಸಿದರೆ 'ಇವರೆಲ್ಲ ಅಲ್ಪ ಸಂಖ್ಯಾತರೇ ಅಲ್ಲವೇ? ರಾಜ್ಯ ಬಿಜೆಪಿ ಸರ್ಕಾರ ಅಲ್ಪ ಸಂಖ್ಯಾತರ ಆಶಾ ಕಿರಣ!! ಹೌದು ಅಲ್ಲವೇ ? ●

JANASHAKTHI KANNADA VARA PATRIKE JUNE 12, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

'ಸಮುದಾಯ' ಸಂಘಟಿಸಿದ ರಾಜ್ಯ ವ್ಯಾಪಿಯಾದ ಭ್ರಷ್ಟಾಚಾರ ಬೆಲೆ ಏರಿಕೆಗಳ ವಿರುದ್ಧದ ಜಾಗೃತಿ ಜಾಥಾದ ಸಮಾರೋಪ ಸಮಾರಂಭವು

ಇದು ಸಮಾರೋಪವಲ್ಲ ಹೊಸ ಆಂದೋಲನದ ಆರಂಭ ಎಂಬ ನಿರ್ಧಾರದೊಂದಿಗೆ ಯಶಸ್ವಿಯಾಗಿ ನಡೆಯಿತು

ಸಮುದಾಯ


ಜಾಥಾ ಸಮಾರೋಪ

"ಎಲ್ಲಿಂದ ಬಂದಿರೆಂದು ಕೇಳಬಹುದು ನೀವು ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು"

ತುರ್ತು ಪರಿಸ್ಥಿತಿಯ 70ರ ದಶಕದಿಂದಲೂ ಪ್ರಜಾಪ್ರಭುತ್ವ, ಕೋಮು ಸೌಹಾರ್ದತೆ ಉಳಿವಿಗಾಗಿ ಶ್ರಮಜೀವಿಗಳ ಹಕ್ಕುಗಳ ರಕ್ಷಣೆಗಾಗಿ, ನೊಂದವರ ದನಿಯಾಗಿ ತನ್ನದೇ ರೀತಿಯಲ್ಲಿ ಸಾಂಸ್ಕೃತಿಕವಾಗಿ ಸದಾ ಜನರ ನಡುವೆ ತನ್ನ ಕರ್ತವ್ಯ ನಿರ್ವಹಿಸುತ್ತಿರುವ 'ಸಮುದಾಯ' ಪ್ರಸಕ್ತ ಕಾಲಘಟ್ಟದಲ್ಲಿ ಜನತೆಯ ಬದುಕನ್ನು ಅತಂತ್ರದ ಸ್ಥಿತಿಗೆ ದೂಡಿರುವ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ಎಂಬ ಮಹಾ ಮಾರಿಯ ವಿರುದ್ಧ ಹಾಡು, ನಾಟಕ, ಭಿತ್ತಿಪತ್ರ ಪ್ರದರ್ಶನ, ಪುಸ್ತಕ ಮಾರಾಟ, ಕವಿಗೋಷ್ಠಿ, ವಿಚಾರಸಂಕಿರಣ, ಬೀದಿ ಬದಿ ಸಭೆ, ಕರಪತ್ರ ವಿತರಣೆ ಇತ್ಯಾದಿ ಪ್ರಚಾರ ಪ್ರಕ್ಷೋಭೆಗಳ ಮೂಲಕ ಜನತೆಯಲ್ಲಿ ಜಾಗೃತಿ ಮೂಡಿಸುವ ಆ ಮುಖೇನ ಪ್ರತಿರೋಧದ ಜಾಗೃತ ಪ್ರಜ್ಞೆಯನ್ನು ಎಚ್ಚರಗೊಳಿಸುವ ಆಶಯದೊಂದಿಗೆ ಜನ ಜಾಗೃತಿ ಜಾಥಾವನ್ನು ಸಂಘಟಿಸಿತ್ತು.



ರಾಜ್ಯದ ಉದ್ದಗಲಕ್ಕೂ ಸಂಚರಿಸಿದ ಎರಡು ಜಾಥಾಗಳು ಜನತೆಯ ಮನ-ಮನೆಗಳ ತಲುಪಿದ ಆಶಯದ ಯಶಸ್ಸಿನ ಹುಮ್ಮಸ್ಸಿನೊಂದಿಗೆ ಮೇ 28 ರಂದು ಬೆಂಗಳೂರಿನ ಸಂಸ ಬಯಲು ರಂಗಮಂದಿರದಲ್ಲಿ ಸಮಾರೋಪ ಕಂಡವು.







ಮೇ 15 ರಂದು ಗುಲ್ಬರ್ಗಾ ಮತ್ತು ಬೀದರ್‌ಗಳಲ್ಲಿ ಏಕಕಾಲದಲ್ಲಿ ಉದ್ಘಾಟನೆಗೊಂಡ ಎರಡೂ ಜಾಥಾಗಳು 12 ದಿನಗಳ ಕಾಲ ರಾಜ್ಯದ ಮೂಲೆ ಮೂಲೆಗೂ ವಿಚಾರ ಹೊತ್ತೊಯ್ದು, ಹೋರಾಟದ ಕಿಚ್ಚು ಹೆಚ್ಚಿಸುವ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಿ ತನ್ನ ಹಳೆಯ ವೈಭವ ದಿನಗಳ ಮರಳುವಿಕೆಯ ಸೂಚನೆಯನ್ನು ರಾಜ್ಯದ ಸಾಂಸ್ಕೃತಿಕ ಲೋಕಕ್ಕೆ ನೀಡಿದವು. ಇದಕ್ಕೆ ಸಮಾರೋಪದಲ್ಲಿ ನೆರೆದಿದ್ದ ಜನಸ್ತೋಮವೇ ಸಾಕ್ಷಿಯಾಗಿತ್ತು.

ಸಂಜೆಯ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿದ ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಯವರು ರಾಷ್ಟ್ರದ ರಾಜಧಾನಿ ದೆಹಲಿಯನ್ನು ಮೀರಿಸಿ ರಾಜ್ಯ ಭ್ರಷ್ಟಾಚಾರದಲ್ಲಿ ಮುಂದೆ ಹೋಗುತ್ತಿದೆ.



ಭ್ರಷ್ಟಾಚಾರವನ್ನು ಕಾನೂನಿನಿಂದ ಮಾತ್ರವೇ ತಡೆಯಲು ಸಾಧ್ಯವಿಲ್ಲ. ಬದಲಾಗಿ ಜನತೆಯ ಪ್ರತಿರೋಧದಿಂದ ಮಾತ್ರವೇ ತಡೆಯಲು ಸಾಧ್ಯ. ಈ ನಿಟ್ಟಿನಲ್ಲಿ ಯುವಜನರು ಮುಖ್ಯವಾಗಿ ಈ ಆಂದೋಲನದಲ್ಲಿ ಮುಂದೆ ಬರಬೇಕೆಂದು ಕರೆ ನೀಡಿದರು. ಕೇಂದ್ರದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣಕ್ಕೆ ತರಬೇಕಾದ ಜವಾಬ್ದಾರಿ ಹೊತ್ತಿರುವ ಪ್ರಧಾನಿಯವರೇ 'ತಾಳ್ಮೆ'ಯ ಪಾಠ ಹೇಳುತ್ತಿರುವುದು ಆಶ್ಚರ್ಯ ತಂದಿದೆ. ಭ್ರಷ್ಟಾಚಾರವನ್ನು ನೋಡಿಯೂ ಮೌನವಹಿಸುವುದೂ ಕೂಡ ಭ್ರಷ್ಟಾಚಾರ ಮಾಡಿದಷ್ಟೇ ಸರಿಸಮ. ಕೇಂದ್ರದ ಭ್ರಷ್ಟ ಹಗರಣಗಳ ಅಪರಾಧದಲ್ಲಿ ಶೇ.25ರಷ್ಟು ನೇರವಾಗಿ ಪ್ರಧಾನಿಗಳ ಪಾಲು ಇದೆ ಎಂದು ನಾವು ಪರಿಗಣಿಸಬೇಕಾಗುತ್ತದೆ. ಪರೋಕ್ಷವಾಗಿ ಪ್ರಧಾನಿಯವರ ನಿಲುವನ್ನು ಖಂಡಿಸಿದರು.

ವಿಮರ್ಶಕ ಕೆ.ಮರುಳಸಿದ್ದಪ್ಪ ಮಾತನಾಡಿ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣದ ದುಪ್ಪಟ್ಟು ಹಣ ರಾಜ್ಯದ ಮಠ ಹಾಗೂ ಧ್ಯಾನ ಕೇಂದ್ರಗಳಲ್ಲಿ ಸೇರಿಕೊಂಡಿದೆ, ಈ ಬಗ್ಗೆ ಬಹಿರಂಗ ಚರ್ಚೆ ಅಗತ್ಯ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಅಣ್ಣಾಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಪ್ರಸ್ತಾಪಿಸಿ ಹಜಾರೆಯವರ ಸುತ್ತ ಎನ್‌ಜಿಓಗಳು ಸೇರಿಕೊಂಡು ಆಂದೋಲನದ ದಿಕ್ಕು ತಪ್ಪಿಸಲು ಹೊರಟಿವೆ ಎಂದು ಆತಂಕ ವ್ಯಕ್ತಪಡಿಸಿದರು. ಹಜಾರೆಯವರನ್ನು ಭೇಟಿ ಮಾಡಲು ಹೋದ, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ ಯವರನ್ನು ಭೇಟಿಗೆ ಅವಕಾಶ ನಿರಾಕರಿಸುವುದೇ ಇದಕ್ಕೆ ನಿದರ್ಶನ ಎಂದು ಹೇಳಿದರು.

ಚಿಂತಕ ಜಿ.ಕೆ.ಗೋವಿಂದರಾವ್ ಮತ್ತು ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಂ ಮಾತನಾಡಿ, ಸಮುದಾಯದ ಜನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಶ್ಲಾಘಿಸುತ್ತಾ ಸಮುದಾಯ ತನ್ನ ಹೋರಾಟದ ಪರಂಪರೆಯನ್ನು ಮುಂದುವರೆಸಬೇಕೆಂದು ಆಶಯ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಮೌಲ್ಯಗಳು ಕುಸಿತ ಕಾಣುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ದೃತಿಗೆಡದೆ ಭ್ರಷ್ಟಾಚಾರದ ವಿರುದ್ಧ ಆಶಾಭಾವನೆಯಿಂದ ಹೋರಾಟ ನಡೆಸಬೇಕು. ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ನಿವೃತ್ತಿ ನಂತರ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ನೇತೃತ್ವ ನೀಡಬೇಕೆಂದು ವಿನಂತಿಸಿದರು.

ಸಮುದಾಯ ರಾಜ್ಯ ಅಧ್ಯಕ್ಷ ಆರ್.ಕೆ. ಹುಡುಗಿ ಸಮಾರೋಪದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಟಿ.ಸುರೇಂದ್ರರಾವ್ ಪ್ರಸ್ತಾವನೆ ಜೊತೆಗೆ ಸ್ವಾಗತಿಸಿದರು. ವಿಠಲಭಂಡಾರಿ ಕಾರ್ಯಕ್ರಮ ನಿರೂಪಿಸಿದರು. ಡಿ.ಬಿ.ಬಡಿಗೇರ ವಂದಿಸಿದರು. ಕಾರ್ಯಕ್ರಮದ ಮಾತುಗಳ ಮಧ್ಯೆ ಜನ್ನಿ ಹಾಡಿದ ಹಾಡುಗಳು ಕಾರ್ಯಕ್ರಮಕ್ಕೆ ಮೆರುಗು ನೀಡಿದವು. ಇವರಿಗೆ ಜೊಗಿಲ ಸಿದ್ದರಾಜು, ಲಿಂಗರಾಜು ಮತ್ತು ಅನಂತನಾಯಕ್, ಜೋಷಿ ಸಾಥ್ ನೀಡಿದರು. ಮಾಲೂರು ಸಮುದಾಯ ತಂಡ 'ಬೇತಾಳ ಹೇಳಿದ ಕಥೆ' ನಾಟಕ ಪ್ರಸ್ತುತಪಡಿಸಿತು. ಕುವೆಂಪು ರವರ 'ವಿಶ್ವಮಾನವ ಗೀತೆಯೊಂದಿಗೆ ಕಾರ್ಯಕ್ರಮ ಅರ್ಥಪೂರ್ಣವಾಗಿ ಮುಕ್ತಾಯ ಗೊಂಡಿತು. ಸಮರೋಪದ ಸಂದರ್ಭದಲ್ಲಿಯೂ ಸಹ ಬೆಲೆ ಏರಿಕೆ-ಭ್ರಷ್ಟಾಚಾರಗಳ ಕುರಿತ ಅತ್ಯುತ್ತಮ ಮಾಹಿತಿ, ವ್ಯಂಗ್ಯ ಚಿತ್ರಗಳನ್ನೊಳಗೊಂಡ ಪೋಸ್ಟರ್‌ಗಳ ಪ್ರದರ್ಶನವಿತ್ತು. ಪೋಸ್ಟರ್ ಸಿದ್ದಪಡಿಸಿದ ಎನ್.ಕೆ.ವಸಂತರಾಜ್, ಎನ್.ಕೆ.ವೇದರಾಜ್ ಮುಂತಾದವರಿಗೂ ಜಾಥಾಗಳ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಾಯಿತು.

● ಲಿಂಗರಾಜು

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH